ಶ್ರೀ ಕಾಗೋಡು ತಿಮ್ಮಪ್ಪ.—ನಾನು ರೂಲ್ ೩೧೨ರ ಪ್ರಕಾರ ಒಂದು ಸೂಚನೆಯನ್ನು ಕಳಿಸಿದ್ದೆ. ಆರ್. ಕೆ. ಮೂರ್ತಿ ಎನ್ನುವವರನ್ನು ಪೋಲೀಸರು ಬಂಧನದಲ್ಲಿಟ್ಟಿದ್ದಾರೆ. ೨೪ ಗಂಟೆಗಳ ಮೇಲೆ ಯಾರನ್ನೂ ಬಂಧನದಲ್ಲಿಡಲಾಗುವುದಿಲ್ಲ. ಕೋರ್ಟಿನಲ್ಲಿ ಅವರನ್ನು ಪ್ರೊಡ್ಯೂಸ್ ಮಾಡಬೇಕಾಗುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ನಾನು ಕೃಷ್ಣ ಗೋದಾವರಿ ನೀರಿನ ವಿವಾದದ ಬಗ್ಗೆ ಮೈಸೂರು ಸರ್ಕಾರ ನೇಮಿಸಿರತಕ್ಕಂತಹ ವಕೀಲರಿಗೆ ಕೊಟ್ಟ ಹಣದ ಬಗ್ಗೆ ಒಂದು ನೋಟೀಸ ಕಳಿಸಿದ್ದೆ.

ಅಧ್ಯಕ್ಷರು.—ಸರ್ಕಾರದಿಂದ ಉತ್ತರ ಬಂದ ತಕ್ಷಣ ತೆಗೆದುಕೊಳ್ಳೋಣ,

ಶ್ರೀ ಎಂ. ಎಸ್. ಕೃಷ್ಣನ್.—ಈಗ ಪ್ರಶ್ನೆ ಏನೆಂದರೆ, ನಾವು ಶಾರ್ಟ್ ನೋಟೀಸ್ ಮತ್ತು ಕಾಲ್ ಅಟೆನ್‌ಶನ್ ನೋಟೀಸ್ ಕಳಿಸಿ ಹಲವು ದಿವಸಗಳಾದರೂ ಉತ್ತರ ಬರುವುದಿಲ್ಲ. ಇದಕ್ಕೆ ಕಾರಣ ಸರ್ಕಾರದ ಕಡೆಯಿಂದ ಉತ್ತರ ಬರುವುದು ವಿಳಂಬವಾಗುವುದು ಹಾಗೆ ಉತ್ತರ ಕಳಿಸದಿದ್ದರೆ ತಾವು ಅವರಿಗೆ ಎಚ್ಚರಿಕೆಯನ್ನು ಕೊಡಬೇಕು

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮೈಸೂರು ರಾಜ್ಯದ ಹೌಸಿಂಗ್ ಬೋರ್ಡಿನಿಂದ ಸಾಲಗಳನ್ನು ಕೊಟ್ಟು ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯಿತ್ತು. ಅದರ ಬಗ್ಗೆ ಒಂದು ನೋಟೀಸ್ ಕಳಿಸಿದ್ದೆ.

MADAM SPEAKER.—Bill for introduction.

MYSORE AGRICULTURAL LAND (PROHIBITION OF ALIENATION) BILL, 1973
INTRODUCTION

SRI H. N. HUTCHAMASTHY GOWDA (Minister for Revenue).—Madam, I beg to introduce the Mysore Agricultural Land (Prohibition of Alienation) Bill, 1973.

MADAM SPEAKER.—The Mysore Agricultural Land (Prohibition of Alienation) Bill, 1973, is introduced. ***

RENUKA YELLAMMA DEVASTHANA (ADMINISTRATION) BILL, 1973

Motion to consider

SRI N. HUTCHAMASTHY GOWDA (Minister for Revenue).—Madam Speaker, I Beg to move :

> "That the Renuka Yellamma Devasthana (Administration) Bill, 1972, be taken into consideration."

MADAM SPEAKER.—Motion moved ;

> "That the Renuka Yellamma Devasthana (Administration) Bill, 1973, be taken into consideration."

There is an amendment. Hon. member Sri T. R. Shamanna to move his amendment.

*** Bill Appended as annexure to column.

SRI T.R. SHAMANNA (Fort).—Madam, I beg to move :

"That the Renuka Yellamma Devasthana (Administration) Bill, 1973, be circulated for purposes of elucidation of public opinion."

MADAM SPEAKER.—Amendment moved :

"That the Renuka Yellamma Devasthana (Administration) Bill, 1973, be circulated for purposes of elucidation of public opinion."

† ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೆ, ಮೈಸೂರು ರಾಜ್ಯದಲ್ಲಿ ಹಲವಾರು ದೇವಸ್ಥಾನಗಳನ್ನು ಧರ್ಮ ಸಂಸ್ಥೆಗಳು ನಡೆಸುತ್ತಾ ಇವೆ. ಕೆಲವು ಸಂಸ್ಥೆಗಳಲ್ಲಿ ಸಾರ್ವಜನಿಕ ಹಣ ಬಹಳವಾಗಿ ದುರುಪಯೋಗವಾಗುತ್ತಿದೆ ಎನ್ನತಕ್ಕಂತಹ ದೂರು ಆಗಿಂದಾಗ್ಗೆ ಈ ಸಭೆಯಲ್ಲಿ ಪ್ರಸ್ತಾಪವಾಗಿದೆ ಮತ್ತು ಸಾರ್ವಜನಿಕ ವೇದಿಕೆಯಲ್ಲಿಯೂ ಪ್ರಸ್ತಾಪವಾಗಿದೆ. ನಮ್ಮ ಮೈಸೂರು ರಾಜ್ಯದ ಬೆಳಗಾಂ ಜಿಲ್ಲೆಯಲ್ಲಿರುವ ರೇಣುಕಾ ಎಲ್ಲಮ್ಮ ದೇವಸ್ಥಾನದಲ್ಲಿ ಸಹ ಸಾರ್ವಜನಿಕರ ಹಣ ಬಹಳವಾಗಿ ಬಂದು ಸೇರುತ್ತದೆ. ಅದು ಸರಿಯಾದ ರೀತಿಯಲ್ಲಿ ಖರ್ಚಾಗುತ್ತಾ ಇಲ್ಲ ಎನ್ನುತಕ್ಕಂತಹ ದೂರು ಬಂದ ಮೇಲೆ ಇದನ್ನು ಯಾವ ರೀತಿಯಲ್ಲಿ ಪೂರ್ಣ ಹತೋಟಿ ಇಟ್ಟುಕೊಂಡು ತೆಗೆದುಕೊಳ್ಳಬೇಕೆಂದು ಒಂದನೇ ಉದ್ದೇಶ. ಎರಡನೆಯದು ಏನೆಂದರೆ, ಈ ದೇವಸ್ಥಾನದ ಆಡಳಿತ ಎರಡು ಮುಖಗಳಾಗಿವೆ. ಹಿಂದೆ ಕೋರ್ಟಿಗೆ ಹೋಗಿ, ಕೋರ್ಟಿನ ಮುಖಾಂತರ ನೇಮಿಸಲ್ಪಟ್ಟ ಒಂದು ಟ್ರಸ್ಟ್ ಕಮಿಟಿ ಇದೆ, ಎರಡನೆಯದು ಎಲ್ಲಮ್ಮ ಮುನಿಸಿಪಾಲಿಟಿ ಸಬ್ ಕಮಿಟಿ ಇದೆ. ಇವೆರಡು ಸಗಳಿಗೆ ಇವರ ಆಡಳಿತವ್ಯ ಒಳಪಟ್ಟಿದೆ.

3–30 P.M.

ಈ ಎರಡು ಸಂಸ್ಥೆಗಳು ಇದ್ದು ಅಲ್ಲಿ ಆಡಳಿತ ಕ್ರಮವಾಗಿ ಇಲ್ಲದೇ ಇದ್ದುದರಿಂದ ಅದನ್ನು ಸರಿಪಡಿಸಬೇಕು ಎನ್ನುವ ದೃಷ್ಟಿಯಿಂದ ಈ ಮಸೂದಾಕಾನೂನನ್ನು ಈ ಸಭೆಯ ಮುಂದೆ ನಾನು ತಂದಿದ್ದೇನೆ. ಇದರಲ್ಲಿರುವ ಮುಖ್ಯವಾದ ಕೆಲವು ಅಂಶಗಳನ್ನು ಈ ಸಭೆಯ ಮುಂದಿಡುವುದಕ್ಕೆ ನಾನು ಇಷ್ಟಪಡುತ್ತೇನೆ. ಇದರ ಉದ್ದೇಶ ಒಂದು ಮಂಡಲಿಯನ್ನು ರಚಿಸಬೇಕು ಇದರಲ್ಲಿ ಅಧ್ಯಕ್ಷರು ಮತ್ತು ೬ ಜನಗಳಿಗೆ ಮೀರದೆ ಇರುವ ಒಂದು ಮಂಡಲಿಯನ್ನು ರಚಿಸಬೇಕು, ಈ ಮಂಡಲಿಯ ಸದಸ್ಯರು ಹಿಂದೂ ಧರ್ಮವನ್ನು ಆಚರಣೆ ಮಾಡತಕ್ಕವರಾಗಿರಬೇಕು ಮತ್ತು ಈ ಮಂಡಲಿ ಸರ್ಕಾರದಿಂದ ರಚನೆಯಾಗಬೇಕು ಎನ್ನುವುದು ಒಂದು ಮುಖ್ಯ ಅಂಶ. ಅವರ ಅವಧಿ ೩ ವರ್ಷಗಳ ಕಾಲ ಎಂದು ಇದ್ದರೂ ಸಹ ಅವರಿಗೆ ಯಾವುದು ಡಿಸ್‌ಕ್ವಾಲಿಫಿಕೇಷನ್ ಬರುತ್ತದೆ, ಯಾವ ಸಂದರ್ಭದಲ್ಲಿ ಅವರನ್ನು ತೆಗೆದುಹಾಕುವುದು ಇದನ್ನು ಈ ಮಸೂದೆಯಲ್ಲಿ ತಿಳಿಸಿದೆ. ಯಾವುದಾದರೂ ಸ್ಥಾನ ಖಾಲಿ ಬಿದ್ದರ ಸರ್ಕಾರ ಅವರನ್ನು ನೇಮಿಸುವಾಗ ಯಾವ ಕ್ರಮವನ್ನು ಅನುಸರಿಸಲಾಗುತ್ತದೆಯೋ ಅದೇ ಕ್ರಮವನ್ನು ಖಾಲಿ ಬಿದ್ದ ಸ್ಥಾನವನ್ನು ಭರ್ತಿ ಮಾಡುವಾಗಲೂ ಅನುಸರಿಸಲಾಗುತ್ತದೆ. ಮಂಡಲಿಯ ಸಭೆಗಳನ್ನು ಮೀಟಿಂಗ್‌ಗಳನ್ನು ಯಾವ ರೀತಿ ಕರೆಯತಕ್ಕದ್ದು, ಎಷ್ಟು ದಿವಸಗಳಿಗೆ ಒಂದು ಸಭೆಯನ್ನು ಕರೆಯಬೇಕು ಎನ್ನುವುದು ರೂಲ್ಸ್ ಮುಖಾಂತರ ನಿರ್ಧಾರ ಮಾಡಬೇಕೆಂದೂ ಇದರಲ್ಲಿ ನಮೂದಿಸಿದೆ. ಈ ಮಂಡಲಿಯ ಸದಸ್ಯರು ಸಭೆಗಳಿಗೆ ಹಾಜರಾದಾಗ ಪ್ರವಾಸಭತ್ಯವಾಗಲೀ, ದಿನ ಭತ್ಯವಾಗಲೀ ಕೊಡಬೇಕು ಎನ್ನುವ ವಿಷಯದಲ್ಲಿ ನಿಯಮಗಳನ್ನು ರೂಲ್ಸ್ ಮುಖಾಂತರ ಗೊತ್ತು ಮಾಡಬೇಕು ಎಂದು ಇದೆ. ಈ ಮಂಡಲಿಗೆ ಇರತಕ್ಕ ಅಧಿಕಾರ ೧೧ನೇ ಕಲಂನಲ್ಲಿದೆ. ದೇವಸ್ಥಾನದ ಮೇಲ್ವಿಚಾರಣೆ, ದೇವಸ್ಥಾನದ ರಿಪೇರಿ, ಇದನ್ನು ಚೆನ್ನಾಗಿ ನೋಡಿಕೊಂಡು ಹೋಗತಕ್ಕದ್ದು ಅಲ್ಲಿ ನಡೆಯತಕ್ಕ ಕಾರ್ಯಕ್ರಮಗಳು ವರ್ಷದಲ್ಲಿ ನಡೆಯತಕ್ಕ ಕಾರ್ಯಕ್ರಮಗಳನ್ನು ಕ್ರಮವಾಗಿ ನಡೆಸತಕ್ಕದ್ದು ಮತ್ತು ಯಾವರೀತಿ ಶುಲ್ಕಗಳನ್ನು ಹಾಕಬೇಕು, ಅರ್ಚನೆಗಳ ಸಂದರ್ಭದಲ್ಲಿ ಹೇಗೆ ಅವುಗಳನ್ನು ನಿರ್ಧರಿಸತಕ್ಕದ್ದು ಇದೆಲ್ಲಾ ಮಂಡಲಿಗೆ ಇರತಕ್ಕ ಅಧಿಕಾರ. ಈ ಮಂಡಲಿಯಲ್ಲಿ ಕೆಲಸ ಮಾಡತಕ್ಕ ಮುಖ್ಯ ಅಧಿಕಾರಿಗಳು : ಒಬ್ಬ ಎಗ್ಜಿಕ್ಯುಟೀವ್ ಆಡಳಿತಾಧಿಕಾರಿಯನ್ನು ನೇಮಿಸತಕ್ಕದ್ದು ಸರ್ಕಾರದ ಅಧಿಕಾರದಲ್ಲಿರುತ್ತದೆ. ಮತ್ತು ಈ ಎಗ್ಜಿಕ್ಯುಟೀವ್ ಆಫೀಸರು ಹಿಂದೂ ಧರ್ಮವನ್ನು ಆಚರಣೆ ಮಾಡತಕ್ಕವರಾಗಿರಬೇಕು. ಅವರು ಹಿಂದೂ ಧರ್ಮವನ್ನು ಯಾವಾಗ ಆಚರಣೆ ಮಾಡುವುದಿಲ್ಲ. ಅಂಥಾ ಸಂದರ್ಭದಲ್ಲಿ ಅವರನ್ನು ತೆಗೆದುಹಾಕುವುದಕ್ಕೆ ಅವಕಾಶ ಇರಬೇಕು. ಎಂದು ಇದರಲ್ಲಿ ನಮೂದು ಮಾಡಿದೆ. ಈ ಎಗ್ಜಿಕ್ಯುಟಿವ್ ಆಫೀಸರಿಗೆ ಏನೇನು ಅಧಿಕಾರ ಇರಬೇಕು ಎನ್ನುವುದನ್ನು ಕೂಡ ೧೩ನೇ ಕಲಂನಲ್ಲಿ ಸ್ಪಷ್ಟವಾಗಿ ತಿಳಿಸಿದೆ.

ದೇವಸ್ಥಾನದ ಮೇಲ್ವಿಚಾರಣೆ ಮತ್ತು ಅಲ್ಲಿರತಕ್ಕ ಆಸ್ತಿಯಾಗಲೀ, ಕಾಗದ ಪತ್ರವಾಗಲೀ ಒಡವೆಗಳಾಗಲೆ, ಹಣವಾಗಲೀ ಇವುಗಳನ್ನು ಎಚ್ಚರಿಕೆಯಿಂದ ಕಾದು ನೋಡತಕ್ಕ ಜವಾಬ್ದಾರಿ ಈ ಅಧಿಕಾರಿಗೆ ಇದೆ. ದೇವಸ್ಥಾನಕ್ಕೆ ಬರತಕ್ಕ ವರಮಾನ ಮತ್ತು ಖರ್ಚು ಇವುಗಳನ್ನು ಯಾವ ರೀತಿ ವ್ಯವಸ್ಥೆ ಮಾಡಬೇಕು ಎನ್ನುವ ಅಧಿಕಾರ ಈ ಎಗ್ಜಿಕ್ಯುಟಿವ್ ಆಫೀಸರಿಗೆ ಇದೆ. ಇದಕ್ಕೆ ಬೇಕಾದ ನೌಕರರನ್ನು ನೇಮಿಸತಕ್ಕ ಅಧಿಕಾರವಾಗಲೀ, ಪೂಜಾರಿಗಳನ್ನು ನೇಮಿಸುವುದಾಗಲೀ ಇದನ್ನು ಯಾವರೀತಿ ಮಾಡಬೇಕು ಎನ್ನುವುದನ್ನು ರೂಲ್ಸ್ ಮಾಡುವ ಮುಖಾಂತರ ಮಾಡಬೇಕು ಎಂದು ಇದರಲ್ಲಿ ತಿಳಿಸಿದೆ. ಈ ಬೋರ್ಡನ್ನು ವಿಶೇಷ ಸಂದರ್ಭ ಬಂದಾಗ ಡಿಜಾಲ್ವ್ ಮಾಡುವ ಅಧಿಕಾರ ಸರ್ಕಾರಕ್ಕೆ ಇದೆ. ಆಡಳಿತಾಧಿಕಾರಿಯನ್ನು ನೇಮಿಸುವುದರ ಜೊತೆಗೆ ಸರ್ಕಾರದ ಮಟ್ಟದಲ್ಲಿರತಕ್ಕ ಕಮಿಷನರಿಗೆ ಏನು ಅಧಿಕಾರ ಇರಬೇಕು ಎನ್ನುವುದನ್ನು ಇದರಲ್ಲಿ ಸ್ಪಷ್ಟ ಮಾಡಿದೆ. ಯಾವುದೇ ಸಂದರ್ಭದಲ್ಲಾಗಲೀ ಅಲ್ಲಿರತಕ್ಕ ಕಾಗದಪತ್ರಗಳನ್ನು ನೋಡುವುದಾಗಲೀ ಮಂಡಲಿಯವರು ನಡೆಸತಕ್ಕ ಕೆಲಸ ಕಾರ್ಯಗಳನ್ನು ಮೇಲ್ವಿಚಾರಣೆ ನಡೆಸುವುದಕ್ಕಾಗಲೀ ಕಮಿಷನರಿಗೆ ಅಧಿಕಾರ ಇರಬೇಕು. ಮಂಡಲಿಯ ತೀರ್ಮಾನಗಳನ್ನು ಬದಲಾವಣೆ ಮಾಡುವುದಕ್ಕಾಗಲೀ ಅದನ್ನು ಒಪ್ಪುವುದಕ್ಕಾಗಲೀ, ಅಥವಾ ಒಪ್ಪದೇ ಇರುವುದಕ್ಕಾಗಲೀ ಕಮಿಷನರಿಗೆ ಅಧಿಕಾರ ಇದೆ. ಕಮಿಷನರು ಬೋರ್ಡಿನಲ್ಲಿ ನಡೆಯತಕ್ಕ ವಿಷಯಗಳನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ ಆಡಳಿತಾಧಿಕಾರಿಗಾಗಲೀ, ಅಥವಾ ಅದಕ್ಕೆ ಸಂಬಂಧಪಟ್ಟವರಿಗಾಗಲೀ ಸಾಕಷ್ಟು ಅವಕಾಶವನ್ನು ಕೊಟ್ಟು ವಿಚಾರಣೆ ನಡೆಸಬೇಕು ಎಂದು ಇದರಲ್ಲಿ ತಿಳಿಸಿದೆ. ಮುಖ್ಯವಾಗಿ ಈ ಸಂಸ್ಥೆಯ ಪೂರ್ಣವಾದ ಮೇಲ್ವಿಚಾರಣೆಯ ಹತೋಟಿ ಕಮಿಷನರಿಗೆ ಸಂಬಂಧಪಟ್ಟದ್ದು. ಕಮಿಷನರು ಯಾವುದೇ ಹುಕುಂ ಕೊಟ್ಟಾಗ ಅದನ್ನು ಪಾಲಿಸತಕ್ಕದ್ದು ಎಗ್ಜಿಕ್ಯುಟೀವ್ ಆಫೀಸರಿಗೆ ಸೇರಿಸತಕ್ಕದ್ದು. ಕಮಿಷನರು ಯಾವುದೇ ಸಂದರ್ಭದಲ್ಲಾಗಲೀ ಅನಿರೀಕ್ಷಿತವಾಗಿಯಾಗಲೀ ತಿಳುವಳಿಕೆ ಕೊಟ್ಟಾಗಲೀ ಆ ಸಂಸ್ಥೆಗೆ ಭೇಟಿಕೊಟ್ಟು ಅಲ್ಲಿ ನಡೆಯತಕ್ಕ ವಿದ್ಯಮಾನಗಳನ್ನು ಪೂರ್ಣವಾಗಿ ಪರಿಶೀಲನೆಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಕಮಿಷನರಿಗೆ ಅಧಿಕಾರ ಇದೆ. ದೇವಸ್ಥಾನಕ್ಕೆ ಬರತಕ್ಕ ವರಮಾನದಲ್ಲಿ ಶೇಕಡ ೮ ರಷ್ಟು ಸರ್ಕಾರಕ್ಕೆ ಕೊಡಬೇಕು ಎಂದು ಇದೆ, ಅದನ್ನು ನಿವ್ವಳ ಉತ್ಪತ್ತಿಯಲ್ಲಿ ಅಥವಾ ಗ್ರಾಸ್ ಇನ್‌ಕಂನಲ್ಲಿ ಕೊಡಬೇಕೆ ಎನ್ನುವುದನ್ನು ಲೆಕ್ಕಾಚಾರ ಹಾಕಬೇಕಾದರೆ ಅದನ್ನೂ ಕೂಡ ನಿಯಮವನ್ನು ರಚನೆಮಾಡಿ ನಿಯಮದಲ್ಲಿ ಅದನ್ನು ಸ್ಪಷ್ಟ ಮಾಡಬೇಕು ಎಂದು ಇದೆ. ಪ್ರತಿ ವರ್ಷವೂ ಲೆಕ್ಕಪತ್ರವನ್ನು ಆಡಿಟ್ ಮಾಡಿಸಬೇಕು. ಆಡಿಟ್ ಸರಿಯಾಗಿದೆಯೆ ಅಥವಾ ಇಲ್ಲವೇ ಎನ್ನುವುದನ್ನು ಪೂರ್ಣವಾಗಿ ಪರಿಶೀಲನೆ ಮಾಡತಕ್ಕ ಅಧಿಕಾರ ಮತ್ತು ಅದರಮೇಲೆ ಕ್ರಮ ತೆಗೆದುಕೊಳ್ಳತಕ್ಕ ಅಧಿಕಾರ ಕಮಿಷನರಿಗೆ ಇರಬೇಕು ಎಂದು ಇದೆ. ಸೌಂದತ್ತಿ ಮುನಿಸಿಪಾಲಿಟಿಗೆ ಸಂಬಂಧಪಟ್ಟ ಎಗ್ಸಿಕ್ಯೂಟಿವ್ ಆಫೀಸರಿಗಾಗಲೀ ಅಲ್ಲಿ ಆಡಳಿತವನ್ನು ನಡೆಸತಕ್ಕ ಮುನಿಸಿಪಾಲಿಟಿಯ ಆಡಳಿತ ಅಧಿಕಾರಿಯಾಗಲಿ ಅಥವ ಮುನಿಸಿಪಾಲಿಟಿಯ ಕಮಿಷನರಾಗಲೀ ಈ ಮುನಿಸಿಪಾಲಿಟಿಗೆ ಸಂಬಂಧಪಟ್ಟ ಹಾಗೆ ಈ ದೇವಸ್ಥಾನಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಏನು ಅಧಿಕಾರ ಇರುತ್ತದೆ ಆ ಅಧಿಕಾರ ಈ ದೇವಸ್ಥಾನದ ಆಡಳಿತಾಧಿಕಾರಿಗೆ ಇರಬೇಕು ಎಂದು ಇದರಲ್ಲಿ ನಮೂದಿಸಿದೆ. ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟ ಹಾಗೆ ಈ ದೇವಸ್ಥಾನದ ಮೇಲ್ವಿಚಾರಣಾಧಿಕಾರಿ ಏನಿದೆಯೋ ಆ ಅಧಿಕಾರ ಈ ದೇವಸ್ಥಾನದ ಆಡಳಿತಾಧಿಕಾರಿಗೆ ಇರಬೇಕು ಎಂದು ಇದರಲ್ಲಿ ನಮೂದಿಸಿದೆ. ಈ ದೇವಸ್ಥಾನದ ಹಣವನ್ನು ಯಾವರೀತಿ ಉಪಯೋಗಿಸಬೇಕು ಎನ್ನುವುದನ್ನು ೨೫ನೇ ಕಲಂನಲ್ಲಿ ಸ್ಪಷ್ಟವಾಗಿ ತಿಳಿಸಿದೆ. ದೇವಸ್ಥಾನದ ಜೀರ್ಣೋದ್ಧಾರವನ್ನಾಗಲೀ ಇದರ ಆಡಳಿತವನ್ನು ನಡೆಸುವುದಕ್ಕಾಗಲೀ ಹಣವನ್ನು ಖರ್ಚು ಮಾಡುವುದಕ್ಕಾಗಲೀ ಅವಕಾಶ ಇದೆ. ಆಸ್ಪತ್ರೆಗಳನ್ನು ಕಟ್ಟಿಸುವುದಕ್ಕೆ ಅಲ್ಲಿಗೆ ಬರತಕ್ಕ ಯಾತ್ರಾರ್ಥಿಗಳಿಗೆ ಸೌಕರ್ಯವನ್ನು ಕಲ್ಪಿಸುವುದಕ್ಕೆ ವಿದ್ಯಾ ಸಂಸ್ಥೆಯನ್ನು ನಡೆಸುವುದಕ್ಕೆ ಅಲ್ಲಿ ಛತ್ರ ವಗೈರೆಗಳನ್ನು ಕಟ್ಟಿಸುವುದಕ್ಕೆ ಹಾಲಿನ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ರಸ್ತೆ ವಗೈರೆಗಳನ್ನು ಮಾಡಿಸುವುದಕ್ಕೆ ಸಾಲಾಬಾದ್ ಕಾಮಗಾರಿಗಳನ್ನು ನಡೆಸುವುದಕ್ಕೆ ಹೊಸರಸ್ತೆಗಳನ್ನು ಮಾಡಿಸುವುದಕ್ಕೆ ಅಲ್ಲಿ ಅರ್ಚಕರಿಗೆ ಶಿಕ್ಷಣವನ್ನು ಕೊಡುವುದಕ್ಕೆ ಅವಕಾಶ ಇದೆ. ಇದಲ್ಲದೆ ಇನ್ನೂ ಯಾವುಯಾವುದಕ್ಕೆ ಹಣ ಖರ್ಚು ಮಾಡಬಹುದು ಎಂಬುದು ಸರ್ಕಾರಕ್ಕೆ ಖಚಿತವಾದಮೇಲೆ ಅದರ ಪ್ರಕಾರ ಹಣವನ್ನು ಖರ್ಚುಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ. ಉಳಿದ ಕೆಲವುಬಾಬುಗಳಿಗೆ ಹಣ ಖರ್ಚುಮಾಡಬಹುದು ಎಂಬುದರಲ್ಲಿ ಸ್ಕೂಲುಗಳು ಮತ್ತು ಕಾಲೇಜುಗಳು ಸಹ ಸೇರುತ್ತವೆ, ಯಾವ ಯಾವ ಬಾಬುಗಳಿಗೆ ಹಣ ಖರ್ಚುಮಾಡಬಹುದೆಂಬ ಅಂಶಗಳನ್ನು ೨೫ ಮತ್ತು ೨೬ನೇ ಕ್ಲಾಜ್‌ಗಳಲ್ಲಿ ನಮೂದು ಮಾಡಲಾಗಿದೆ. ಈ ದೇವಸ್ಥಾನದಿಂದ ಎಷ್ಟು ಆದಾಯ ಬರುತ್ತದೆ, ಅದನ್ನು ಯಾವ ಯಾವ ಬಾಬುಗಳಿಗೆ ಖರ್ಚು ಮಾಡಬಹುದು ಎಂಬ ಬಗ್ಗೆ ಬಜೆಟನ್ನು ಆಡಳಿತ ಮಂಡಲಿಯವರು ತಯಾರು ಮಾಡಿದಮೇಲೆ ಆಡಳಿತ ಮಂಡಲಿಯ ಅಭಿಪ್ರಾಯವನ್ನು ಕಮಿಷನರ್‌ರವರಿಗೆ ಕಳಿಸಿಕೊಡಬೇಕು. ಕಮಿಷನರ ಅವರ ಒಪ್ಪಿಗೆ ಪಡೆದಮೇಲೆ ಮುಂದಿನ ಕಾರ್ಯಕ್ರಮ ಕೈಕೊಳ್ಳಬೇಕೆಂಬುದು ೨೬ನೇ ಕಲಂನಲ್ಲಿ ಹೇಳಿದೆ. ಈ ದೇವಸ್ಥಾನದ ಆಸ್ತಿ, ಒಡವೆ ಮತ್ತು ವಸ್ತುಗಳು ಏನಿವೆ ಅವುಗಳ ಪೂರಾ ರಕ್ಷಣೆ ಮಾಡತಕ್ಕದ್ದು ಮತ್ತು ನೋಡಿಕೊಳ್ಳತಕ್ಕ ಪೂರ್ಣ ಜವಾಬ್ದಾರಿ ಆಡಳಿತಾಧಿಕಾರಿಯವರಿಗೆ ಇರ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಬೇಕು ಎಂಬುದನ್ನು ಸಹ ಸ್ಪಷ್ಟಪಡಿಸಲಾಗಿದೆ. ಈ ವಿಚಾರದಲ್ಲಿ ಭಕ್ತಾದಿಗಳದ್ದು ಏನಾದರೂ ಅಸಮಾಧಾನವಿದ್ದರೆ ಅದನ್ನು ಆಡಳಿತಾಧಿಕಾರಿಯವರ ಮತ್ತು ಕಮೀಷನರ್ ಅವರ ಗಮನಕ್ಕೆ ತರುವುದಕ್ಕೆ ಕೂಡ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದರ ಮೇಲೆ ಸರ್ಕಾರಕ್ಕೆ ರಿವಿಷನ್ ಪವರ್ಸ್ ಇದೆ. ಈ ರೀತಿ ರಿವಿಷನ್ ಪವರ್ಸ್ ಸರ್ಕಾರಕ್ಕೆ ಇರುವುದರಿಂದ ಸರ್ಕಾರದವರು ವಿಚಾರಣೆ ಮಾಡಿ ಸೂಕ್ತವಾದ ಬದಲಾವಣೆ ಮಾಡುವುದಕ್ಕೆ ಅವಕಾಶವಿದೆ. ಮತ್ತು ಆಡಳಿತ ಮಂಡಲಿಯವರಾಗಲೀ ಎಕ್ಸಿಕ್ಯೂಟಿವ್ ಆಫೀಸರ್ ಅವರಾಗಲೀ ಯಾವುದೇ ವ್ಯವಹಾರದ ಬಗ್ಗೆಯಾಗಲಿ ಸಂಬಂಧಪಟ್ಟವರ ಜೊತೆಯಲ್ಲಿ ರಾಜಿ ಮಾಡಿಕೊಳ್ಳುವುದಕ್ಕಾಗಿಯಾಗಲೀ ಅಥವಾ ಮಂಜೂರಾತಿ ಮಾಡುವುದಕ್ಕಾಗಲೀ ಕಮೀಷನರ್ ಅವರ ಒಪ್ಪಿಗೆ ಇಲ್ಲದೆ ಮಾಡುವುದಕ್ಕೆ ಅವಕಾಶವಿಲ್ಲ. ಅಲ್ಲದೆ ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಖರ್ಚು ಮಾಡಬೇಕು ಎಂಬುದನ್ನು ಬೋರ್ಡಿನವರು ತೀರ್ಮಾನ ಮಾಡಿ ಅದರ ವರದಿಯನ್ನು ಕಮೀಷನರ್ ಅವರಿಗೆ ಕಳಿಸಿಕೊಟ್ಟು ಅವರ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕು. ಈ ದೇವಸ್ಥಾನಕ್ಕೆ ಸೇರಿದ ಆಸ್ತಿಯಾಗಲೀ ಒಡವೆಗಳಾಗಲೀ ಅವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವಾಗ ತಕರಾರು ಮಾಡುವವರ ಮೇಲೆ ಯಾವ ರೀತಿ ಕಾರ್ಯಕ್ರಮ ಕೈಗೊಳ್ಳಬೇಕು ಯಾರು ಕೈಕೊಳ್ಳಬೇಕು ಎಂಬುದನ್ನು ೪೧ನೇ ಕಲಂನಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ದುಡ್ಡನ್ನು ಸಾಲಾ ಕೊಡುವುದಕ್ಕಾಗಲೀ, ಅಥವಾ ಸಾಲಾ ಪಡೆಯುವುದಕ್ಕಾಗಲಿ ಬೋರ್ಡಿನವರಿಗೆ ಮತ್ತು ಎಕ್ಸಿಕ್ಯೂಟಿವ್ ಆಫೀಸರಿಗೆ ಅವಕಾಶವಿಲ್ಲ. ಆದರೆ ಕಮೀಷನರ್ ಅವರ ಒಪ್ಪಿಗೆ ಪಡೆದು ಮಾಡಬಹುದೆಂದು ಇದರಲ್ಲಿ ಸ್ಪಷ್ಟಪಡಿಸಲಾಗಿದೆ. ದೇವಸ್ಥಾನದ ತೀರ್ಥ ಮತ್ತು ಪ್ರಸಾದಗಳನ್ನು ವಿನಿಯೋಗ ಮಾಡುವಾಗ ಜಾತಿಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳದೆ ಎಲ್ಲಾ ಜಾತಿಯವರನ್ನು ಸರಿಸಮಾನವಾಗಿ ಕಂಡು ವಿನಿಯೋಗ ಮಾಡುವ ವ್ಯವಸ್ಥೆಯಾಗಬೇಕೆಂದು ಇದರಲ್ಲಿ ತಿಳಿಸಲಾಗಿದೆ. ಇಲ್ಲಿಯ ಆಡಳಿತವನ್ನು ಯಾವ ರೀತಿ ಹತೋಟಿಯಲ್ಲಿಟ್ಟುಕೊಳ್ಳಬೇಕು ಮತ್ತು ವ್ಯತ್ಯಾಸವಾಗದಂತೆ ನೋಡಿಕೊಳ್ಳಬೇಕು ಎಂಬುದನ್ನೆಲ್ಲಾ ಈ ಮಸೂದಾ ಕಾನೂನಿನಲ್ಲಿ ಅಳವಡಿಸಲಾಗಿದೆ. ಈ ದೇವಸ್ಥಾನದ ಆಡಳಿತ ನೋಡಿಕೊಳ್ಳಲು ಸರ್ಕಾರದ ಖರ್ಚಿನಿಂದ ಆಡಳಿತಾಧಿಕಾರಿಯವರನ್ನು ನೇಮಕ ಮಾಡಬೇಕಾಗಿದೆ. ಇದೊಂದು ಖರ್ಚನ್ನು ಬಿಟ್ಟರೆ ಉಳಿದ ಯಾವ ಖರ್ಚಿಗೂ ಸರ್ಕಾರದವರನ್ನು ಅವಲಂಬಿಸಬೇಕಾದ ಅಗತ್ಯವಿಲ್ಲ. ಎಲ್ಲಾ ಖರ್ಚನ್ನೂ ಕೂಡ ದೇವಸ್ಥಾನದ ಫಂಡಿನಿಂದಲೇ ನಿರ್ವಹಿಸಬೇಕೆಂದು ಇದರಲ್ಲಿ ಹೇಳಲಾಗಿದೆ. ಇದು ಸಾರ್ವಜನಿಕರ ಗಮನವನ್ನು ಸೆಳೆದ ಒಂದು ಬಹುಮುಖ್ಯವಾದ ವಿಚಾರವಾದ್ದರಿಂದ ಮತ್ತು ಕೆಲವರು ಅಕ್ರಮಗಳು ಇಲ್ಲಿ ನಡೆಯುತ್ತಿದ್ದರಿಂದ ಅದನ್ನು ಸರಿಪಡಿಸಬೇಕೆಂಬ ಉದ್ದೇಶದಿಂದ ಈ ಬಿಲ್ಲನ್ನು ತರಲಾಯಿತು ಮುಖ್ಯವಾಗಿ ಈ ಸಭೆಯ ಒಪ್ಪಿಗೆಯನ್ನು ಪಡೆದು ನಂತರ ಆಡಳಿತವನ್ನು ವಹಿಸಿಕೊಳ್ಳಬೇಕೆಂಬ ಉದ್ದೇಶದಿಂದ ಈ ಬಿಲ್ಲನ್ನು ತರಲಾಗಿದೆ. ಆದಕಾರಣ ಇದಕ್ಕೆ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ದಿನ ತಂದಿರುವ ಮಸೂದೆಯಲ್ಲಿರುವ ಬೇರೆ ಬೇರೆ ಕಲಂಗಳ ಬಗ್ಗೆ ತಮ್ಮ ವಿವರಗಳನ್ನು ಕೊಟ್ಟಿದ್ದಾರೆ. ಆದರೆ ನಾನು ರೂಲ್ಸ್ ಆಫ್ ಪ್ರೊಸೀಜರ್‌ನ ೭೨ನೇ ಕಾಲಂ ಪ್ರಕಾರ ಒಂದು ನಿರ್ಣಯವನ್ನು ಈ ಮಸೂದೆಯ ಬಗ್ಗೆ ಕಳಿಸಿಕೊಟ್ಟಿದ್ದೇನೆ. ಅದು ಈ ರೀತಿ ಇದೆ.

"The Renuka Yellamma Devasthana (Administration) Bill, 1973 be circulated for the purposes of eliciting public opinion before 31st October 1973"

ನಾನು ಈ ಮಸೂದೆಗೆ ವಿರೋಧವೇನೂ ಇಲ್ಲ. ಆದರೂ ಸಹ ಸಾರ್ವಜನಿಕರ ಅಭಿಪ್ರಾಯವನ್ನು ಯಾವ ಕಾರಣಕ್ಕಾಗಿ ಪಡೆಯಬೇಕೆಂದರೆ, ಉತ್ತರ ಕರ್ನಾಟಕದಲ್ಲಿ ಎಲ್ಲ ಕೋಮಿನ, ಎಲ್ಲ ಪಂಗಡದ ಜನರನ್ನು ಆಕರ್ಷಿಸುವ ಅತಿ ಮುಖ್ಯವಾದ ದೇವಸ್ಥಾನಗಳ ಪೈಕಿ ಇದು ಒಂದಾಗಿದೆ. ನಾನು ಸಹ ಈ ದೇವಸ್ಥಾನಕ್ಕೆ ಎರಡು ಮೂರು ಸಲ ಹೋಗಿ ಬಂದಿದ್ದೇನೆ. ಮತ್ತು ಅಲ್ಲಿಯ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಿದ್ದೇನೆ. ಬಹಳ ಪುರಾತನ ಕಾಲದಿಂದಲೂ ಲಕ್ಷಾಂತರ ಮಂದಿ ಭಕ್ತಾದಿಗಳನ್ನು ಈ ದೇವಸ್ಥಾನ ಆಕರ್ಷಣೆ ಮಾಡುತ್ತಿರುವುದರಿಂದ, ಇದು ಭಕ್ತಾದಿಗಳಿಗೆ ಸಂಬಂಧಪಟ್ಟ ವಿಚಾರವಾಗುತ್ತದೆ. ಈ ಕಾರಣದಿಂದ ಈ ಕಾನೂನನ್ನು ಜಾರಿಗೆ ತರುವುದಕ್ಕೆ ಮುಂಚೆ ಆ ಭಕ್ತಾದಿಗಳ ಅಭಿಪ್ರಾಯವನ್ನು ಪಡೆಯುವುದು ಅತಿ ಮುಖ್ಯವಾದುದು. ಸಾರ್ವಜನಿಕರ ಅಭಿಪ್ರಾಯಕ್ಕೆ ಇದನ್ನು ಏತಕ್ಕೆ ಕಳಿಸಬೇಕು ಎಂಬುದಕ್ಕೆ ಎರಡನೇ ಕಾರಣವೆಂದರೆ, ಈ ಸರ್ಕಾರದ ಕಣ್ಣು ಕೇವಲ ಈ ರೇಣುಕ ಎಲ್ಲಮ್ಮ ದೇವಸ್ಥಾನದ ಮೇಲೆ ಏತಕ್ಕೆ ಹೋಯಿತು ? ಧರ್ಮಸ್ಥಳ, ಗೋಕರ್ಣ ಕ್ಷೇತ್ರಗಳಲ್ಲಿ ಇದಕ್ಕಿಂತ ಹೆಚ್ಚಿನ

ಹಣವನ್ನು ಸಾರ್ವಜನಿಕರಿಂದ ಪಡೆದು ಸ್ವೇಚ್ಛೆಯಾಗಿ ಖರ್ಚು ಮಾಡುತ್ತಿರುವುದರಿಂದ, ಈ ಎಲ್ಲ ಸಂಸ್ಥೆಗಳನ್ನು ಸೇರಿಸಿ ಒಂದು ಸಮಗ್ರವಾದ ಮಸೂದೆಯನ್ನು ತರುವುದನ್ನು ಬಿಟ್ಟು ಈ ಒಂದು ದೇವಸ್ಥಾನಕ್ಕೆ ಮಾತ್ರ ಏತಕ್ಕೆ ತೆಗೆದುಕೊಂಡು ಬಂದರು ? ಈ ಒಂದು ಸಂದೇಹ ನನಗೆ ಬಂದಿದ್ದರಿಂದ ಇದನ್ನು ಸಾರ್ವಜನಿಕರ ಅಭಿಪ್ರಾಯಕ್ಕೆ ಕಳಿಸಿ ಅವರ ಅಭಿಪ್ರಾಯ ಪಡಬೇಕು ಎಂಬುದು ಇನ್ನೊಂದು ವಿಚಾರ. ಮತ್ತೊಂದು ವಿಚಾರ ಇಲ್ಲಿ ಹೇಳಬೇಕಾಗಿದೆ. ನಮ್ಮ ಸರ್ಕಾರಕ್ಕೆ ಬರೀ ಹಿಂದುಗಳ ಮೇಲೆ ಏಕೆ ಕಣ್ಣು. ಇತರ ಜನಾಂಗಗಳವರ ಮೇಲೆ ಏಕೆ ಕಣ್ಣು ಬೀಳುತ್ತಿಲ್ಲ ? ಬೆಂಗಳೂರಿನಲ್ಲಿರುವ ಚಿಕ್ಕ ಪೇಟೆಯಲ್ಲಿ ಒಂದು ಜೈನರ ದೇವಸ್ಥಾನವಿದೆ. ಇಲ್ಲಿರುವ ಜೈನರೆಲ್ಲರೂ ಇಲ್ಲಿ ಕೋಟಿಗಟ್ಟಲೇ ವ್ಯವಹಾರ ಮಾಡುತ್ತಿರುತ್ತಾರೆ. ಇಲ್ಲಿರುವ ಈ ಒಂದು ಜೈನರ ದೇವಸ್ಥಾನದಲ್ಲೇ ಒಂದು ಕೋಟಿ ರೂಪಾಯಿಯ ವ್ಯವಹಾರಗಳು ಆಗುತ್ತಿವೆ, ಇದರಲ್ಲಿ ಇನ್ನೊಂದು ವಿಶೇಷ ಏನೆಂದರೆ ಈ ದೇವಸ್ಥಾನದಲ್ಲಿರುವ ಮಾರವಾಡಿಗಳು ಅವರ ಜನರಲ್ಲಿ ಯಾರಾದರೂ ಕೆಟ್ಟು ನಿರ್ಗತಿಕರಾಗುವ ಸಂದರ್ಭ ಬಂದಾಗ ಅವರಿಗೆ ಶೇಕಡಾ ಅರ್ಧ ಪರ್ಸೆಂಟಿನ ಮೇಲೆ ಸಾಲ ಕೊಟ್ಟು ಅವರು ಮುಂದಕ್ಕೆ ಬರಲು ಸಹಾಯ ಮಾಡುತ್ತಿದ್ದಾರೆ. ಮತ್ತು ಎಲ್ಲ ಕಪ್ಪು ಹಣದ ವ್ಯವಹಾರಗಳೂ ಇಲ್ಲೇ ಆಗುತ್ತಿರುತ್ತವೆ. ಇದರ ಕಡೆಗೆ ನಮ್ಮ ಮಂತ್ರಿಗಳ ಕಣ್ಣು ಏಕೆ ಬೀಳಲಿಲ್ಲ ? ಇಂತಹ ದೊಡ್ಡ ಹಣದ ವ್ಯವಹಾರವುಳ್ಳ ದೇವಸ್ಥಾನದ ಬಗ್ಗೆ ಏನೂ ಸರಕಾರ ಗಮನ ಕೊಡಲಿಲ್ಲ. ಇದರ ಜೊತೆಗೆ ಹಿಂದೆ ಮುಸ್ಲಿಂ ಪರ್ಸನಲ್ ಲಾ ಬಂದಿತ್ತು. ಇದರಲ್ಲಿ ಮುಸ್ಲಿಮರ ಬಗ್ಗೆ ಯಾರೂ ಕೈ ಹಾಕಬಾರದು ಎಂದು ಹೇಳಿದರು. ಇಂತಹ ಒಂದು ಮುಸ್ಲಿಮರ ಮೀಟಿಂಗಿನಲ್ಲಿ ನಾನು ಅಧ್ಯಕ್ಷನಾಗಿ ಕೆಲಸ ಮಾಡಿದಾಗ ಅಲ್ಲಿ ಮುಸ್ಲಿಮರ ಬಗ್ಗೆ ಈ ರೀತಿ ಕಾನೂನು ಮಾಡಬಾರದು ಎಂದು ಹೇಳಿದಾಗ ತಕ್ಷಣ ಇದನ್ನು ಸರಕಾರ ಕೈ ಬಿಟ್ಟಿತು. ಇದೇ ರೀತಿ ಕ್ರೈಸ್ತರು ಇದ್ದಾರೆ. ನಮ್ಮ ಬೆಂಗಳೂರು ಸುತ್ತಮುತ್ತಲೂ ನಾವು ನೋಡಬಹುದು ಬಹಳ ದೊಡ್ಡ ಜಾಗಗಳನ್ನು ಆಕ್ರಮಿಸಿಕೊಂಡು ಇವರೆಲ್ಲ ಚರ್ಚುಗಳನ್ನು ಕಟ್ಟಿರುತ್ತಾರೆ ಮತ್ತು ಇವರ ಮಿಷಿನರಿಗಳೇ ಇಲ್ಲಿ ಬೇಕಾದಷ್ಟು ಜನರಿದಾರೆ, ಇದರಂತೆ ಮುಸ್ಲಿಮರು ಮಸೀದಿಗಳನ್ನು ಕಟ್ಟಿದ್ದಾರೆ, ಹಾಗೂ ಪಾರ್ಸಿ ಜನರಿದ್ದಾರೆ ಹಾಗೂ ಇನ್ನಿತರ ಜನರೂ ಇದ್ದಾರೆ, ಇವರೆಲ್ಲರ ವಿಚಾರಗಳನ್ನು ಕ್ರಮವಾಗಿ ತಿಳಿದು ಕೊಳ್ಳದೇ ಬರಿ ಹಿಂದುಗಳ ಮೇಲೆ ಏಕೆ ನಮ್ಮ ಮಂತ್ರಿಗಳು ಇಲ್ಲಿ ಪ್ರಯತ್ನ ಮಾಡಿ ಇಂತಹ ಒಂದು ಬಿಲ್ಲನ್ನು ತರುತಿದ್ದಾರೆ ಎಂದು ಕೇಳಬೇಕಾಗಿದೆ. ಇದಕ್ಕಾಗಿ ಅವರಲ್ಲಿ ನನ್ನ ದೊಡ್ಡ ಆಕ್ಷೇಪಣೆ ಇದು. ಈ ಕಾರಣದಿಂದ ಎಲ್ಲ ವಿಚಾರಗಳನ್ನೂ ಸಮಗ್ರವಾಗಿ ತಿಳಿದು ಕೊಳ್ಳಲು ಇದನ್ನು ಸಾರ್ವಜನಿಕರ ಗಮನಕ್ಕೆ ತರಬೇಕೆಂದು ಒಂದು ನಿರ್ಣಯ ಕಳುಹಿಸಿದ್ದೇನೆ. ಇದು ಬಹಳ ಮುಖ್ಯ. ನಾನು ಇದನ್ನು ಯಾವ ಕೋಮುವಾರು ಭಾವನೆ ಇಟ್ಟುಕೊಂಡು ಮಾತನಾಡುವುದಿಲ್ಲ. ಇದು ಸೆಕ್ಯುಲರು ಸ್ಟೇಟು, ಇಂತಹ ಸೆಕ್ಯುಲರು ಸ್ಟೇಟಿನಲ್ಲಿ ಹಿಂದುಗಳು ಆಗಲೀ ಮುಸ್ಲಿಮರಾಗಲೀ ಅಥವಾ ಬೇರೆ ಇತರ ಕೋಮಿನವರಾಗಲಿ ಇವರಿಗೆ ಇರುವ ಎಲ್ಲಾ ದೇವಸ್ಥಾನಗಳನ್ನೂ ನೋಡಿಕೊಳ್ಳಲು ರಿಲಿಜಸ್ ಅಂಡ್ ಎಂಡೋಮೆಂಟ್ ಆಕ್ಟು ಇದೆ. ಆದರೆ ಇಲ್ಲಿ ಇದಕ್ಕಾಗಿ ಸ್ಪೆಷಲ್ ಆಗಿ ಒಂದು ಕಾನೂನನ್ನೇ ಈಗ ತಂದಿದ್ದಾರೆ ಅದು ಎಲ್ಲಮ್ಮ ದೇವಸ್ಥಾನಕ್ಕೆ ಮಾತ್ರ ಅನ್ವಯವಾಗುವಂತೆ ತಂದಿದ್ದಾರೆ, ನಾನು ಈಗ ಈ ಬಿಲ್ಲಿನ ಬಗ್ಗೆ ಹೇಳುವುದಿಲ್ಲ ಮುಂದೆ ಈ ಬಿಲ್ಲಿನ ಬಗ್ಗೆ ಮಾತನಾಡುತ್ತೇನೆ. ನಾನು ಈ ಬಿಲ್ಲನ್ನು ತಂದಿರುವುದಕ್ಕಾಗಿ ವಿರೋಧ ಮಾಡುತ್ತಿಲ್ಲ. ಆದರೆ ಸರಕಾರದ ನೀತಿ ಸರಿಯಾಗಿಲ್ಲ, ಇದಕ್ಕಾಗಿ ಸಮಗ್ರವಾಗಿ ಎಲ್ಲರಿಗೂ ಸಂಬಂದ ಪಟ್ಟಂತೆ ಒಂದು ಕಾನೂನನ್ನು ತರಬೇಕಾಗಿತ್ತು. ಆದುದರಿಂದ ಈ ಬಿಲ್ಲಿನ ಬಗ್ಗೆ ಸಾರ್ವಜನಿಕರು ಯಾವ ರೀತಿ ಅಭಿಪ್ರಾಯ ಕೊಡುತ್ತಾರೆ ಅದನ್ನು ತಿಳಿದುಕೊಳ್ಳಬೇಕೆಂದು ಇಲ್ಲಿ ಒಂದು ನಿರ್ಣಯ ತಂದಿದ್ದೇನೆ ಇದರಂತೆ ಸಾರ್ವಜನಿಕರ ಅಭಿಪ್ರಾಯಗಳನ್ನು ಪಡೆಯಬೇಕೆಂದು ಸಲಹೆ ಮಾಡುತ್ತೇನೆ. ಅದು ತಿಳಿದ ನಂತರ ಆ ವೇಲೆ ಬಿಲ್ಲಿನ ಬಗ್ಗೆ ಮಾತಾಡುತ್ತೇನೆ. ಇವೆರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ. ಬಾಂಗಿ (ಜಮಖಂಡಿ).— ಮಾನ್ಯ ಅಧ್ಯಕ್ಷರೇ, ರೇಣುಕಾ ಎಲ್ಲಮ್ಮ ದೇವಸ್ಥಾನದ ಬಿಲ್ಲನ್ನು ಮಾನ್ಯ ಕಂದಾಯ ಮಂತ್ರಿಗಳು ಇಲ್ಲಿ ಏನು ಮಂಡಿಸಿದ್ದಾರೆ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಸಮಯದಲ್ಲಿ ಈ ಬಿಲ್ಲಿನಲ್ಲಿರುವ ಕೆಲವು ಲೋಪ ದೋಷಗಳನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರ ಬಯಸುತ್ತೇನೆ.

ಈ ರೇಣುಕಾ ಎಲ್ಲಮ್ಮ ದೇವಸಾನ ಬಹಳ ಹಳೆಯ ದೇವಸ್ಥಾನ, ಈ ದೇವಸ್ಥಾನದ ಬಗ್ಗೆ ಕೆಲವರು ನಾಟಕವಾಡಿ ಈ ದೇವಸ್ಥಾನದ ಮಹತ್ವವೇನು ಎನುವುದನ್ನು ಜನರಿಗೆ ತೋರಿಸಿ ಸಾರ್ವಜನಿಕರಿಗೆ ಇದರ ಬಗ್ಗೆ ಭಕ್ತಿಯನ್ನುಂಟು ಮಾಡಲು ಇಂತಹ ನಾಟಕಗಳನ್ನು ಆಡುತ್ತಿದ್ದಾರೆ. ಈ ದೇವಸ್ಥಾನದ ಬಗ್ಗೆ ಕೆಲವು ಸಣ್ಣ ಪುಟ್ಟ ಪುಸ್ತಕಗಳೂ ಬಂದಿವೆ. ಆದರ ಈ ಪುರಾತನ ದೇವಸ್ಥಾನದ ಬಗ್ಗೆ ಅಧಿಕೃತವಾದ ಯಾವ ಗ್ರಂಥವೂ ಇದುವರಗೆ ಹೊರಬಂದಿಲ್ಲ ಇದಕ್ಕಾಗಿ ಮಾನ್ಯ ಕಂದಾಯ ಮಂತ್ರಿಗಳು ಈ ದೇವಸ್ಥಾನದ

(ಶ್ರೀ ಪಿ. ಎಂ. ಜಾಂಗಿ [ಜಮಖಂಡಿ])

ಸಂಬಂಧವಾಗಿ ಒಂದು ಗ್ರಂಥವನ್ನು ತರಲು ಒಂದು ಕಮಿಟಿ ನೇಮಿಸಿ ಒಂದು ಅಧಿಕೃತ ಗ್ರಂಥ ಮಾಡಿಸಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ. ಇನ್ನು ಈ ದೇವಸ್ಥಾನದ ಬಗ್ಗೆ ಹಾಗೂ ಇದರ ಇತಿಹಾಸದ ಬಗ್ಗೆ ಒಂದು ಕಥೆ ಹೇಳುತ್ತಾರೆ.

ಹಿಂದೆ ಕಾಶ್ಮೀರ ದೇಶದಲ್ಲಿ ರೇಣು ಎನ್ನುವ ಅರಸನಿದ್ದ. ಅವನಿಗೆ ಮಕ್ಕಳಿರಲಿಲ್ಲ. ಅದಕ್ಕಾಗಿ ಅವನು ಈಶ್ವರನನ್ನು ಕುರಿತು ತಪಸ್ಸು ಮಾಡಿ ಮಕ್ಕಳಾಗಬೇಕೆಂದು ಬೇಡಿದನಂತೆ, ಈಶ್ವರನು ಅವನ ಭಕ್ತಿಗೆ ಮೆಚ್ಚಿ ಒಬ್ಬ ಹೆಣ್ಣು ಮಗಳನ್ನು ಅನುಗ್ರಹಿಸಿದನು. ಆ ಹೆಣ್ಣುಮಗಳಿಗೆ ರೇಣುಕಾ ದೇವಿ ಎಂದು ಹೆಸರಿಟ್ಟರು. ಆ ರೇಣುಕಾ ದೇವಿಯು ಪಾರ್ವತಿಯ ಭಕ್ತಳಾದುದರಿಂದ ಸಹ್ಯಾದ್ರಿ ಪರ್ವತದಲ್ಲಿ ತಪಸ್ಸು ಮಾಡುತ್ತಿದ್ದ ಜಮದಗ್ನಿ ಋಷಿಯನ್ನು ಮದುವೆಯಾದಳು. ಈ ದೇವಸ್ಥಾನದ ಬಳಿ ಈಗಲೂ ರೇಣುಕಾ ದೇವಿಯ ಭಾವಿ ಇದೆ. ಇದು ಸಹ್ಯಾದ್ರಿ ಗುಡ್ಡದಲ್ಲಿ ಹರಿಯುವ ಮಲಪ್ರಭಾ ನದಿಗೆ ಸಮೀಪದಲ್ಲಿದೆ. ಮಲಪ್ರಭಾ ಯೋಜನೆ ಮಾಡುವಾಗಲೂ ಕೂಡ ಈ ಬಾವಿಯನ್ನು ಹಾಗೇ ಇಡಬೇಕೆಂದು ಇದಕ್ಕೆ ತಕ್ಕ ಬಂದೊಬಸ್ತನ್ನು ಕೂಡ ಮಾಡಿದ್ದಾರೆ. ಅಂತಹ ಪತಿವ್ರತೆಯಾದ ರೇಣುಕಾ ಯಲ್ಲಮ್ಮನವರ ದೇವಸ್ಥಾನವೂ ಇದರ ಸಮೀಪದಲ್ಲಿ ಇದೆ. ಈ ರೇಣುಕಾ ಅಮ್ಮನವರ ಚರಿತ್ರೆ ಹೀಗಿದೆ. ರೇಣುಕಾ ದೇವಿಯವರು ಜಮದಗ್ನಿ ಋಷಿಯನ್ನು ಮದುವೆ ಮಾಡಿಕೊಂಡ ಮೇಲೆ ಇವರಿಗೆ ಮೂರು ಗಂಡು ಮಕ್ಕಳಾದವು. ಇವರ ಮೂರನೇ ಮಗನಿಗೆ ಪರಶುರಾಮ ಎಂದು ಹೆಸರು. ಇವರು ಎಲ್ಲ ಜನರ ಅಮ್ಮ ಎಂದಾಗಿದುದ್ದರಿಂದ ಇವರು ಎಲ್ಲಮ್ಮ ಎಂದು ಇಲ್ಲಿನ ಜನ ಕರೆಯುತ್ತಾರೆ. ಎಲ್ಲಮ್ಮ ದೇವತೆಗೆ ಇಷ್ಟು ಪ್ರಭಾವ ಬರಲು ಕಾರಣ ಹಿಂದೆ ಜಮದಗ್ನಿ ಋಷಿಯು ಯಲ್ಲಮ್ಮನ ಪಾತಿವ್ರತದ ಬಗ್ಗೆ ಅವರ ಮೇಲೆ ಕೋಪಬಂದು ಅವರು ತಮ್ಮ ಮಕ್ಕಳನ್ನು ಕರೆದು ಈ ತಾಯಿಯ ತಲೆಯನ್ನು ಕಡಿದು ಹಾಕಬೇಕೆಂದು ಹೇಳಿದಾಗ ಮೊದಲಿನ ಇಬ್ಬರು ಮಕ್ಕಳು ಕಡಿಯಲಿಲ್ಲ ಮೂರನೆಯ ಮಗನಾದ ಪರಶುರಾಮನು ತಂದೆಯ ಮಾತಿಗೆ ಒಪ್ಪಿ ತಾಯಿಯ ಶಿರಸ್ಸನ್ನು ಕಡಿದನು. ಇದಕ್ಕಾಗಿ ಜಮದಗ್ನಿಯು ಸಂತೋಷಗೊಂಡು ಅವನನ್ನು ಏನು ವರ ಬೇಕು ಎಂದು ಕೇಳಿದಾಗ ಅದಕ್ಕೆ ಪರಶುರಾಮನು ತನ್ನ ತಾಯಿಯನ್ನು ಬದುಕಿಸಿ ಕೊಡಬೇಕು. ಮತ್ತು ಅವರು ಬದುಕಿದ ಮೇಲೆ ಅವರಿಗೆ ಹಿಂದಿನ ಯಾವ ವಿಚಾರಗಳೂ ಅವರ ಜ್ಞಾಪಕಕ್ಕೆ ಬರದಂತೆ ವರ ಬೇಕೆಂದು ಕೇಳಿದನು. ಅದರಂತೆ ಜಮದಗ್ನಿಯು ವರ ಕೊಟ್ಟು ರೇಣುಕಾ ದೇವಿಯನ್ನು ಬದುಕಿಸಿದರು. ಆದರೆ ಅವಳು ಕುಷ್ಟರೋಗಿ ಆಗಲೆಂದು ಶಪಿಸಿದರು. ಇದರಿಂದ ಈ ರೇಣುಕಾ ಅಮ್ಮನವರೇ ರೇಣುಕಾ ದೇವಿ ಯಾಗಿದ್ದರು ಎಂದು ಇಲ್ಲಿನ ಜನ ಹೇಳುತ್ತಾರೆ ಇದರಿಂದ ಈ ಎಲ್ಲಮ್ಮನ ದೇವಸ್ಥಾನದ ಬಗ್ಗೆ ಇಲ್ಲಿನ ಜನರು ಬಹುವಾಗಿ ಹೇಳುತ್ತಾರೆ, ಮತ್ತು ಈ ರೇಣುಕಾ ದೇವಿಗೆ ಕುಷ್ಟ ರೋಗ ಬಂದಿತ್ತು ಆಗ ಅವರು ಜೋಗಯ್ಯಾಯೆಂಬ ಶಿವಶರಣರನ್ನು ಈ ರೋಗ ಹೋಗಬೇಕೆಂದು ಕೇಳಿದಾಗ ಅವರು ಈ ದೇವಸ್ಥಾನದಬಳಿ ಇರುವ ಸಹ್ಯಾದ್ರಿ ಪರ್ವತದ ಸಮೀಪದಲ್ಲಿರುವ ಬಾವಿಯಲ್ಲಿ ಸ್ನಾನ ಮಾಡಿದರೆ ಈ ರೋಗ ಪರಿಹಾರವಾಗುತ್ತದೆ ಎಂದು ಹೇಳಿದರು. ಅದರಂತೆ ರೇಣುಕಾ ದೇವಿಯವರು ಈ ಶರಣರ ಬಾವಿಯಲ್ಲಿ ಸ್ನಾನ ಮಾಡಿದ ಕೂಡಲೇ ಈ ಕುಷ್ಟ ರೋಗ ಪರಿಹಾರವಾಯಿತು ಮತ್ತು ಒಳ್ಳೆಯ ಶರೀರ ಪ್ರಾಪ್ತವಾಯಿತು ಎಂದು ಹೇಳುತ್ತಾರೆ, ಇದಕ್ಕೆ ಜೋಗುಳ ಜೋಗಯ್ಯನ ಬಾವಿ ಎಂದು ಈಗಲೂ ಹೆಸರಾಗಿದೆ, ಈ ಜೋಗುಳ ಬಾವಿ ಎನ್ನುವುದು ಈ ಎಲ್ಲಮ್ಮ ದೇವಸ್ಥಾನಕ್ಕೆ ಸುಮಾರು ಒಂದು ಮೈಲಿ ಅಂತರದಲ್ಲಿದೆ. ಮಲಪ್ರಭಾ ಪ್ರಾಜೆಕ್ಟು ಅಧಿಕಾರಿಗಳು ಇದರ ಸುತ್ತಮುತ್ತ ಒಂದು ಬಂಡನ ನಿರ್ಮಾಣ ಮಾಡಿದ್ದಾರೆ. ಇದರಿಂದಾಗಿ ಇದು ಸುರಕ್ಷಿತವಾಗಿರಲು ಅನುಕೂಲವಾಗಿದೆ. ಪ್ರತಿಯೊಬ್ಬರೂ ಈ ಶರಣರ ಜೋಗುಳ ಬಾವಿಗೆ ಹೋಗಿ ಸ್ನಾನ ಮಾಡುವುದಕ್ಕೆ ಮುನ್ನ ಈ ಬಾವಿಯೊಳಕ್ಕೆ ಅವರ ಕಾಣಿಕೆಯನು ಹಾಕಿ ಆ ನಂತರ ಸ್ನಾನ ಮಾಡಿ ರೇಣುಕಾ ಎಲ್ಲಮ್ಮನವರ ದೇವಸ್ಥಾನಕ್ಕೆ ಬಂದು ಹೋಗುತಿದ್ದಾರೆ, ಇನ್ನು ಇದರ ಬಗ್ಗೆ ಶಿವಶರಣರು ಅನೇಕ ವಿಚಾರಗಳನ್ನೂ ಹೇಳಿದ್ದಾರೆ. ಈ ಬಾವಿಯು ಶಿರಸಂಗೀ ಜಮೀನಿನಲ್ಲಿ ಇದ್ದ ಮೂಲ ಈ ಕಾಣಿಕೆಗಳನ್ನು ಶಿರಸಂಗೀ ಫಂಡಕ್ಕೆ ಜಮಾ ಆಗುತ್ತದೆ. ಷೆಡ್ಯೂಲು ೨೭ ರಲ್ಲಿ ಇದನ್ನು ಸೇರಿಸಬೇಕಾಗಿತ್ತು ಇದಕ್ಕೆ ಜೋಗಯ್ಯ ಶಿವಶರಣರ ಬಾವಿ ಜೋಗುಳ ಬಾವಿ ಹಾಗೂ ತೀರ್ಥಕುಂಡ ಅನ್ನುತ್ತಾರೆ. ಇದನ್ನು ಷೆಡ್ಯೂಲಿನಲ್ಲಿ ಸೇರಿಸಬೇಕಾಗಿತ್ತು ಎಂದು ಇಲ್ಲಿ ಹೇಳ ಬಯಸುತ್ತೇವೆ. ರೇಣುಕ ಯಲ್ಲಮ್ಮ ದೇವಸ್ಥಾನ ಈ ಪ್ರಕಾರವಾಗಿ ಈ ಮಸೂದೆಯಲ್ಲಿ ನಾಮಕರಣ ಮಾಡಲಾಗಿದೆ. ರೇಣುಕ ಮತ್ತು ಯಲ್ಲಮ್ಮ ಎನ್ನುವುದು ಒಂದೇ ದೇವತೆಯ ಹೆಸರು. ರೇಣುಕದೇವಿ ಎಂದರೆ ಯಲ್ಲಮ್ಮ ಆದುದರಿಂದ ರೇಣುಕಾದೇವಿ ಉರುಫ್ ಯಲ್ಲಮ್ಮ ಎಂಬುದಾಗಿ ಹಾಕಬೇಕೆಂದು ನಾನು ಸೂಚಿಸಬಯಸುತ್ತೇನೆ.

4-00 P.M.

ರೇಣುಕಾದೇವಿ ಹೆಣ್ಣು ದೇವತೆ ಇದ್ದ ಮೂಲಕ ಇದಕ್ಕೆ ಶ್ರೀ ಶಬ್ದ ಹಾಕುವುದು ಸರಿಯಲ್ಲ ಎಂದು ಸೂಚಿಸಬಯಸುತ್ತೇನೆ. ಎರಡನೇ ಪುಟದಲ್ಲಿ ಮೂರನೇ ಪುಟ ನಲ್ಲಿ ಅದೇ ಪ್ರಕಾರವಾಗಿ ಉಳಿದ ಪುಟಗಳಲ್ಲಿ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ ಎಂಬುವುದಾಗಿ ಬರೆಯಲ್ಪಟ್ಟಿದೆ. ಶ್ರೀ ಎನ್ನುವುದಕ್ಕೆ ಬದಲಾಗಿ ಶ್ರೀಮತಿ ಎನ್ನುವ ಶಬ್ದವನ್ನು ಹಾಕಬೇಕು. ಇಲ್ಲದೆ ಹೋದರೆ ರೇಣುಕಾ ಉರುಫ್ ಯಲ್ಲಮ್ಮ ದೇವಸ್ಥಾನ ಎಂಬುದಾಗಿ ನಾಮಕರಣ ಮಾಡಬೇಕೆಂದು ಸೂಚಿಸ ಬಯಸುತ್ತೇನೆ.

ರೇಣುಕಾ ದೇವಸ್ಥಾನದ ಆಸ್ತಿಯ ಬಗ್ಗೆ ವಿವರಗಳನ್ನು ೨೭ನೇ ಪುಟದ ಮೇಲೆ ಕೊಡಲಾಗಿದೆ. ಈ ದೇವಸ್ಥಾನದ ಮುಖ್ಯ ದೇವಿ ಯಲ್ಲಮ್ಮ. ಇದರ ಜೊತೆಗೆ ಜಮದಗ್ನೇಶ್ವರ ದೇವಸ್ಥಾನದ, ಪರಶುರಾಮ ದೇವಸ್ಥಾನಗಳೂ ಇವೆ. ಈ ಮೂರೂ ಮುಖ್ಯವಾದ ದೇವಸ್ಥಾನಗಳು. ಆದರೆ ಉಳಿದ ದೇವಸ್ಥಾನಗಳೂ ಷೆಡ್ಯೂಲ್‌ನಲ್ಲಿ ಸಮ್ಮಿಳಿತವಾಗಿವೆ. ಮಲ್ಲಿಕಾರ್ಜುನ, ಸಿದ್ದೇಶ್ವರ, ಗಣಪತಿ ಬ್ರಹ್ಮದೇವ, ಹುರಕಲ್ಲವ್ವ ಈ ಪ್ರಕಾರವಾಗಿ ಬೇರೆ ಬೇರೆ ಗುಡಿಗಳನ್ನು ಶೆಡ್ಯೂಲಿನಲ್ಲಿ ಯಲ್ಲಮ್ಮ ದೇವಸ್ಥಾನದ ಆಸ್ತಿ ಎಂದು ಬರೆದಿರುತ್ತಾರೆ. ಉಳಿದ ದೇವಸ್ಥಾನಗಳಿಗೆ ಯಾವುವೂ ಉತ್ಪತ್ತಿ ಇಲ್ಲ. ಇತರ ದೇವಸ್ಥಾನಗಳನ್ನೂ ಆಸ್ತಿ ಪಟ್ಟಿಯಲ್ಲಿ ಸೇರಿಸಿರುವುದರಿಂದ ಅವುಗಳನ್ನು ದುರಸ್ತಿ ಮಾಡುವ ಹೊಣೆ ಬೋರ್ಡಿನ ಮೇಲೆ ಬೀಳುತ್ತದೆ. ಆದ್ದರಿಂದ ಉಳಿದ ದೇವಸ್ಥಾನಗಳ ಆಸ್ತಿಯನ್ನು ಯಲ್ಲಮ್ಮ ದೇವಸ್ಥಾನದ ಆಸ್ತಿಗಳು ಎಂದು ಪರಿಗಣಿಸಬೇಕೋ ಇಲ್ಲವೋ ಎನ್ನುವುದರ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ವಿಚಾರ ಮಾಡಬೇಕೆಂದು ನಾನು ಸೂಚಿಸಬಯಸುತ್ತೇನೆ.

ಯಲ್ಲಮ್ಮ ದೇವಸ್ಥಾನ ಒಂದು ಗುಡ್ಡವಿದ್ದು ಅದರ ವಿಸ್ತೀರ್ಣ ಕೇವಲ ೪೪ ಗಜ ಎಂಬುದಾಗಿ ಬರೆಯಲ್ಪಟ್ಟಿದೆ. ಆದರೆ ಈ ಗುಡ್ಡ ದೊಡ್ಡದಿದ್ದು ಗುಡ್ಡದ ಮೇಲೆ ಸಾಕಷ್ಟು ಮನೆಗಳೂ, ಬಹಳ ಅಂಗಡಿಗಳೂ ಇದ್ದು ಅಲ್ಲಿ ಜನ ವಾಸ ಮಾಡುತ್ತ ಇದ್ದಾರೆ. ಇವುಗಳು ದೇವಸ್ಥಾನದ ಆಸ್ತಿ ಇದೆಯೋ ಇಲ್ಲವೋ ಎನ್ನುವ ಬಗ್ಗೆ ಷೆಡ್ಯೂಲಿನಲ್ಲಿ ಸ್ಪಷ್ಟೀಕರಣವಿಲ್ಲ, ಅದೇ ಪ್ರಕಾರವಾಗಿ ಗುಡ್ಡದ ಕೆಳಗೆ ಸೀತಾಫಲ ಮತ್ತು ಮಾವಿನ ಗಿಡಗಳು ಸಾಕಷ್ಟು ಇದ್ದು ಅದರ ಉತ್ಪನ್ನವನ್ನು ಪ್ರತಿವರ್ಷ ಮುನಿಸಿಪಾಲಿಟಿಯವರು ಪ್ರತಿವರ್ಷ ಹರಾಜು ಮಾಡಿ ಅದನ್ನು ಮುನಿಸಿಪಾಲಿಟಿಯ ಉತ್ಪನ್ನವೆಂದು ಪರಿಗಣಿಸುತ್ತಿದ್ದಾರೆ. ಆ ಬಗ್ಗೆ ಷೆಡ್ಯೂಲ್‌ನಲ್ಲಿ ಯಾವ ಪ್ರಕಾರವಾದ ವಿವರಣೆಯೂ ಇಲ್ಲ. ಈ ಬಗ್ಗೆ ಕೂಡ ಮಾನ್ಯ ಕಂದಾಯ ಮಂತ್ರಿಗಳು ವಿಚಾರ ಮಾಡಬೇಕೆಂದು ನಾನು ಸೂಚಿಸಬಯಸುತ್ತೇನೆ.

ಈ ದೇವಸ್ಥಾನದ ಚಕ್ಕುಬಂದಿ ಬಗ್ಗೆ ಏನೊಂದೂ ವಿವರಣೆ ಇಲ್ಲ. ದೇವಸ್ಥಾನಗಳ ಆಸ್ತಿ ಪಟ್ಟಿಯಲ್ಲಿ ೧೫೫ ಎಕರೆ ಜಮೀನುಗಳಿವೆ. ಅವು ಉಗರಗೋಳ ಮತ್ತು ಇತರ ಗ್ರಾಮಗಳಲ್ಲಿವೆ ಎಂದು ಬರೆಯಲ್ಪಟ್ಟಿದೆ. ಆದರೆ ಯಾವತ್ತೂ ಜಮೀನುಗಳು ಉಗರಗೋಳದಲ್ಲಿರುವ ಯಲ್ಲಮ್ಮ ದೇವತೆಯ ಪೂಜಾರಿಗಳ ಕಬ್ಜದಲ್ಲಿದ್ದ ಮೂಲಕ ಆ ಜಮೀನುಗಳ ಉತ್ಪನ್ನ ಯಲ್ಲಮ್ಮ ದೇವಸ್ಥಾನಕ್ಕೆ ಬರಲಾರದು. ಆದ್ದರಿಂದ ಈ ಜಮೀನುಗಳ ಉತ್ಪನ್ನ ದೇವಸ್ಥಾನದ ಉತ್ಪನ್ನ ಎಂದು ಪರಿಗಣಿಸುವುದರಿಂದ ತೊಂದರೆಯಾಗುತ್ತದೆ. ಈ ಪ್ರಕಾರವಾಗಿ ಈ ದೇವಸ್ಥಾನದ ಆಸ್ತಿ ಯಾವುದು ಈ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ವಿಚಾರ ಮಾಡಿ ಆ ಬಗ್ಗೆ ಸಾಕಷ್ಟು ಬದಲಾವಣೆ ಮಾಡಬೇಕೆಂದು ಸೂಚಿಸಬಯಸುತ್ತೇನೆ.

ನಾಲ್ಕನೆ ಕಾಲಮಿನಲ್ಲಿ ಬೋರ್ಡ್ ಆಫ್ ಟ್ರಸ್ಟೀಸ್ ಮಾಡುವ ವಿಚಾರವನ್ನು ಬರೆದಿರುತ್ತಾರೆ. ಆದರೆ ಈ ಮಸೂದೆಯಲ್ಲಿ ಎಕ್ಸಿಕ್ಯೂಟಿವ್ ಆಫೀಸರನ್ನು ನೇಮಿಸಿ ಯಾವತ್ತೂ ಅಧಿಕಾರವನ್ನು ಅವರಿಗೆ ಕೊಟ್ಟ ಮೇಲೆ, ದೇವಸ್ಥಾನದ ಆಸ್ತಿಪಾಸ್ತಿಗಳನ್ನು ಎಕ್ಸಿಕ್ಯೂಟಿವ್ ಆಫೀಸರ ಕಡೆಗೆ ಕೊಟ್ಟ ಮೇಲೆ ಬೋರ್ಡ್ ಆಫ್ ಟ್ರಸ್ಟೀಸ್ ಎಂದು ಮ್ಯಾನೇಜ್‌ಮೆಂಟ್ ಮಾಡುವಂಥ ಜನರಿಗೆ ಹೇಳುವುದಕ್ಕೆ ಬರುವುದಿಲ್ಲ, ಆದ್ದರಿಂದ ಇದಕ್ಕೆ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಅಥವಾ ಬೋರ್ಡ್ ಆಫ್ ಯಲ್ಲಮ್ಮ ಟೆಂಪಲ್ ಎನ್ನುವ ಪದಗಳ ಪ್ರಯೋಗ ಮಾಡಿದರೆ ಸರಿಯಾಗುತ್ತದೆಂದು ನನ್ನ ಭಾವನೆ.

೨೪ನೇ ಕ್ಲಾಜಿನಲ್ಲಿ ಮಾಡಿಫಿಕೇಷನ್ ಆಫ್ ಸರ್ಟನ್ ಎನಾಕ್ಟ್‌ಮೆಂಟ್ಸ್ ಎನ್ನುವ ವಿಚಾರ ಹೇಳಿದ್ದಾರೆ. ವಿಲೇಜ್ ಪಂಚಾಯಿತ್ ಅಂಡ್ ಲೋಕಲ್ ಬೋರ್ಡ್ಸ್ ಆಕ್ಟ್, ಮೈಸೂರು ಮುನಿಸಿಪಾಲಿಟೀಸ್ ಆಕ್ಟ್, ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ ಇವುಗಳನ್ನು ದುರಸ್ತಿ ಮಾಡುವುದಾಗಲೀ, ರದ್ದು ಮಾಡುವುದಾಗಲೀ, ಈ ಪ್ರಕಾರ ಮಾಡಬೇಕಾದರೆ ಬೇರೆ ಕಾಯದೆ ಮಾಡಿ ಆ ಕಾಯಿದೆ ಮೂಲಕ ಮಾಡಬೇಕೇ ಹೊರತು ನೋಟಿಫಿಕೇಷನ್ ತೆಗೆದು ಆ ಮೂಲಕ ರದ್ದುಗೊಳಿಸಲಿಕ್ಕೆ ಬರಲಾರದು. ಇದು ಡೆಲಿಗೇಟೆಡ್ ಲೆಜಿಸ್ಲೇಷನ್. ಇದರ ಕೆಳಗೆ ಈ ಪ್ರಕಾರವಾಗಿ ಸರ್ಕಾರಕ್ಕೆ ಅಧಿಕಾರ ಕೊಡುವುದು ಕಾಯಿದೆ ದೃಷ್ಟಿಯಿಂದ ಯೋಗ್ಯವಾಗಲಾರದೆಂದು ನನ್ನ ಅಭಿಪ್ರಾಯ. ೩೦ನೇ ಕ್ಲಾಜಿನಲ್ಲಿ ಆಸ್ತಿಯ ವಿಲೇವಾರಿ ಮಾಡುವುದರ ಮೇಲೆ ನಿರ್ಬಂಧಗಳನ್ನು ಹಾಕಿದ್ದು ಸರಿಯಾಗಿದೆ.

(ಶ್ರೀ ಪಿ. ಎಂ. ಬಾಂಗಿ [ಜಮಖಂಡಿ])

ಕ್ಲಾಜ್ ೪೦ ರಲ್ಲಿ ಮೃತ್ಯು ಪತ್ರದ ನಕಲನ್ನು ಎಕ್ಸಿಕ್ಯೂಟಿವ್ ಆಫೀಸರಿಗೆ ಕಳುಹಿಸಿಕೊಡತಕ್ಕದ್ದು ಮೃತ್ಯುಪತ್ರವನ್ನು ಚಲಾಯಿಸುವವರ ಕರ್ತವ್ಯವೆಂಬುದಾಗಿ ಹೇಳಿದ್ದಾರೆ. ಇದಕ್ಕೆ ಬದಲಾಗಿ ಸಾಮಾನ್ಯವಾಗಿ ಇಂಥ ಪತ್ರಗಳು ನೋಂದಣಿಯಾಗುತ್ತವೆ. ಇವುಗಳ ನೋಂದಣಿ ಮಾಡುವ ಅಧಿಕಾರಿಗಳು ಎಕ್ಸಿಕ್ಯೂಟಿವ್ ಆಫೀಸರಿಗೆ ಅದರ ನಕಲನ್ನು ಕಳುಹಿಸಿಕೊಡಬೇಕೆಂದು ಈ ಕ್ಲಾಜಿನಲ್ಲಿ ಪದ ಪ್ರಯೋಗ ಮಾಡಿ ಇದನ್ನು ದುರಸ್ತಿ ಮಾಡಬೇಕೆಂದು ಈ ಸಮಯದಲ್ಲಿ ನಾನು ಸೂಚಿಸಬಯಸುತ್ತೇನೆ.

೩೨ನೇ ಕ್ಲಾಜಿನಬಗ್ಗೆ ಹೇಳಿದ್ದಾರೆ, ಆದುದರಿಂದ 'shall be deemend to apply' ಎನ್ನುವ ಶಬ್ದವನ್ನು ಅಲ್ಲಿ ಹಾಕಬೇಕು ಎನ್ನುವ ಸೂಚನೆಯನ್ನು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ ಇದು ಬಹಳ ಮಹತ್ವದ ಬಿಲ್ಲು ಇದು. ಸವದತ್ತಿ ಮುನಿಸಿಪಾಲಿಟಿಯಲ್ಲಿ ಅಲ್ಲಿಗೆ ಬರುವಂತ ಯಾತ್ರಾರ್ಥಿಗಳಿಂದ ಹಣವನ್ನು ವಸೂಲಿ ಮಾಡಿ ರಸ್ತೆ ಮತ್ತು ವಾಟರ್ ಸಪ್ಲೈ ಬೋರ್ಡಿಗೆ ಆ ಹಣವನ್ನು ಖರ್ಚು ಮಾಡುತ್ತಾರೆ, ಇದು ಸಮಾಧಾನಕರವಾಗಿಲ್ಲ ಅದೇ ಪ್ರಕಾರ ಯಲ್ಲಮ್ಮ ದೇವಸ್ಥಾನಕ್ಕೆ ಬರುವ ಕಾಣಿಕೆಯನ್ನು ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಎಷ್ಟೋ ಪುಜಾರಿಗಳು ಕಾಣಿಕೆಯನ್ನು ತೆಗೆದುಕೊಂಡು ಸರಿಯಾಗಿ ಉಪಯೋಗ ಮಾಡುತ್ತಿಲ್ಲ. ಆ ದೃಷ್ಟಿಯಿಂದ ಈ ಮಸೂದೆಯನ್ನು ಮಾನ್ಯ ಮಂತ್ರಿಗಳು ಏನು ತಂದಿದ್ದಾರೆ ಅದು ಬಹಳ ಸರಿಯಾಗಿದೆ. ಅದು all comprehensive ಯಾವತ್ತೂ ದೇವಸ್ಥಾನದ ಒಂದು ಮಸೂದೆ ತಂದರೆ ಒಳ್ಳೆಯದು ಆಗುತ್ತದೆ. ೧೦ ಕೋಟಿ ರೂಗಳ ಬೆಲೆ ಬಾಳುವ ಬಂಗಾರ, ಆಭರಣಗಳು ಮತ್ತು ೪ ಸಾವಿರ ಎಕರೆ ಜಮೀನು ಮೈಸೂರು ರಾಜ್ಯದಲ್ಲಿರುವಂಥ ಒಳ್ಳೆಯ ದೇವಸ್ಥಾನದ ಆಸ್ತಿ ಇರುತ್ತದೆಂದು ಮಾನ್ಯ ಮಂತ್ರಿಗಳು ಮೊನ್ನೆ ದಿವಸ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದ್ದಾರೆ. ಆ ದೃಷ್ಟಿಯಿಂದ ಸಧ್ಯಕ್ಕೆ ಯಲ್ಲಮ್ಮ ದೇವಸ್ಥಾನದ ಬಿಲ್ ಯೋಗ್ಯ ಇದು ಅದನ್ನು ಪಾಸ್ ಮಾಡಿ ಕೊಡಲಿಕ್ಕೆ ಯಾವತ್ತು ದೇವಸ್ಥಾನಕ್ಕೆ ಅನ್ವಯಿಸುವಂಥ ಒಂದು ಮಸೂದೆಯನ್ನು ತರಬೇಕೆಂದು ಇವತ್ತಿನದಿವಸ ವಿನಂತಿ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಉಪಾಧ್ಯಕ್ಷರೇ ಈ ಮಸೂದೆಯನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ ಆದರೆ ಒಂದು ವಿಶಿಷ್ಟ ವ್ಯವಸ್ಥೆಯನ್ನು ಈ ಮಸೂದೆಯಿಂದ ಸ್ಥಾಪನೆ ಮಾಡುತ್ತಿದ್ದಾರೆ ಎನ್ನತಕ್ಕ ಭಯ ಇವತ್ತು ನಮಗೆ ಉಂಟಾಗುತ್ತಿದೆ. ಕಾರಣ ಏನು ಎಂದರೆ ಇದರ ಆಡಳಿತ ಮಂಡಳಿಯ ಸದಸ್ಯರು ಮತ್ತು ಇದರ ಕಾರ್ಯಕಾರಿ ಅಧಿಕಾರಿಗಳು ಆಗತಕ್ಕಂಥವರು ಹಿಂದೂ ಧರ್ಮದ ಅನುಯಾಯಿಗಳು ಆಗಿರಬೇಕು ಅಥವಾ ಹಿಂದೂ ಧರ್ಮವನ್ನು ಹೊಂದಿರಬೇಕು ಎನ್ನುವ ಮಾತನ್ನು ಇಲ್ಲಿ ಹೇಳುತ್ತಾರೆ. ನಾವು ಕೆಲವು ರಾಷ್ಟ್ರೀಯ ಮೌಲ್ಯಗಳನ್ನು ಬೆಳೆಸತಕ್ಕಂಥ ಕಾಲದಲ್ಲಿ ಜ್ಯಾತ್ಯಾತೀತ ರಾಷ್ಟ್ರವನ್ನು ಬೆಳಸಬೇಕಾದ ಅಗತ್ಯ ನಮ್ಮ ಮುಂದೆ ಇದೆ. ರಾಜ್ಯಾಂಗದಲ್ಲಿ ನಾವು ಇದನ್ನೇ ಸಂಪೂರ್ಣವಾಗಿ ಒಪ್ಪಿಕೊಂಡಿದ್ದೇವೆ. ಇದು ಯಲ್ಲಮ್ಮನ ದೇವಸ್ಥಾನವಾಗಿರಬಹುದು, ಮಸೀದಿ ಆಗಿರಬಹುದು ಚರ್ಚೆ ಆಗಿರಬಹುದು, ಜೈನರ ಬಸ್ತಿ ಆಗಿರಬಹುದು, ಅದನ್ನು ಇವತ್ತು ನಾವು ನೋಡತಕ್ಕ ದೃಷ್ಟಿಕೊನ ಬೇರೆ, ಹಿಂದೆ ನೋಡುತ್ತಾ ಇದ ದೃಷ್ಟಿಕೋನ ಬೇರೆ. ನಾವು ಶಾಸನ ಮಾಡುವ ಕಾಲದಲ್ಲಿ ಅದರಲ್ಲೂ ರಾಜ್ಯಾಂಗದ ತಳಹದಿಯಲ್ಲಿ ಶಾಸನ ಮಾಡತಕ್ಕ ಕಾಲದಲ್ಲಿ ಈ ಒಂದು ದೇವಸ್ಥಾನ ಅಥವಾ ಮಸೀದಿ ಒಂದು ಪ್ರಾಚೀನ ಸಂಸ್ಥೆ ಅಥವಾ ಪ್ರಾಚೀನ ಸಂಕೇತ ಎನ್ನುವ ದೃಷ್ಟಿಯಿಂದ ನೋಡಿ ಅವನ್ನು ರಕ್ಷಣೆ ಮಾಡುವುದಕ್ಕೆ ಇವತ್ತು ಪ್ರಯತ್ನ ಮಾಡಬೇಕು ಅಲ್ಲದೆ ಅವುಗಳಿಗೆ ಹಿಂದೂ ಧರ್ಮದ ಸಾಂಕೇತದ ಮುದ್ರೆಯನ್ನು ಒತ್ತುವುದು ಸರಿಯಲ್ಲ. ಹಿಂದೂ ಧರ್ಮಕ್ಕೆ ಮೀಸಲು ಆಗಿದ್ದರೂ ಹಿಂದೂ ಧರ್ಮದ ಸಂಕೇತವಾಗಿ ಪರಿಗಣಿಸಿ ಅವುಗಳನ್ನು ಹಿಂದೂ ಧರ್ಮವನ್ನು ಅವಲಂಬಿಸಿರತಕ್ಕ ಜನಗಳಿಗೆ ಸೀಮಿತಮಾಡಿ ಹಿಂದೂ ಧರ್ಮ ಸಂಕೇತದ ಮುದ್ರೆ ಒತ್ತಿ ಶಾಸನ ಮಾಡುವುದು ಎಷ್ಟರ ಮಟ್ಟಿಗೆ ಸಮರ್ಪಕವಾಗಿದೆ ಎಂಬುದನ್ನು ನಾವು ಆಳವಾಗಿ ವಿಚಾರ ಮಾಡತಕ್ಕ ಕಾಲ ಬಂದಿದೆ, ಹಿಂದೂ ಪದವನ್ನು ಪ್ರಯೋಗ ಮಾಡುವುದರಿಂದ ಹಿಂದೂ ಮತ್ತು ಮುಸಲ್ಮಾನ್ ಧರ್ಮಗಳಲ್ಲಿ ಪ್ರಬಲವಾದ ಬೇಧ ಉಳಿಯುವುದಕ್ಕೆ ಒಂದು ಕಾರಣವಾಗುತ್ತದೆ ಎನ್ನುವ ಭಯವನ್ನು ತಮ್ಮ ಮುಂದೆ ವ್ಯಕ್ತಪಡಿಸುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೇ ದೇವರಿನ ಹೆಸರಿನಲ್ಲಿ ಸುಳ್ಳನ್ನು ಸತ್ಯವಾಗಿ ನಂಬಿಸಿರತಕ್ಕ ಘಟನೆಗಳು ಇನ್ನೂ ಯಾವುದೇ ರಾಷ್ಟ್ರದಲ್ಲೂ ಆಗಲಿಕ್ಕೆ ಸಾಧ್ಯವಿಲ್ಲ ಎಂಬುದು ತಮಗೂ ಗೊತ್ತಿದೆ. ಈ ಯಲ್ಲಮ್ಮ ಅಥವಾ ಪರಶುರಾಮ ಪುರಾಣದಲ್ಲಿ ಬರುವ ವ್ಯಕ್ತಿಗಳು ಅನೇಕ ವಿಚಾರವಂತರು ಹೇಳಿದ್ದಾರೆ. ಇತಿಹಾಸ ಕಟ್ಟಮೇಲೆ ಪುರಾಣವಾಗಿದೆ ಎಂದು, ಇತಿಹಾಸ ಕಟ್ಟ ಪುರಾಣದ ವ್ಯಕ್ತಿಗಳು ಆದರು. ಅವರು ಹೇಗೆ ಹೋದರು, ಹೇಗೆ ಬಂದರು, ಎಲ್ಲಿ ನೆಲಸಿದರು ಎನ್ನುವುದು ನಮಗೆ ಸಾಕಷ್ಟು ಇತಿಹಾಸದಲ್ಲಿ ಸಿಕ್ಕುವುದಿಲ್ಲ. ಎಲ್ಲವೂ ಕೂಡ ಬುದ್ಧಿವಂತರ ಕಲ್ಪನೆ. ಅದಕ್ಕೆ ಪೂಜೆ ಮತ್ತು ಪುರಸ್ಕಾರ ಹೆಚ್ಚು

ಕಡಿಮೆ ಕನಸಿನಲ್ಲಿ ಕಂಡಂಥ ಸಂಕೇತಗಳು ಎಂದು ತಿಳಿಯಬಹುದು. ದಿವಂಗತ ಹಿರಣಯ್ಯನವರು ಒಂದು ಕಡೆ ಹೇಳುತ್ತಾರೆ. ದೇವರನ್ನು ಕಂಡವರಿಲ್ಲ, ಕಂಡವರು ಇದ್ದರೆ ಬೊಗಳುವವರು ಇಲ್ಲ ಎಂದು.

ಕನಸಿನಲ್ಲಿ ಕಂಡದ್ದು ಶಾಶ್ವತವಾಗಿ ಅಸಾಂಕೇತ ದೇವರುಗಳು ನಮ್ಮಲ್ಲಿ ಬಹಳಕಾಲದಿಂದ ನಂಬಿಕೆಯನ್ನುಂಟುಮಾಡಿವೆ ಇವತ್ತು ನಮ್ಮ ದೇಹದಲ್ಲಿ, ಮನಸ್ಸಿನ , ವಿಚಾರದಲ್ಲಿ ಅನುಭವದಿಂದ ಬೇರ್ಪಡಿಸುವುದಕ್ಕೆ ಆಗದೇ ಇರುವಂಥ ಕಲ್ಲು ಬಂಡೆಗಳು, ಸಂಕೇತಗಳು ಸತ್ಯವೇ ಆಗಿ ಪರಿಪಕ್ವವಾಗಿ ಉಳಿದಿದ್ದರೆ ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ಯಾತ್ರಾ ಕ್ಷೇತ್ರದಲ್ಲಿ ನಡೆಯುವ ಅಧರ್ಮವು ಎದ್ದು ಕಾಣುವ ಪರಿಸ್ಥಿತಿ ಬರುತ್ತಿರಲಿಲ್ಲ. ಧರ್ಮ ಸ್ಥಳದಲ್ಲಿ ಶಾಸನ ತಂದು ಧರ್ಮದ ರಕ್ಷಣೆ ಮಾಡತಕ್ಕ ಪರಿಸ್ಥಿತಿ ಬರತ್ತಾ ಇರಲಿಲ್ಲ ಧರ್ಮಸ್ಥಳ ಎಂದು ಹೇಳತಕ್ಕ ಸ್ಥಳದಲ್ಲಿ ಅಧರ್ಮ ಜಾಸ್ತಿಯಾಗಿ ಸುಳ್ಳು ಹೇಳುವುದನ್ನು ಕಾಣುತ್ತೇವೆ ಕದಿಯುವುದನ್ನು ಕಾಣುತ್ತೇವೆ. ಧರ್ಮಸ್ಥಳದಲ್ಲಿ ಅಧರ್ಮ ಬಹಳ ವ್ಯಾಪಕವಾಗಿ ಇರತಕ್ಕ ಪರಿಸ್ಥಿತಿ ಅಲ್ಲಿ ಕಾಣುತ್ತದೆ. ಧರ್ಮ ಸ್ಥಳದ ಕಡೆಗೆ ಹೋಗಿ ನೋಡಿ ಶೂದ್ರರಿಗೆ ಬೇರೆ ಕಡೆ ಬ್ರಾಹ್ಮಣರಿಗೆ ಬೇರೆ ಕಡೆ ಊಟ ಹಾಕುವುದನ್ನು ನೋಡಬಹುದು. ಶೂದ್ರರಿಗೆ ಹಾಕುವ ಊಟ ಬೇಯಿಸಿದ ಅಕ್ಕಿ ಊಟ; ಬ್ರಾಹ್ಮಣರಿಗೆ ಬಿಳಿ ಅಕ್ಕಿ. ಯಾವುದನ್ನು ಧರ್ಮ ಸ್ಥಳ ಎಂದು ತಿಳಿದುಕೊಂಡಿದ್ದೇವೋ, ಯಾವುದು ದೇವರು ಎಂದು ನಂಬಿದ್ದೇವೋ ಅಂಥ ಸ್ಥಳಗಳಲ್ಲಿ ವ್ಯಾಪಕವಾಗಿ ಕಾಣುವ ಭೇದವನ್ನು ಅಧರ್ಮವನ್ನು ಹೀಗೆ ಸಹಿಸಿಕೊಂಡು ಇವತ್ತು ಮೂಢ ನಂಬಿಕೆಗಳ ಸಂಕೇತದ ಧರ್ಮ ಸ್ಥಳಗಳನ್ನು ನೋಡತಕ್ಕ ದೃಷ್ಟಿಕೋನ ಬದಲು ಆಗಬೇಕು.. ಬದಲಾಗದೆ ಹೋದರೆ ಅಧರ್ಮ ಬೆಳೆಯುತ್ತದೆ. ಮೋಸ ವಂಚನೆ ಅಳವಡಿಸಿರತಕ್ಕ ಕ್ಷೇತ್ರವಾಗಿ ಅವು ಪರಿಣಮಿಸುತ್ತದೆ. ನಾನು ಹೇಳುವುದು ನನಗೆ ದೇವರಲ್ಲಿ ನಂಬಿಕೆಯಿಲ್ಲ, ದೇವರ ಬಗ್ಗೆ ವಿರೋಧ ಮಾಡುತ್ತೇನೆ. ನನಗೆ ದೇವರಲ್ಲಿ ವಿಶ್ವಾಸವಿಲ್ಲ, ನೀವು ಯಾತಕ್ಕೆ ವಿಶ್ವಾಸ ಇಟ್ಟುಕೊಂಡಿದ್ದೀರಿ ಎಂದು ನಿಮಗೆ ನಾನು ಪ್ರಶ್ನೆ ಮಾಡುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ದೇವರ ಫೋಟೋಗಳನ್ನು ಕೆಳಗೆ ಇಳಿಸಿ ಎಂದು ಹೇಳಿದ ಕಾಲದಲ್ಲಿ ಬಹಳವಾಗಿ ಚರ್ಚೆ ವಿಮರ್ಶೆ ಪ್ರತಿಕ್ರಿಯೆಗಳು ಬಂದುವು. ಇವುಗಳನ್ನು ನೋಡತಕ್ಕ ದೃಷ್ಟಿಕೋನ ಬದಲು ಆಗಬೇಕು. ಪ್ರಾಚೀನ ವಸ್ತುಗಳು ಪ್ರಾಚೀನ ಸಂಕೇತಗಳು ಏನಿವೆ ಇವುಗಳನ್ನು ರಕ್ಷಣೆ ಮಾಡೋಣ.

[*Mr. Deputy Speaker in the Chair*]

ದೇವರು ಎಂದರೆ ಮಾನವನ ವಿಚಾರ ಹೀನತೆಯಿಂದ ಉಂಟಾಗಿರತಕ್ಕ ಮೂಢನಂಬಿಕೆ ಏನು ಇದೆ ಆ ಮೂಢ ನಂಬಿಕೆಯು ಸಂಕೇತವಾಗಿರತಕ್ಕದ್ದು. ದೇವರುಗಳನ್ನು ಪೂಜೆ ಮಾಡುವುದಕ್ಕೆ ಜನರು ಹೋಗುತ್ತಿರುವುದನ್ನು ಕಾಣುತ್ತಿದ್ದೇವೆ. ದೇವರ ಹೆಸರಿನಲ್ಲಿ ಅನೇಕ ತರಹವಾದಂಥ ಹೆಚ್ಚಿನ ಪ್ರಮಾಣದ ಹಣವನ್ನು ಕೊಡುತ್ತಾ ಇರತಕ್ಕದ್ದನ್ನು ಕಾಣುತ್ತಿದ್ದೇವೆ. ಈ ಮೂಢ ನಂಬಿಕೆ ಇಷ್ಟೊಂದು ಪ್ರಕಾರವಾಗಿ ಬೆಳೆದು ನಿಂತಿದೆ. ಇಷ್ಟೊಂದು ದೇವರುಗಳಾಗಿ ಬೆಳೆದು ನಿಂತಿವೆ. ಇದನ್ನು ಬದಲಾಯಿಸುವುದಕ್ಕೆ 10 ಬ್ರಹ್ಮರು ಹುಟ್ಟಿದರೂ ಆಗುವುದಿಲ್ಲ. ದೇವರು ಎನ್ನುವುದು ಜಾಣ ಮಾನವನ ಸೃಷ್ಟಿ ಎಂದು ನನ್ನ ಸ್ನೇಹಿತರೊಬ್ಬರೂ ಸೂಚನೆ ಕೊಡುತ್ತಿದ್ದಾರೆ. ಜನರ ಮೂಢ ನಂಬಿಕೆ ಏನಿದೆ ಅದು ಈ ಪ್ರಕಾರವಾಗಿ ಬೆಳೆದು ನಿಂತಿದೆ. ಅವರಿಗೆ ಕಾಣತಕ್ಕ ಕಾಡು ಕಲ್ಲು, ನೇಣುಗಂಬ ದೇವರೇ - ಇಷ್ಟು ದೇವರು ಇದ್ದಾರೆ ಎಂದು ಹೇಳುವುದು ಕಷ್ಟವಾಗಿದೆ. ಎಷ್ಟೋ ವಿಗ್ರಹ ಆಕೃತಿಗಳು ನಮ್ಮ ಮುಂದಿವೆ.

MR. DEPUTY SPEAKER.—There is a big controversy as to whether God created man or man created God.

SRI KAGODU THIMMAPPA.—Man created God for his own purpose. ತಂದೆ ಕಲ್ಲು ಹೊತ್ತುಕೊಂಡು ಕೆಲಸ ಮಾಡಿಕೊಂಡು ಒದ್ದಾಡುತ್ತಿದ್ದ. ಮಗ ಏನೂ ಕೆಲಸ ಮಾಡದೇ ಇದ್ದ. ಜಾಣ ದೇವರನ್ನು ಸೃಷ್ಟಿ ಮಾಡಿದ ; ತನ್ನ ಜೀವನ ಸಾಗಿಸುವುದಕ್ಕೆ ಸುಲಭ ಮಾರ್ಗ ಕಂಡುಹಿಡಿದ ಮೇಲೆ, ದೇವರನ್ನು ಸೃಷ್ಟಿಮಾಡಿಕೊಂಡು ಈ ತರಹ ವಿಗ್ರಹ ಮಾಡಿದ.

MR. DEPUTY SPEAKER.—It may also be the exploitation of man by man.

ಶ್ರೀ ಕಾಗೋಡು ತಿಮ್ಮಪ್ಪ.—ಅದೂ ಆಗುತ್ತದೆ. ಮನುಷ್ಯ ಮನುಷ್ಯನನ್ನು ಶೋಷಣೆ ಮಾಡುವುದಕ್ಕಾಗುವುದಿಲ್ಲ. ಮನುಷ್ಯ ಮನುಷ್ಯನನ್ನು ಶೋಷಣೆ ಮಾಡುವುದಕ್ಕೆ ಮಧ್ಯೆ ಏನಾದರೂ ಇರಬೇಕು. ದೇವರನ್ನು ಹುಟ್ಟಿಸಿಕೊಂಡು ಮನುಷ್ಯ ಮನುಷ್ಯನನ್ನು ಶೋಷಣೆ ಮಾಡುತ್ತಾನೆ. ನೇರವಾಗಿ ಶೋಷಣೆ ಮಾಡಬೇಕಾದರೆ ದೇವರ ಹೆಸರಿನಲ್ಲಿ ಶೋಷಣೆ ಮಾಡುತ್ತಾನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.-ಧರ್ಮದ ವಿಷಯದಲ್ಲಿ ಈ ರೀತಿ ವಿಶ್ಲೇಷಣೆ ಮಾಡುವುದಕ್ಕೆ ಬದಲು ನಮ್ಮ ಮುಂದೆ ಇರತಕ್ಕ ಮುಸೂದಾ ಕಾನೂನಿನಲ್ಲಿ ಇರತಕ್ಕ ವಿಷಯಗಳ ಬಗ್ಗೆ ಸರ್ಕಾರಕ್ಕೆ ಸ್ವಲ್ಪ ಹೆಚ್ಚು ಮಾಹಿತಿ ಉಂಟಾಗುವ ಹಾಗೆ ಮಾನ್ಯ ಸದಸ್ಯರು ಸಹಾಯ ಮಾಡಿದರೆ ನಾನು ಬಹಳ ಕೃತಜ್ಞನಾಗಿರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮನುಷ್ಯ ನೇರವಾಗಿ ಶೋಷಣೆ ಮಾಡುವುದಕ್ಕೆ ಕಷ್ಟವಾಗುತ್ತದೆ. ದೇವರಲ್ಲಿ ತೃಪ್ತಿ ಇಟ್ಟುಕೊಂಡು ಶೋಷಣೆ ಮಾಡತಕ್ಕ ಕಾಲವಾಗಿದೆ. ಜಮದಗ್ನಿ ಹೆಂಡತಿ ರೇಣುಕಾ ದೇವಸ್ಥಾನದ ಮಂಡಲಿಯಲ್ಲಿರುವವರು ಮತ್ತು ಕಾರ್ಯದರ್ಶಿಗಳು ಹಿಂದೂ ಧರ್ಮವನ್ನು ಹೊಂದಿರಬೇಕು ಎನ್ನುವುದು ಇದೆ. ಹಿಂದೂ ಧರ್ಮದ ಪ್ರಚಾರ ನಡೆಯಬೇಕು ಎಂದು ಕೂಡ ಮುಂದೆ ಇದೆ. ಹಿಂದೂ ಧರ್ಮವನ್ನು ಹೆಚ್ಚು ಕಡಿಮೆ ಗುಪ್ತವಾಗಿ ಸೂಕ್ಷ್ಮವಾಗಿ ರಕ್ಷಣೆ ಮಾಡುವುದಕ್ಕೆ, ಒಂದು ಸೀಮಿತ ಕ್ಷೇತ್ರದಲ್ಲಿಡುವುದಕ್ಕೆ ಈ ಶಾಸನ ಪ್ರಯತ್ನ ಪಟ್ಟಿದೆ ಎನ್ನುವ ಕಾರಣಕ್ಕೆ ನಾನು ಹೇಳಿದ್ದು. ಜಮದಗ್ನಿ ಪುರಾಣದಲ್ಲಿ ಕಾಣುವ ವ್ಯಕ್ತಿ. ಇವನ ಹೆಂಡತಿ ಎಲ್ಲಮ್ಮ ರೇಣುಕಾದೇವಿ. ಜಮದಗ್ನಿ, ರೇಣುಕ ದೇವಿಯವರು ಪೂಜೆ ಆಗುತ್ತಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪುರಾಣದ ಕಥೆ ಯಾವುದೇ ರೀತಿಯಲ್ಲಿರಲಿ. ಅಲ್ಲಿ ನಡೆಯತಕ್ಕ ಸಂಸ್ಥೆಯ ಆಡಳಿತ ಸುವ್ಯವಸ್ಥಿತವಾಗಿ ಮಾಡತಕ್ಕ ಮುಸೂದಾ ಕಾನೂನು ಇಷ್ಟಕ್ಕೆ ಮಾತ್ರ ನಮ್ಮ ಚರ್ಚೆ ಸೀಮಿತವಾಗಿದ್ದರೆ, ಹೆಚ್ಚು ಭಿನ್ನಾಭಿಪ್ರಾಯಗಳು ಬರುವುದಕ್ಕೆ ಅವಕಾಶವಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಎಲ್ಲಮ್ಮನ ಪೂಜೆ ಮಾಡಬೇಕಾದರೆ, ರೇಣುಕಾದೇವಿ ಪೂಜೆ ಮಾಡಬೇಕಾದರೆ, ಪರುಶುರಾಮನ ಪೂಜೆ ಮಾಡಬೇಕಾದರೆ, ಜಮದಗ್ನಿಗಳನ್ನು ಪೂಜೆ ಮಾಡ ಬೇಕಾದರೆ, ಅವರು ಇದ್ದಂಥ ಕಾಲದಲ್ಲಿ ಹಿಂದುಗಳು ಎನ್ನುವ ಸಂಕುಚಿತ ಕ್ಷೇತ್ರ ಇರಲಿಲ್ಲ ; ಮುಸ್ಲೀಮರು, ಮಹಮ್ಮದೀಯರು ಕ್ಷೇತ್ರ ಇರಲಿಲ್ಲ. ಅವರು ಕಂಡಿದ್ದು ಪ್ರಪಂಚದ ಮಾನವ ಕುಲವನ್ನು. ಅವರು ಕಂಡಿದ್ದು ಮಾನವ ಧರ್ಮ. ಅವರು ಕಂಡಿರತಕ್ಕ ಸತ್ಯ, ಮಾನವ ಧರ್ಮಗಳನ್ನು, ಮಾನವ ಕುಲವನ್ನು ಕಾಣದೇ ಹೋದರೆ, ಈ ಕ್ಷೇತ್ರವನ್ನು ಹಿಂದೂಗಳಿಗೆ ಸೀಮಿತಗೊಳಿಸಿದರೆ, ಅವರು ಕಂಡಿರತಕ್ಕ ಸತ್ಯ ಎಲ್ಲಿದೆ? ಪರುಶುರಾಮನ ಬಾಯಿಂದ, ಜಮದಗ್ನಿ ಬಾಯಿಂದ ವೇದಗಳು ಬಂದಿವೆ ಎಂದು ಹೇಳುತಾರೆ. ಹಿಂದುಗಳು ಎನ್ನುವ ಶಬ್ದ ಎಲ್ಲಿದೆ ? ಯಾವ ಪುರಾಣದಲ್ಲಿದೆ ? ಜಮದಗ್ನಿ ಇಡೀ ಜಗತ್ತನ್ನು ಕಂಡವನು. ಇಡೀ ಜಗತ್ತಿಗೆ ಹೇಳಿದವರು. ಇತಿಹಾಸದಲ್ಲಿ ಮುಂದೆ ಹೋಗಿ ಪುರಾಣದಲ್ಲಿ ಸೇರಿಸತಕ್ಕ ವ್ಯಕ್ತಿಗಳು ಅವರು. ಅವರನ್ನು ಪೂಜೆ ಮಾಡಬೇಕಾದರೆ, ಅವನ ಕ್ಷೇತ್ರಕ್ಕೆ ಹೋಗಬೇಕಾದರೆ, ಅವನ ಅನುಯಾಯಿಗಳು ಆಗಬೇಕಾದರೆ ಹಿಂದುಗಳಾಗಿರಬೇಕು. ಯಾರು ಮುಸ್ಲಿಮರು ಅವರಿಗೆ ಪ್ರತಿಬಂಧಕ ಉಂಟಾಗುತ್ತದೆ ಎಂದು ಹೇಳುವುದು ಯಾವ ಸತ್ಯ ?

ಶ್ರೀ ಆರ್. ಎಸ್. ಪಾಟೀಲ್.—ಪ್ರತಿಬಂಧಕ ಇಲ್ಲ, ಯಾರು ಬೇಕಾದರೂ ಜಮದಗ್ನಿಯ ಅನುಯಾಯಿಗಳಾಗಬಹುದು.

ಶ್ರೀ ಕಾಗೋಡು ತಿಮ್ಮಪ್ಪ.-ಒಬ್ಬ ಮುಸ್ಲಿಂ, ಒಬ್ಬ ಕ್ರೈಸ್ತ, ಜೈನ, ಬೌದ್ಧ ಮತವಾಗಿರತಕ್ಕವನು ಜಮದಗ್ನಿಯಲ್ಲಿ ವಿಶ್ವಾಸ ಇಟ್ಟುಕೊಳ್ಳುವುದಿಲ್ಲ ಎಂದು ಹೇಗೆ ಹೇಳುವುದಕ್ಕಾಗುತ್ತದೆ ? ಅವನಿಗೆ ವಿಶ್ವಾಸ ಇರುವುದರಿಂದ, ಪ್ರೀತಿ ಇರುವುದರಿಂದ ಅಲ್ಲಿಗೆ ನೋಡುವುದಕ್ಕೆ ಹೋಗುತ್ತಾನೆ. ಅವನು ಏತಕ್ಕೆ ಈ ಮಂಡಲಿಯಲ್ಲಿ ಇರಬಾರದು ? ಆಡಳಿತಗಾರನಾಗಿ ಏಕೆ ಆಗಬಾರದು ? ಇವತ್ತು ಮಸೀದಿಯಲ್ಲಿ, ಚರ್ಚ್‌ಗಳಲ್ಲಿ ಆಡಳಿತ ಮಂಡಲಿ ಮಾಡುವಾಗ ಮಸೂದೆ ಚರ್ಚೆಗೆ ತರಬಹುದು. ಅಲ್ಲಿ ನಮಗೂ ಅವಕಾಶ ಇರಬೇಕು. ಇಲ್ಲಿ ಯಾವ ಮತಸ್ಥರನ್ನು ಬಹಿಷ್ಕರಿಸಿದ್ದೀರಿ, ಯಾವುದರಲ್ಲಿ ಹಿಂದುಗಳನ್ನು ಸೇರಿಸುವುದಕ್ಕೆ ಪ್ರಯತ್ನ ಪಡುತ್ತೀರಿ. ಧರ್ಮ ಕ್ಷೇತ್ರದಲ್ಲೂ ಕೂಡ ಮತ ಮತಗಳನ್ನು ವಿಂಗಡಿಸುವುದಾದರೆ, ಮಾತಿನಲ್ಲಿ ಒಂದಾಗುವುದಿಲ್ಲ, ಆಚಾರದಲ್ಲಿ ಒಂದಾಗುವುದಿಲ್ಲ ಎನುವುದಾದರೆ, ಧರ್ಮ ಕ್ಷೇತ್ರದಲ್ಲಿ ಒಂದಾಗುವುದಕ್ಕೆ ಪ್ರಯತ್ನ ಮಾಡದೇ ಹೋದರೆ, ರಾಷ್ಟ್ರದಲ್ಲಿರತಕ್ಕ ಅನೇಕ ಧರ್ಮ ಪಂಥಗಳು ಒಂದಾಗಿ ಬೆಳೆಯುವುದಕ್ಕೆ ಹೇಗೆ ಸಾಧ್ಯ. ಇದು ಧರ್ಮ ಕ್ಷೇತ್ರ ಎಂದು ನಾನು ತಿಳಿದುಕೊಂಡಿಲ್ಲ. ನೀವು ತಿಳಿದುಕೊಂಡಿದ್ದೀರಿ, ಅನೇಕ ಜನರು ತಿಳಿದುಕೊಂಡಿದ್ದಾರೆ. ನಾನು ದೇವರಿಲ್ಲ ಎಂದು ಹೇಳುತ್ತಾ ಹೋದರೆ ಗೋಡೆಗೆ ತಲೆ ಹೊಡೆದುಕೊಂಡ ಹಾಗಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತೀಗೌಡ.—ತಮಗೆ ಈ ವಿಷಯದಲ್ಲಿ ಸಾಕಷ್ಟು ಪ್ರಜ್ಞೆ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಲೆ ಒಡೆದುಕೊಳ್ಳಬಾರದು ಎನ್ನುವ ಬಗ್ಗೆ ಪ್ರಶ್ನೆ ಇದೆ. ಶಾಸನವನ್ನು ಚರ್ಚೆ ಮಾಡುವ ಜನ ಜಾಗ್ರತರಾಗಿರಬೇಕು. ನಾವು ನೋಡತಕ್ಕಂಥ ದೃಷ್ಟಿಕೋನ ವಿಶಾಲವಾಗಿರಬೇಕು. ರಾಜಕೀಯದ ತಳಹದಿಯಮೇಲೆ ವಿಚಾರಮಾಡುತ್ತಿದ್ದೇವೆ. ಸಮಾಜವಾದವನ್ನು ಹೇಳತಕ್ಕ ಕಾಲದಲ್ಲಿ, ಸಮಾಜವಾದವನ್ನು ಎಲ್ಲರೂ ಒಪ್ಪಿಕೊಂಡಿರತಕ್ಕ ಕಾಲದಲ್ಲಿ ಧರ್ಮಕ್ಕೆ ಸಂಬಂಧಪಟ್ಟ, ದೇವರಿಗೆ ಸಂಬಂಧಪಟ್ಟ ಶಾಸನ ಮಾಡುವ ಕಾಲದಲ್ಲಿ ಒಂದು ಧರ್ಮವನ್ನು, ಒಂದು ಪಂಥವನ್ನು ಒಂದೇ ಜಾತಿಗೆ ಸೀಮಿತಗೊಳ್ಳುವುದಕ್ಕೆ ದಯಮಾಡಿ ಪ್ರಯತ್ನ ಮಾಡಬಾರದು. ನಮ್ಮಲ್ಲಿ ವೈಶಾಲ್ಯತೆ ಇರಬೇಕು. ನಮ್ಮ ರಾಷ್ಟ್ರದಲ್ಲಿ ಹಿಂದೂಗಳೇ ಬಹು ಸಂಖ್ಯಾತರು. ಅನೇಕ ಕ್ಷೇತ್ರಗಳಲ್ಲಿ ಕಾಣುತ್ತೇವೆ, ಮುಸ್ಲಿಮರು ನಮಗೆ ಸೆಕ್ಯೂರಿಟಿ ಇಲ್ಲ ಎಂದು ಹೇಳುತ್ತಾರೆ. ಅವರು ಅಲ್ಪ ಸಂಖ್ಯಾತರಾಗಿದ್ದಾರೆ, ನಾವು ಬಹುಸಂಖ್ಯಾತರಾಗಿದ್ದೇವೆ. ಬಹುಸಂಖ್ಯಾತರಲ್ಲಿ ಅಲ್ಪ ಸಂಖ್ಯಾತರಿಗೆ ರಕ್ಷಣೆ ಕೊಡುವ ಮನೋಭಾವನೆ ಬೆಳೆದು ಬರಬೇಕು. ಅಲ್ಪಸಂಖ್ಯಾತರು ಅಂಜಿಕೆ ಪಡುತ್ತಾರೆ ಯಾರಿಗೆ ಶಕ್ತಿ ಇರುತ್ತದೆ, ಯಾರಿಗೆ ಬಲ ಇರುತ್ತದೆ, ಧೈರ್ಯ ಇರುತ್ತದೆ, ಅವರು ಅಬಲರನ್ನು ರಕ್ಷಣೆ ಮಾಡಬೇಕು. ಯಾರಿಗೆ ಬಲ ಇದೆಯೋ ಅವರು ಅಲ್ಪಸಂಖ್ಯಾತರನ್ನು ರಕ್ಷಣೆ ಮಾಡಬೇಕು. ಇದರಲ್ಲಿ ಅಲ್ಪಸಂಖ್ಯಾತರಿಗೆ ಸ್ವಾತಂತ್ರ್ಯವಿದ್ದರೆ ಸರ್ವೇಸಾಧಾರಣವಾಗಿ ನಂಬಿಕೆ ಬರುತ್ತದೆ. ಜೊತೆಗೆ ನಮ್ಮ ನಿಮ್ಮ ರಕ್ಷಣೆಯಾಗುತ್ತದೆ. ಆತ್ಮ ವಿಶ್ವಾಸ ಬರುತ್ತದೆ. ಈಗ ಆತ್ಮವಿಶ್ವಾಸದ ಕೊರತೆಯನ್ನು ಕಾಣುತ್ತಿದೇವೆ. ಅನೇಕ ಕಡೆಗಳಲ್ಲಿ ಗಣಪತಿಯನ್ನು ತೆಗೆದುಕೊಂಡು ಹೋಗಬೇಕಾದರೆ, ಪೋಲೀಸ್ ಹೋಗಬೇಕು. ದೇವರ ಜಾತ್ರೆ, ದೇವರ ಪೂಜೆ ಆಗುವ ಸಂದರ್ಭದಲ್ಲಿ ಮತೀಯ ಗಲಭೆ ಹೆಚ್ಚು ಕಡಿಮೆ ಹಿಂದು ಮತ್ತು ಮುಸ್ಲಿಂಗಳಲ್ಲಿ ನಡೆಯುತ್ತದೆ. ದೇವರಿಗೆ ದೇವರ ಹೆಸರಿನಲ್ಲಿ, ದೇವರ ಕೆಲಸದಲ್ಲಿ ಇವತ್ತು ಕೇವಲ ಹಿಂದುಗಳಿಗೆ ಸೀಮಿತಗೊಳಿಸಿರುವುದನ್ನು ತೆಗೆದರೆ ಬಹಳ ಉತ್ತಮ ಕೆಲಸ ಮಾಡಿದಂತಾಗುತ್ತದೆ ಇದರ ವಿಚಾರ ಪಕ್ವ ಆಗಬೇಕಾದರೆ ಇದು ಕ್ರಾಂತಿಕಾರಕ ಪ್ರಗತಿ ಪಥದಲ್ಲಿ ನಡೆಯಬೇಕಾದರೆ ಹಿಂದು ಎನ್ನುವ ಶಬ್ದ ಈ ಶಾಸನದಲ್ಲಿ ತೆಗೆದುಹಾಕಿದರೆ, ಇದರಲ್ಲಿ ಯಾರು ವಿಶ್ವಾಸ ಇಟ್ಟುಕೊಂಡಿದ್ದಾರೆ, ಅವರು ಆಡಳಿತದಲ್ಲಿ ಸೇರಬಹುದು, ಪೂಜೆ ಮಾಡಬಹುದು, ಪ್ರಸಾದ ತೆಗೆದುಕೊಳ್ಳಬಹುದು, ಇನ್ನೊಂದು ಮಾಡಬಹುದು, ಅದುಸಾಧ್ಯವಾಗುತ್ತದೆ. ಅಂತಹ ವೈಶಾಲ್ಯ ಮನೋಭಾವದ, ವಿಚಾರ ಪ್ರವೃತ್ತಿಯಿಂದ ಇದನ್ನು ಈ ಶಾಸನದಲ್ಲಿ ಅಳವಡಿಸಿರಿ ಎಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ.

4–30 P.M.

ಈವೊತ್ತು ನಮ್ಮ ಮನೆಯಲ್ಲಿ ಮೊಹರು ಪೂಜೆ ಮಾಡುತ್ತೇವೆ. ಅಲ್ಲದೆ ಈ ವೊತ್ತು ಅನೇಕ ಹಿಂದೂಗಳು ಅದನ್ನು ದೇವರು ಎಂದು ತಿಳಿದುಕೊಂಡಿದ್ದಾರೆ. ಯಾವ ಪುರಾಣದಲ್ಲೂ ಕೂಡ ಶ್ರೀರಾಮ ಶ್ರೀ ಕೃಷ್ಣ ಇವು ಹಿಂದೂಗಳಿಗೆ ಮಾತ್ರ ದೇವರು ಎಂದು ಬರೆದಿಲ್ಲ ಈಗ ಭಗವದ್ಗೀತೆಯಲ್ಲಿ ನೋಡಿದರೂ ಕೂಡ ಇದು ಹಿಂದೂಗಳಿಗೆ ಮಾತ್ರ ಇರುವುದು ಎನ್ನುವ ಒಂದು ಶಬ್ದವನ್ನೂ ಕೂಡ ಉಪಯೋಗಿಸಿಲ್ಲ. ಈವೊತ್ತು ಎಲ್ಲಾ ಶಾಸ್ತ್ರಗಳಲ್ಲೂ ಮತ್ತು ವೇದಗಳಲ್ಲೂ ಇರುವುದನ್ನು ನಾವು ತಪ್ಪಾಗಿ ತಿಳಿದು ಕೊಂಡಿದ್ದೇವೆ. ಇದನ್ನು ಈವೊತ್ತು ಸೀಮಿತಗೊಳಿಸಿ. ದೇವರನ್ನು ನಂಬತಕ್ಕಂಥ ಒಬ್ಬ ಮುಸ್ಲಿಮನೇ ಆಗಲಿ. ಒಬ್ಬ ಕ್ರೈಸ್ತನೇ ಆಗಲಿ, ಒಬ್ಬ ಮಹಮದೀಯನೇ ಆಗಲೀ ಒಬ್ಬ ಜೈನನೇ ಆಗಲಿ, ಒಬ್ಬ ಬೌದ್ಧನೇ ಆಗಲಿ ಅವನಿಗೆ ಇದರಲ್ಲಿ ನಂಬಿಕೆ ಇಲ್ಲ ಎಂದು ಹೇಗೆ ಹೇಳುತ್ತೀರಿ ? ಈ ಬಗ್ಗೆ ಈವೊತ್ತು ನಮಗೆ ನೈತಿಕ ಶಕ್ತಿ ಬರಬೇಕಾಗಿದೆ. ಎಲ್ಲಮ್ಮ ರೇಣುಕಾ ದೇವಸ್ಥಾನವನ್ನೂ ನೋಡಿದ್ದೇನೆ. ಧರ್ಮಸ್ಥಳ ಮತ್ತು ಇನ್ನು ಇತರ ದೇವಸ್ಥಾನಗಳನ್ನೂ ನೋಡಿದ್ದೇನೆ ಯಾವುದೋ ಒಂದು ದೇವಸ್ಥಾನದಲ್ಲಿ ನಮ್ಮ ಮನೆಯವರು ಅಲ್ಲಿ ಪೂಜೆಮಾಡಿಸಿದ್ದಾರೆ. ಅಲ್ಲಿ ಅವರು ಅನ್ನವನ್ನು ಅಡಿಕೆ ಎಲೆಯಲ್ಲಿ ಕೊಟ್ಟರು. ನಮ್ಮ ಮನೆಯವರು ಅಲ್ಲಿ ಪೂಜೆ ಮಾಡಿಸಿದ್ದರಿಂದ ನಾನು ಅಲ್ಲಲ್ಲಿ ಹೋಗಬೇಕಾಯಿತು. ಆದರೆ ಆ ದೇವರಿಗೆ ನಾನು ಕೈಮುಗಿಯಲಿಲ್ಲ. ಏತಕ್ಕೆಂದರೆ ಅಲ್ಲಿ ನನಗೆ ಏನು ಅನಿಸಿತು ಎಂದರೆ ಅಲ್ಲಿ ಬಹಳ ಹೇಸಿಗೆಯಾಯಿತು. ಅಲ್ಲಿ ಕೊಟ್ಟ ಅನ್ನವನ್ನು ಎಲ್ಲರೂ ತಿಂದಿದ್ದರಿಂದ ನಾನೂ ತಿನ್ನ ಬೇಕಾಯಿತು. ಮತ್ತು ನಾನು ಅಲ್ಲಿಂದ ಬಂದ ಮೇಲೆ ಏನೋ ಒಂದು ತರಹ ಮಾನಸಿಕ ಹೇಸಿಗೆ ಆಯಿತು. ಆದುದರಿಂದ ನಾನು ಹೇಳುವುದು ಏನೆಂದರೆ ಇದರಲ್ಲಿ ಎಲ್ಲಾ ಮತೀಯರೂ ಹೋಗುವಂಥ ಒಂದು ಅವಕಾಶ ಇರಬೇಕು ಅಂಥ ಒಂದು ವ್ಯವಸ್ಥೆ ಮಾಡಬೇಕು ಎಂದು ತಾವು ಪ್ರಾರಂಭದಲ್ಲಿ ಈ ಒಂದು ಮಸೂದೆಯನ್ನು ತಂದಿದ್ದೀರಿ. ಅನೇಕ ಕಡೆಗಳಲ್ಲಿ ದೇವಸ್ಥಾನಗಳಲ್ಲಿ ಹಣದ ದುರುಪಯೋಗ ಮತ್ತು ವ್ಯವಹಾರಗಳು ನಡೆಯುತ್ತಾ ಇವೆ. ಆದುದರಿಂದ ಅವನ್ನು ರಕ್ಷಣೆ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಿ ಮೂಢ ನಂಬಿಕೆಯಿಂದ ಬರತಕ್ಕಂಥ ಹಣವನ್ನು ಮೂಢ ನಂಬಿಕೆಯಲ್ಲಿರತಕ್ಕಂಥ ಜನಕ್ಕೇನೇ ಒಂದು ಅನುಕೂಲವಾದ ಕಾರ್ಯಗಳನ್ನು ಮಾಡಿಕೊಡೋಣ. ಅಂದರೆ ಅವರಿಗೆ ಒಂದು ಆಸ್ಪತ್ರೆ ಕಟ್ಟಿಸಿಕೊಡುವುದಾಗಲಿ ಅಥವಾ ಒಂದು ಸ್ಕೂಲನ್ನು ಕಟ್ಟಿಸಿ

(ಶ್ರೀ ಕಾಗೋಡು ತಿಮ್ಮಪ್ಪ)

ಕೊಡುವುದಾಗಲಿ ಮಾಡೋಣ. ಆದರಿಂದ ಬರುವ ಹಣವನ್ನು ಒಂದು ಒಳ್ಳೆಯ ಕೆಲಸಕ್ಕೇನೆ ಉಪಯೋಗಿಸೋಣ. ಮೂಢ ನಂಬಿಕೆಯಲ್ಲಿ ಬರತಕ್ಕಂಥ ದೇವರ ಹಣದಿಂದಲೇ ಒಂದು ಒಳ್ಳೆಯ ಕೆಲಸ ಮಾಡಿಸೋಣ. ಆರೀತಿ ಮಾಡಿದರೆ ಒಂದು ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಇದರ ಬಗ್ಗೆ ಒಂದು ತಳಹದಿ ಹಾಕಬೇಕು ಎಂದು ಹೇಳುತ್ತೇನೆ

ಇನ್ನು ನೀವು ಕ್ಲಾಸ್ 28 ರಲ್ಲಿ ಈ ರೀತಿ ಹೇಳಿದ್ದೀರಾ. ಅದು ಈ ರೀತಿ ಇದೆ :—

"the training of persons belonging to all castes of Hindus who are devotees of the Devasthana, in the performance of religious worship and ceremonies of the Devasthana" ಎಂದು. ಇದರಲ್ಲಿ 'ಟು ಅಲ್ ಕ್ಯಾಸ್ಟ್ಸ್' ಎಂದು ಸೇರಿಸಿ ಬಿಟ್ಟಿರುವುದರಿಂದ ನನಗೆ ಏನು ಅನಿಸುತ್ತದೆ ಎಂದರೆ ಇದರಲ್ಲಿ ಹರಿಜನರು ಏನಾದರೂ ಬಿಟ್ಟು ಹೋಗುತ್ತಾರೆ ಎನ್ನುವ ಒಂದು ಹೆದರಿಕೆಗೇನಾದರೂ ಇದನ್ನು ಸೇರಿಸಿದ್ದೀರಾ ? ಈಗ ಅಲ್ಲಿರುವ ಎಲ್ಲಮ್ಮ ರೇಣುಕಾ ದೇವಸ್ಥಾನಕ್ಕೆ ಗರ್ಭದ ಗುಡಿಗೆ ಯಾರಾದರೂ ಹರಿಜನರನ್ನು ಬಿಟ್ಟಿದ್ದಾರೆಯೇ ?

ಶ್ರೀ ಜೆ. ಎಲ್. ಕಬಾಡಿ :—ಅಲ್ಲಿ ಹರಿಜನರನ್ನು ಬಿಡುತ್ತಾರೆ. ಆದರೆ ನಾವು ಹೋಗಿಲ್ಲಾ.

ಶ್ರೀ ಕಾಗೋಡು ತಿಮ್ಮಪ್ಪ — ಹಾಗೇನೂ ಅಲ್ಲ. ಅಲ್ಲಿ ಒಳಕ್ಕೆ ಹೋದರೆ ಏನಾದರೂ ಕೆಡಿಸಿ ಬಿಟ್ಟು ಈಚೆಗೆ ಬಂದರೆ ತಲೆ ಹೋಗುತ್ತದೆ ಎನ್ನುವ ಭಯದಿಂದ ಹೋಗಿಲ್ಲಾ. ಮತ್ತು ಇದರಲ್ಲಿ the training of persons belonging to all castes ಎಂದು ಹೇಳಿದ್ದೀರಿ. ಆದುದರಿಂದ ನಾನು ಹೇಳುವುದು ಏನೆಂದರೆ ಹಿಂದೂ ಧರ್ಮವನ್ನು ಅಳವಡಿಸಿಕೊಂಡು ಇತರ ಧರ್ಮೀಯರೂ ಕೂಡ ಪೂಜಾರಿಗಳಾಗಲು ಅವಕಾಶವಾಗುವಂತೆ ಕಾಯಿದೆಗಳನ್ನು ರಚಿಸಬೇಕು. ಮತ್ತು ಇದರಲ್ಲಿ ಎಲ್ಲಾ ಜಾತಿಯವರೂ ಮಾಡುವಂಥ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕು. ನಮ್ಮ ಭಾರತೀಯ ಧರ್ಮವನ್ನು ಬೆಳೆಸಬೇಕು. ಹಾಗೆ ಮಾಡದೇ ಹೋದರೆ ಬೇರೆಯವರೂ ಕೂಡ ಕೆಲವರು ಕ್ರೈಸ್ತ ಧರ್ಮವನ್ನು ಬೆಳೆಸಬೇಕು ಎಂದು ಹೇಳುತ್ತಾರೆ. ಕೆಲವರು ಬೌದ್ಧ ದರ್ಮವನ್ನು ಬೆಳೆಸಬೇಕೆಂದು ಹೇಳುತ್ತಾರೆ. ಅಲ್ಲದೆ ಈವೊತ್ತು ಆರ್.ಎಸ್.ಎಸ್.ನವರು ಹೇಳುತ್ತಾರೆ ನಾವು ಹಿಂದೂ ಸಾಮ್ರಾಜ್ಯವನ್ನು ಕಟ್ಟಬೇಕು. ಭಾರತ ದೇಶ ಹಿಂದು ಧರ್ಮದ ತಳಹದಿ ಮೇಲೆ ಭಾರತ ದೇಶ ಸ್ಥಾಪನೆ ಆಗಬೇಕು ಎಂದು ಈವೊತ್ತು ಮುಸಲ್ಮಾನರು ತಮಗೇ ಒಂದು ರಾಜ್ಯವಾಗಬೇಕೆಂದತ್ತಿ ಪಾಕೀಸ್ತಾನವನ್ನು ಭಾರತದಿಂದ ಪ್ರತ್ಯೇಕವಾಗಿ ಸ್ಥಾಪನೆ ಮಾಡಿಕೊಂಡಿದ್ದಾರೆ, ಅದನ್ನು ನಾವು ಟೀಕೆ ಮಾಡುದ್ದೇವೆ ಈವೊತ್ತು ಹಿಂದೂ ದೇಶದಲ್ಲಿ ಹಿಂದೂ ರಾಷ್ಟ್ರ ನಿರ್ಮಾಣ ಆಗಬೇಕು ಎಂದು ಆರ್.ಎಸ್.ಎಸ್.ನವರು ಹೇಳುತ್ತಾರೆ. ಅದನ್ನೂ ಕೂಡ ಟೀಕೆ ಮಾಡುತ್ತಿದ್ದೇವೆ. ಇದು ನಮ್ಮ ರಾಜ್ಯಾಂಗದಲ್ಲಿ ಎಲ್ಲೂ ಕೂಡ ಹಿಂದೂ ರಾಷ್ಟ್ರ ನಿರ್ಮಾಣ ಮಾಡಬೇಕೆಂಬುದು ಇಲ್ಲ. ಈವೊತ್ತು ಹಿಂದೂ ಧರ್ಮವನ್ನು ಪ್ರಯೋಗ ಮಾಡ ತಕ್ಕಂಥದ್ದಾಗಲಿ ಅಥವಾ ಆ ವಿಚಾರ ಹೇಳಕ್ಕಂಥಾದ್ದಾಗಲಿ ಮಾಡಿದರೆ ಅದನ್ನು ನೋಡಿ ಬೇರೆ ಪಂಥದವರು ಏನು ಭಾವಿಸುತ್ತಾರೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಈ ಸಮಾಜವಾದದಲ್ಲಿ ಹಿಂದೂಗಳ ಧರ್ಮವನ್ನು ಹೇಳತಕ್ಕಂಥಾದ್ದರೆ ಬಗ್ಗೆ ಯಾವ ವಿಶ್ವವಿದ್ಯಾನಿಲಯವೇ ಆಗಲಿ, ಯಾವ ಶಾಲೆಯೇ ಆಗಲಿ ಇಲ್ಲ ತಾವೂ ಕೂಡ ಸಮಾಜವಾದವನ್ನು ಓದಿದ್ದೀರಿ ಅಧ್ಯಕ್ಷರೇ ನೀವು ಓದತಕ್ಕಂಥ ಕಾಲದಲ್ಲಿ ಯಾವ ಕಾಲೇಜಿನಲ್ಲಾಗಲಿ, ಯಾವ ಶಾಲೆಯಲ್ಲಾಗಲಿ ಈ ಸಮಾಜವಾದವನ್ನು ಹೇಳಲಿಲ್ಲಾ. ನೀವು ಬೇರೆ ವಿಧಾನದಲ್ಲಿ ಕಲಿತಿರಬಹುದು. ಈ ಸಮಾಜವಾದ ಎಂಬುದು ಭಾರತವನ್ನು ಪುನನಿರ್ಮಾಣ ಮಾಡುವ ಒಂದು ಅಸ್ತ್ರ. ಆದುದರಿಂದ ಹಿಂದೂ ರಾಷ್ಟ್ರದಲ್ಲಿ ಹಿಂದು ಎಂದು ಹೇಳಿದರೂ ಕೂಡ ಇದನ್ನು ಮತ ಉತ್ಥಾನಕ್ಕೆ ತರತಕ್ಕಂಥ ಧರ್ಮದ ಕ್ಷೇತ್ರಗಳಿಗೆ ಹಿಂದೂ ಎಂದು ಹೇಳುವ ಪದವನ್ನು ತರುವುದು ಬೇಡ. ಇದನ್ನು ತೆಗೆದುಹಾಕಬೇಕು. ಎಂದು ಹೇಳುತ್ತೇನೆ. ಈವೊತ್ತು ಮುಂದಿನ ವಿಕಾಸ ಬೆಳೆಸಬೇಕಾಗಿದೆ. ಹಿಂದೂ ಧರ್ಮ ಎಂದು ಹೇಳಿ ಯಾವುದೋ ಒಂದು ವಿಕಾಸ ಬೆಳೆಸುವುದಲ್ಲ. ಈವೊತ್ತು ನೋಡತಕ್ಕಂಥ ದೃಷ್ಟಿಕೋಣ ಬೇರೆ. ಈವೊತ್ತಿನ ದಿವಸ ಹಿಂದೂ ಧರ್ಮವನ್ನು ಅವತರಿಸಿಕೊಂಡು ಶಾಸನ ಮಾಡಿದರೆ ಅದನ್ನು ಎಲ್ಲಾ ಪಂಥಗಳೂ ಮತ್ತು ಎಲ್ಲಾ ಜನರೂ ಸೇರುವುದಕ್ಕೆ ಸಾಧ್ಯವಾಗುತ್ತದೆಯೇ ? ಈವೊತ್ತು ಒಬ್ಬ ಮುಸ್ಲಿಂ ಅನ್ನು ಒಂದು ದೇವಸ್ಥಾನಕ್ಕೆ ಎಕ್ಸಿಕ್ಯೂಟೀವ್ ಆಫೀಸರ್ ಆಗಿ ಹಾಕಿದರೆ ಅಥವಾ ಒಬ್ಬ ಕ್ರೈಸ್ತ ಜನಾಂಗದವನ್ನು ದೇವಸ್ಥಾನಕ್ಕೆ ಅಧಿಕಾರಿಯನ್ನಾಗಿ ಹಾಕಿದೆ ಅವನು ಉತ್ತಮವಾದ ಆಡಳಿತವನ್ನು ನಡೆಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೀರಾ ? ಅವನು

ಹಿಂದೂವನೇ, ಆಗಿರಲಿ, ಮುಸ್ಲಿಂ ಆಗಿರಲಿ ಯಾವ ಪಂಥದವನೇ ಆಗಿರಲಿ ನಿಮ್ಮ ಕಾನೂನಿನ ಪ್ರಕಾರ ಆ ಧಾರ್ಮಿಕ ಸಂಸ್ಥೆಗಳಲ್ಲಿ ಯಾವರೀತಿಯಾದ ಕಾರ್ಯಕ್ರಮ ನಡೆಯಬೇಕೋ ಆರೀತಿ ನಡೆಸಬೇಕಾಗುತ್ತದೆ. ಅದನ್ನು ಕಾನೂನಿನಲ್ಲಿ ಅಳವಡಿ... ಆದರೆ ಇವರಲ್ಲಿ ಒಬ್ಬೊಬ್ಬರಿಗೆ ಒಂದೊಂದು ತರಹ ದೃಷ್ಟಿ ಕೋಣ ಇರುತ್ತದೆ. ಒಬ್ಬನಿಗೆ ರೇಣುಕ ಎಲ್ಲಮ್ಮ ದೇವರಲ್ಲಿ ನಂಬಿಕೆ ಇರುತ್ತದೆ. ಇನ್ನೊಬ್ಬನಿಗೆ ಶ್ರೀರಾಮ ದೇವರಲ್ಲಿ ನಂಬಿಕೆ ಇಟ್ಟುಕೊಂಡಿರುತ್ತಾನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನೀವು ಧರ್ಮದ ವಿಚಾರದಲ್ಲಿ ಬೇಕಾದಷ್ಟು ಸಲಹೆಗಳನ್ನು ಸರ್ಕಾರಕ್ಕೆ ಮನವರಿಕೆಯಾಗುವಂತೆ ಹೇಳಿದ್ದೀರಿ. ಪೂಜಾರಿ ಯಾವ ಯಾವ ಕಾಲದಲ್ಲಿ ಯಾವರೀತಿಯಾಗಿ ನಡೆಯಬೇಕು ಎಂದು ಅವರ ಕೈ ಕೆಳಗೆ ಇರತಕ್ಕಂಥ ನೌಕರರು ಅಲ್ಲಿ ಶಾಸ್ತ್ರೋಕ್ತವಾಗಿ ನಡೆಯಬೇಕಾಗಿದ್ದ ಕಾರ್ಯಕ್ರಮಗಳನ್ನು ಸರಿಯಾಗಿ ನಡೆಸದೇ ಹೋದರೆ ಅದನ್ನು ತಿಳಿದುಕೊಳ್ಳತಕ್ಕಂಥ ಪರಿಶ್ರಮ ಅಧಿಕಾರಿಗಳಲ್ಲಿ ಇಲ್ಲದಿದ್ದರೆ ಅವರಿಂದ ಯಾವ ರೀತಿಯಾದ ಕಾರ್ಯಕ್ರಮಗಳು ಸರಿಯಾಗಿ ನಡೆದಿಲ್ಲವೆಂದು ಕಂಡು ಹಿಡಿಯಲು ಇವರಿಗೆ ಹೇಗೆ ಗೊತ್ತಾಗುತ್ತದೆ ?

ನಾನು ಏತಕ್ಕೆ ಹೇಳುತ್ತೇನೆ ಎಂದರೆ ನಿಮ್ಮ ಕಾನೂನಿನಲ್ಲಿ ಪೂಜಾರರು ಏನು ಮಾಡಬೇಕು, ಅಧಿಕಾರಿಗಳು ಏನು ಮಾಡಬೇಕು ಎಂಬುದು ಅದರಲ್ಲಿ ಅಡಕವಾಗಿದೆ. ಕಾಲಕಾಲಕ್ಕೆ ಜಾತ್ರೆಯನ್ನು ನಡೆಸಬೇಕು, ಪೂಜೆ ಪುರಸ್ಕಾರಗನ್ನು ಕಾಲಕ್ಕೆ ಸರಿಯಾಗಿ ಮಾಡಬೇಕು, ಹೀಗೆ ಅಲ್ಲಿ ನಡೆಯಬೇಕಾದ ಸಂಸ್ಥೆಯ ಕಾರ್ಯಕ್ರಮವನ್ನು ತಾವು ಕೊಟ್ಟುಬಿಟ್ಟಿದ್ದೀರಿ. (ಪವರ್ಸ್ ಅಂಡ್ ಡ್ಯೂಟೀಸ್ ಬಗ್ಗೆ ಕ್ಲಾಸ್ ೧೩ರಲ್ಲಿ ಕೊಟ್ಟಿದ್ದೀರಿ) ಇದನ್ನು ಇಲ್ಲಿ ಹೇಳಿದ್ದೀರಿ. ಪೂಜೆಮಾಡುವುದು, ಪ್ರಸಾದ ಕೊಡುವುದು, ಎಲ್ಲಾ ಹೇಳಿದ್ದೀರಿ. ಕಾನೂನು ಪ್ರಕಾರ ಇದನೆಲ್ಲಾ ಮಾಡಬೇಕೆಂದು ಹೇಳಿದರೆ ಮಾಡುತ್ತಾರೆ. ಇದರ ಬಗ್ಗೆ ಬೇಕಾದಷ್ಟು ಕಾನೂನನ್ನು ಇಟ್ಟುಕೊಂಡಿದ್ದೀರಿ ಅದನ್ನು ಯಾರಿದ್ದರೂ ಚಲಾಯಿಸಬಹುದು. ಆದ್ದರಿಂದ ಇವರಲ್ಲಿ ಅವನಿಗೆ ವಹಿಸಿಕೊಟ್ಟಿರುವ ಕೆಲಸವನ್ನು ಮಾಡದೆ ಇದ್ದರೆ ಅವನನ್ನು ಕೆಲಸದಿಂದ ತೆಗೆದುಹಾಕುವ ಸಂಪೂರ್ಣ ಅಧಿಕಾರ ಈ ಕಾನೂನಿನಲ್ಲಿ ಇದೆ ಅವ ಕ್ರಿಶ್ಚಿಯನ್ ಆಗಲಿ, ಮುಸ್ಲಿಮ್‌ನಾಗಲಿ ಯಾರಾದರೂ ಆಗಲಿ ನೀವು ಅವರಿಗೆ ಸಂಬಳ ಕೊಟ್ಟು ಪೂಜೆ ಮಾಡುವುದಕ್ಕೆ ಹೇಳಿದರೆ ಯಾರಾದರೇನು ಅವನು ಮಾಡಬೇಕಾದ ಕೆಲಸಕಾರ್ಯಗಳನ್ನು ಮಾಡೇ ಮಾಡುತ್ತಾನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪೂಜೆ ಮಾಡಿಸುವುದಕ್ಕೆ ಜನರು ಬರುತ್ತಾರೆ. ಜನರು ಬಂದಾಗ ಪೂಜಾಕ್ರಮ ಏನೇನು ಪೂಜೆ ಮಾಡುವ ಕ್ರಮದಂತೆ ಶಾಸ್ತ್ರೋಕ್ತವಾಗಿ ಮಂತ್ರಗಳನ್ನು ಹೇಳುವುದು ಮತ್ತು ಪೂಜಾಕ್ರಮ ಏನೇನು ಇರುತ್ತದೆ ಅದನ್ನು ಕ್ರಮ ಬದ್ಧವಾಗಿ ಪೂಜೆ ಮಾಡುತ್ತಾನೋ ಇಲ್ಲವೋ ಎನ್ನುವುದು ಆ ಅಧಿಕಾರಿಗೆ ಆಚರಿಸಿ ಗೊತ್ತಿರಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಒಂದು ಉದಾಹರಣೆ ಹೇಳುವುದಾದರೆ, ನಮ್ಮಲ್ಲಿ ಸತ್ಯನಾರಾಯಣ ಪೂಜೆ ಮಾಡಿಸುತ್ತಾರೆ, ಅದಕ್ಕೆ ಬ್ರಾಹ್ಮಣ ಬಂದು ಆ ಪೂಜೆಯನ್ನು ಮಾಡ ಬೇಕಾಗುತ್ತದೆ. ಆ ಬ್ರಾಹ್ಮಣ ಮಂತ್ರವನ್ನು ಹೇಳಬೇಕಾದರೆ ಒಂದು ಪುಸಕವನ್ನು ತರುತ್ತಾನೆ. ಮದುವೆಯಲ್ಲಿ ತಾಳಿ ಕಟ್ಟಬೇಕಾದರೆ ಆ ಪುಸ್ತಕದಲ್ಲಿ ನೋಡಿ ಕೊಂಡು ಹೇಳುತ್ತಾನೆ ಅವನು ಓದಿ ಕೊಂಡು ಪೂಜೆ ಮಾಡಿದರೂ ಪೂಜೆಯಾಗುತ್ತದೆ ಬಾಯಿಪಾಠಮಾಡಿಕೊಂಡು ಬರುತ್ತಾನೆ ಅವನು ತಿಳಿದುಕೊಂಡು ಹೇಳುವುದಿಲ್ಲ. ಪುಸ್ತಕದಲ್ಲಿ ನೋಡಿಕೊಂಡು ಹೇಳಿದರೂ ಒಂದೇ ರೀತಿಯಲ್ಲಿ ಭಾವಿಸುತ್ತೇವೆ ಅಥವಾ ಬಾಯಿಪಾಠಮಾಡಿಕೊಂಡು ಬಂದು ಹೇಳಿದರೂ ಒಂದೇ ಭಾವಿಸುತ್ತೇವೆ. ಅವನು ತಿಳಿದುಕೊಂಡು ಬಂದು ಹೇಳಿದನೋ ಅಥವಾ ಬಾಯಿ ಪಾಠ ಮಾಡಿಕೊಂಡು ಬಂದು ಹೇಳಿದನೋ ನಮಗೆ ಗೊತ್ತಾಗುವುದಿಲ್ಲ. ಈ ಶಾಸನದಲ್ಲಿ ಹೇಳಿರುವಪ್ರಕಾರ ಯಾರು ದೇವರ ಪೂಜೆ ಮಾಡುವುದಿಲ್ಲ ಎಂದು ಹೇಳುವುದಿಲ್ಲ. ಏತಕ್ಕೆಂದರೆ ಪೂಜಾರಿ ಪೂಜೆ ಮಾಡುವಾಗ ಶಾಸ್ತ್ರೋಕ್ತವಾಗಿ ಮಾಡುತ್ತಾನೋ ಇಲ್ಲವೋ ಎಂಬುದಕ್ಕೆ ಪೂಜಾರಿ ಅನ್ನಿಸಿಕೊಂಡಮೇಲೆ ಅವನಿಗೆ ಟ್ರೈನಿಂಗ್ ಕೊಡುತ್ತಾರೆ. ನೇಮಕಮಾಡಿಕೊಳ್ಳತಕ್ಕಂಥ ಪೂಜಾರಿಗಳಲ್ಲಿ ಎಲ್ಲರಿಗೂ ಟ್ರೈನಿಂಗ್ ಕೊಡುತ್ತಾರೆ ಅಂಥ ಧಾರ್ಮಿಕ ಸಂಸ್ಥೆಗಳ ಮೇಲ್ವಿಚಾರಣೆ ನಡೆಸುವುದಕ್ಕೆ ಸರ್ಕಾರಿಅಧಿಕಾರಿಗಳನ್ನು ಯಾವ ಜನಾಂಗದವರನ್ನೇ ಹಾಕಿದರೂ ಆ ಕಾರ್ಯವನ್ನು ಮಾಡುತ್ತಾನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಧಾರ್ಮಿಕ ಕಾರ್ಯಕ್ರಮದ ಬಗ್ಗೆ ಮತ್ತು ಅದನ್ನು ಆಚರಿಸುವ ಕ್ರಮಗಳಬಗ್ಗೆ ದೇವಸ್ಥಾನದ ಶಾಸ್ತ್ರೋಕ್ತವಾದ ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ ಶ್ರೀಮಾನ್ ತಿಮ್ಮಪ್ಪನವರು ಈಗಾಗಲೇ ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿಯವರೆಗೆ ಶಾಸನಗಳು ಇರಲಿಲ್ಲ. ಈಗಲಾದರೂ ಆ ಕೆಲಸ ಕಾರ್ಯಗಳನ್ನು ನಡೆಸಲು ಸಾಕಷ್ಟು ಶಾಸನಗಳು ಇದರಲ್ಲಿ ಇವೆ. ಈಗ ಸಂಬಳದ ಮೇಲೆ ಎಲ್ಲಾ ಪೂಜಾರಿಗಳು ಕೆಲಸ ಮಾಡುವುದರಿಂದ ಅವರು ನೌಕರರು ಆಗುತ್ತಾರೆ. ಹಿಂದೆ ಎಲ್ಲಾ ಈ ರೀತಿ ಇರಲಿಲ್ಲ. ಅವರಿಗೆ ಏನೋ ಒಂದು ಸಂಭಾವನೆ ರೀತಿಯಲ್ಲಿ ಕೊಡುತ್ತಿದ್ದರು. ಆದರಲ್ಲೇ ಅವರು ಜೀವನವನ್ನು ಮಾಡುತ್ತಿದ್ದರು. ಈಗ ಅವರಿಗೆ ಇಷ್ಟು ಸಂಬಳವೆಂದು ಮಾಡಿದ್ದೀರಿ. ಉದಾಹರಣೆಗೆ ಹೇಳುವುದಾದರೆ ನಿಮ್ಮ ಕೆಲಸಕಾರ್ಯಗಳನ್ನು ಮಾಡಬೇಕಾದರೆ ಒಬ್ಬ ಸ್ಟೆನೋಗ್ರಾಫರ್ ನೇಮಿಸಿಕೊಳ್ಳುತ್ತೀರಿ ಅವನಿಗೆ ಆ ಕೆಲಸಕಾರ್ಯಗಳನ್ನು ನಿರ್ವಹಿಸಲು ಬೇಕಾದ ವಿದ್ಯಾರ್ಹತೆ ಟೈಪ್‌ರೈಟಿಂಗ್ ಮತ್ತು ಶಾರ್ಟ್ ಹ್ಯಾಂಡ್ ಬರಬೇಕಾಗುತ್ತದೆ. ಒಬ್ಬ ಮುಸ್ಲಿಮ್ ಆಫೀಸರು ಬರುತ್ತಾರೆಂದು ಇಟ್ಟುಕೊಳ್ಳಿ ಅವರು ಮಂತ್ರಗಳನ್ನು ಅಭ್ಯಾಸಮಾಡಿ ಬಂದಿರುತ್ತಾರೆ ಅವರಿಗೆ ಸರಿಯಾದ ಅರ್ಹತೆ ಇದ್ದ ಮೇಲೆ ನೀವು ಏತಕ್ಕೆ ಅವನನ್ನು ದೂರಇರಿಸುತ್ತೀರಿ ಎಂದು ಕೇಳುತ್ತೇನೆ. ಅವನಿಗೆ ವಹಿಸತಕ್ಕ ಕೆಲಸ ಕಾರ್ಯಗಳಿಗೆ ಬೇಕಾದ ಅರ್ಹತೆ ಇದ್ದಮೇಲೆ ಅವನನ್ನು ದೂರ ಇರಿಸಬೇಕಾದರೆ ಕಾರಣವೇನು. ಉದಾಹರಣೆಗೆ ಹೇಳಬೇಕಾದರೆ ನಮ್ಮಲ್ಲಿ ಹಿಂದೆ ಒಬ್ಬ ನಾಟಕಕಾರರು ಇದ್ದರು. ಅವರ ಹೆಸರು ಮಹಮದ್ ಪೀರ್‌ಸಾಹೇಬರು. ಅವರು ಕನ್ನಡದಲ್ಲಿ ಯಾವ ನಾಟಕವೇ ನಡೆದರೂ ಅದರಲ್ಲಿ ಪಾತ್ರ ವಹಿಸಿದರೆ ಆ ಪಾತ್ರದಲ್ಲಿ ಹೇಳಬೇಕಾದ ಕನ್ನಡ ಶ್ಲೋಕಗಳನ್ನು ಯಾವ ಹಿಂದೂ ಕೂಡ ಅಷ್ಟು ಸ್ಪಷ್ಟವಾಗಿ ಹೇಳುತ್ತಿರಲಿಲ್ಲ. ಆರೀತಿ ಸ್ಪಷ್ಟವಾಗಿ ಹೇಳುತ್ತಿದ್ದರು. ಯಾವ ಕನ್ನಡಿಗನೂ ಹೇಳುವುದಕ್ಕೆ ಮತ್ತು ಪಾತ್ರನಿರ್ವಹಣೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಮಾನ್ಯ ತಿಮ್ಮಪ್ಪನವರು ಹೇಳುತ್ತಿರುವುದು ಮಂತ್ರಗಳನ್ನು ಕಲಿತುಕೊಂಡು ಯಾರು ಬೇಕಾದರೂ ಪೂಜೆ ಮಾಡಬಹುದೆಂದು ಹೇಳುತ್ತೀರಿ ಅಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ —ಹಿಂದೆ ಯಾವ ಕೆಲಸವಾಗಬೇಕಾದರು ಸ್ವಲ್ಪ ಕಷ್ಟವಾಗುತ್ತಿತ್ತು. ಈಗ ಅಷ್ಟು ಸುಲಭವಾಗಿ ಕೆಲಸವಮಾಡುಬಹುದು. ಏತಕ್ಕೆಂದರೆ ಕೆಲವರು ಸಂಬಳವಿಲ್ಲದೆ ಈ ಕೆಲಸವನ್ನು ಮಾಡುವುದಕ್ಕೆ ಇರುವಾಗ, ಸಂಬಳ ಕೊಟ್ಟಮೇಲೆ ಆ ಕೆಲಸ ಮಾಡಲು ಜನರು ಸಿಕ್ಕುವುದಿಲ್ಲವೆಂದು ಹೇಳಿದರೆ ನಾವು ಅವರನ್ನು ದಡ್ಡರು ಎಂದು ಹೇಳಬೇಕಾಗುತ್ತದೆ. ಈ ಕೆಲಸಕಾರ್ಯಗಳನ್ನು ನಿರ್ವಹಿಸ ಬೇಕಾದರೆ ಹಿಂದು ಗಳಿಗಿಂತ ಮುಸ್ಲಿಮರೇ ಜಾಸ್ತಿ ಬರುತ್ತಾರೆಂದು ಊಹಿಸುತ್ತೇನೆ. ಇದನ್ನು ನಾನು ಏತಕ್ಕೆ ಹೇಳುತ್ತೇನೆಂದರೆ ಮಸೀದಿಗಳಿಗೆ, ಚರ್ಚುಗಳಿಗೆ ಪಾದ್ರಿ ಮಾಡಬೇಕಾದರೆ ಅವನಿಗೆ ಪಾದ್ರಿಯ ಕೆಲಸಕಾರ್ಯಗಳನ್ನು ನಿರ್ವಹಿಸಲು ಯಾವಯಾವ ಅರ್ಹತೆಗಳು ಇರಬೇಕೋ ಅವುಗಳು ಯಾರಲ್ಲಿ ಇದ್ದರೆ ಅವನನ್ನು ಪಾದ್ರಿ ಮಾಡಬೇಕು. ಮುಸ್ಲಿಮರು ಬಂದು ಹಿಂದೂದೇವಾಲಯಗಳಲ್ಲಿ ಪೂಜೆ ಮಾಡಬೇಕು, ಕ್ರಿಶ್ಚಿಯನ್ನರು ಮಸೀದಿಯಲ್ಲಿ ಪೂಜೆ ಮಾಡಲು ಅದರ ಕ್ವಾಲಿಫಿಕೇಷನ್ ಇದ್ದರೆ ಮಸೀದಿಯಲ್ಲಿ ಹೋಗಿ ಪೂಜೆಮಾಡಬೇಕು. ಯಾರಲ್ಲಿಯೂ ಭೇದಭಾವ ಇರಬಾರದು. ಎಲ್ಲಾ ಧಾರ್ಮಿಕ ಸಂಸ್ಥೆಗಳಿಗೂ ಒಂದೇ ವಿಧವಾದ ಆಡಳಿತ ಕ್ರಮವನ್ನು ಮಾಡಿ ಎಲ್ಲರನ್ನು ಒಟ್ಟು ಗೂಡಿಸಬೇಕೆಂದು ಹೇಳುತ್ತೇನೆ. ಹಿಂದುಗಳಿಗೆ ಈ ಹೊಣೆಗಾರಿಕೆ ಬರಬೇಕು, ಜವಾಬ್ದಾರಿ ಬರಬೇಕು, ಈ ಕೆಲಸ ನಿಮ್ಮಿಂದ ಪ್ರಾರಂಭವಾಗ ಬೇಕು. ಆದುದರಿಂದ ಈ ಮೂಲ ಪರಿವರ್ತನೆ ಕೆಲಸ ಮಾಡಿ ಎಂದು ಹೇಳುತ್ತೇನೆ.

ಈ ಬೋರ್ಡ್ ರಚನೆಯೇನು ಮಾಡಿದ್ದೀರಿ ಈ ವಿಚಾರದಲ್ಲಿ ಸ್ವಲ್ಪ ಹೇಳುತ್ತೇನೆ. ೬ ಜನರಿರಬೇಕೆಂದು ಹೇಳುತ್ತಾರೆ. ಇದರಲ್ಲಿ ಹರಿಜನ ಗಿರಿಜನರಿಗೆ ಪ್ರಾತಿನಿಧ್ಯ ಕೊಡಬೇಕು. ಈ ೬ ಜನರಲ್ಲಿ ಹರಿಜನರಿಗೆ, ಆ ಕ್ಷೇತ್ರದ ಎಂ.ಎಲ್.ಎ.ಗೆ ಅವಕಾಶವಿರಬೇಕು. ಆ ಪ್ರದೇಶದವರಿಗೆ ಇಲ್ಲಿ ಅವಕಾಶ ಮಾಡಿದರೆ ಇಲ್ಲಿನ ಕಾರ್ಯದಲ್ಲಿ ಭಾಗವಹಿಸಲು ಅನುಕೂಲವಾಗುವುದು.

ಕಾರ್ಯ ನಿರ್ವಾಹಕ ಮಂಡಲಿಯಲ್ಲಿ ಎಗ್ಸಿಕ್ಯುಟಿವ್ ಆಫೀಸರಿದ್ದಾರೆ. ಅವರು ಸ್ಯಾಲರೀಡ್‌ಪರ್ಸನ್ ಎಂದು ಕಾಣುತ್ತದೆ. ಇದಕ್ಕೆ ಇಲಾಖೆಯಿಂದ ಒಬ್ಬರನ್ನು ಡೆಪ್ಯೂಟಿ ಮಾಡಿ. ಇಲ್ಲ ಹಣದ ವ್ಯವಹಾರ ನಡೆಯುವುದರಿಂದ ಹಾಗೆ ಮಾಡಬೇಕು. ಹಿಡಿತಬೇಕು. ಸಂಬಳ ಪಡೆಯುವವರನ್ನು ನೇಮಕ ಮಾಡಿದರೆ ಅವರು ಬೇರೆ ಕಡೆ ಹೋಗುವಂತಿಲ್ಲ. ತಹಸೀಲ್ದಾರರೊಬ್ಬರನ್ನು ಮೇಲ್ವಿಚಾರಣೆಗೆ ಡೆಪ್ಯೂಟ್ ಮಾಡಿದರೆ ಅವರು ಎಲ್ಲವನ್ನೂ ನೋಡಿಕೊಳ್ಳುವರು. ಅವರಿಗೆ ಬೇಕಾದವರನ್ನು ಪೂಜಾರಿಯಾಗಿ, ಇತರ ನೌಕರರಾಗಿ ನೇಮಕ ಮಾಡಿಕೊಳ್ಳುವರು. ಎಗ್ಸಿಕ್ಯುಟಿವ್ ಅಧಿಕಾರಿಯ ಮೇಲೆ ತಮ್ಮ ಹತೋಟಿಯಿರಬೇಕು. ಕಮಿಷನರಿಗೆ ಹತೋಟಿಯಿರಬೇಕು, ಸಬಾರ್ಡಿನೇಟ್ ಅಲ್ಲದ್ದರೆ ಹಿಡಿತವಿರುತ್ತದೆ, ಇಲ್ಲದಿದ್ದರೆ ಇಲ್ಲ. ಇಲಾಖೆಯವರನ್ನೇ ಡೆಪ್ಯೂಟಿ ಮಾಡಿದರೆ ಹಿಡಿತ ಹೆಚ್ಚಾಗಿ ಸಿಕ್ಕುವುದು. ಆದುದರಿಂದ ಹಾಗೆ ಮಾಡಿ. ಅವರಿಗೆ ಕ್ವಾಲಿಫಿಕೇಷನ್ ನಿಗಧಿ ಮಾಡಿರುವುದನ್ನು ತೆಗೆದುಹಾಕಬೇಕು. ಹಿಂದೂ ರಾಷ್ಟ್ರದಲ್ಲಿ ಕೆಲಸ ಮಾಡಲು ಹಿಂದೂಗಳೇ ಬೇಕು ಎಂದರೆ ನಾಳೆ ಒಂದು ಪ್ರಶ್ನೆ ಬರುವುದು. ಎಲ್ಲರಿಗೂ ಅವಕಾಶವಿರಬೇಕು.

ದೇವಸ್ಥಾನದ ಹಣದಲ್ಲಿ ಶೇಕಡ ೮ ರಷ್ಟನ್ನು ಅಡ್ಮಿನಿಸ್ಟ್ರೇಟಿವ್ ಫಂಡಿಗೆ ಸೇರಿಸಬೇಕು ಎಂದು ಹೇಳಿದ್ದೀರಿ. ದೇವಸ್ಥಾನದ ಲೆಕ್ಕ ಕೊಟ್ಟಿರುವ ಪ್ರಕಾರ ಸುಮಾರು ೫ ಲಕ್ಷ ರೂಪಾಯಿ ಸಂಗ್ರಹವಾಗುತ್ತದೆ, ಅದರಲ್ಲಿ ಸುಮಾರು ಒಂದು ಲಕ್ಷ ರೂಪಾಯಿವರೆಗೆ ಖರ್ಚಾಗಬಹುದು ಎಂದರೂ ೩-೪ ಲಕ್ಷ ಉಳಿಯುವುದು. ಅದನ್ನು ಅಡ್ಮಿನಿಸ್ಟ್ರೇಟಿವ್ ಫಂಡಿನಲ್ಲಿ ಜಮ ಇಟ್ಟುಕೊಳ್ಳಿ. ಆಸ್ಪತ್ರೆ ಮುಂತಾದುವಕ್ಕೆ ಕೊಡುವುದಾದರೆ ನೀವು ಮಂಜೂರು ಮಾಡಿ ಕೊಡಿ. ಇದಕ್ಕೆ ಬೇಡವೆಂದು ಹೇಳುವುದಿಲ್ಲ. ಸ್ಥಳೀಯ ಸಂಸ್ಥೆಗಳ ಅನುಭವ ನೋಡಿದರೆ ಹೆಚ್ಚು ಹಣ ಅವರಿಗೆ ಕೊಡದೆ ಪ್ರತ್ಯೇಕವಾಗಿಟ್ಟರೆ ಸುರಕ್ಷಿತವಾಗಿರುವುದು ಅನಿಸುತ್ತದೆ. ಸಮಸ್ತ ಪ್ರಜೆಗಳಿಗೂ ಅವಕಾಶವಾಗುವಂತೆ ಬದಲಾವಣೆ ಮಾಡಬೇಕು. ಆದುದರಿಂದ ಹಿಂದೂಗಳಿಗೆ ಮಾತ್ರ ಎಂದಿರುವುದನ್ನು ಬದಲಾಯಿಸಿ ವಿಶಾಲ ತಳಹದಿಯ ಮೇಲೆ ಶಾಸನ ಮಾಡಿ ಎಲ್ಲರಿಗೂ ಅವಕಾಶ ದೊರೆಯುವಂತೆ ಮಾಡಬೇಕು ಎಂದು ಸೂಚಿಸುತ್ತೇನೆ.

† SRI VEERAPPA MOULI (Karkal).—Mr. Speaker, I welcome this Bill and congratulate the Hon. Minister on the boldness he has shown in bringing this Bill before this House, because this is one of the Bills which according to me has brought forth a revolutionary change in temple administration. In fact, the Indian Society has suffered from the barriers which have been created by religion, language and other factors. We know from the history of India that this religious factor sometimes acted as OPIUM much to the detriment of a large number of people. So in view of this, I think this is the first time in the history of our State that such a revolutionary measure has come up I am very confident that the Hon. Minister will not confine himself only to this Bill. I am sure that this must have been the first step as an experiment and in the next session, the Hon. Minister will come forth with bolder bill,—a uniform bill to regulate and control the rest of the temples and muts, where we find a lot of exploitation of the people and misappropriation of the funds.

Even in our Constitution, we say that fraternity and social justice have been given unto ourselves. According to my experience we find that this fraternity is denied to us when we go to temples and this kind of a barrier is put forth in a temple which is meant for propagating the *dharma* propagating social justice and equality in the eyes of God. This has got to be regulated. Unless this is regulated in the temples, I do not think we can get justice or feeling of fraternity outside the temple.

So this cannot be done if this Temple is either in the name of a Trust or is controlled by some monopolists or by private persons or by some family. From a reading of the Bill, I find out that this Temple was a trust administered under the Public Trusts Act.

5-00 P.M.

We can classify these temples into two categories: (1) temples managed privately, and (2) temples managed under public trusts. In both managements we find that malpractices and misappropriations cannot be stopped. The Bill provides that the money of the Temple has to be used for developing the Temple and providing better amenities to the pilgrims. This can be done by providing a better

(Sri Veeappa Mouli)

administration. Generally these temple funds are misused. It is known to every one that the funds of the temples are used to build either a theatre or for sponsoring the election of a candidate or for building a shop or posh hotel. If public funds are used for the purpose I narrated, then the very object with which the administration of a temple is entrusted to a Public Trust will be defeated. Wealth and funds give power. It is meant to be administered with Dharma. On the other hand, wealth can also be used for exploiting society playing on the sentiments of the people. So if this wealth at the disposal of religious institutions is misused, the basic structure of democracy itself will be defeated. During all these 26 years of independence, we have seen that these Mutts and Temples are not managed well. In fact, the resources of these temples and Mutts have been generally misused and 95 per cent of the resources are used for exploitation or for misuse of power. I sincerely feel that our Hon. Minister for Revenue has been emboldened to bring this measure after successfully getting the Land Reforms Act passed. He has been introducing progressive revolutionary measures one by one. I do not wish to add any thing more except hoping that this is only an experimental measure and that he will bring a uniform bill for the better administration of all temples and religious institutions in the State.

† ಶ್ರೀ ವಿ. ಎನ್. ಪಾಟೀಲ್ (ಹುಮನಾಬಾದ್).—ಮಾನ್ಯ ಅಧ್ಯಕ್ಷರೇ ಈ ಹಿಂದೆ ಆಗಲೇ ಮಾತನಾಡಿದ ನನ್ನ ಕೆಲವು ಮಿತ್ರರು ಈ ಮಸೂದೆಯನ್ನು ಒಂದು ಪ್ರಯೋಗಾರ್ಥವಾಗಿ ತಂದಿದ್ದಾರೆ ಎಂಬುದಾಗಿ ಹೇಳಿದರು. ಹಾಗೆ ಅವರು ಹೇಳಿದ ಮಾತನ್ನು ನಾನು ಕೆಲವು ಮಟ್ಟಿಗಾದರೂ ಒಪ್ಪಲೇ ಬೇಕು. ಆದರೆ ಇದರಲ್ಲಿ ನಾವು ಪ್ರಾರಂಭ ಮಾಡುವಾಗಲೇ ತಪ್ಪನ್ನು ಮಾಡುತ್ತ ಹೊರಟರೆ ಮುಂದೆ ಈ ತಪ್ಪುಗಳಿಗೆ ಇತಿಮಿತಿ ಇರುವುದಿಲ್ಲ. ಆದುದರಿಂದ ನಮ್ಮಲ್ಲಿ ಏನು ಒಂದು ಹೇಳುತ್ತೇವೆಂದರೆ ಯಾವುದಾದರೊಂದು ಕಾರ್ಯವನ್ನು ಪ್ರಾರಂಭಮಾಡತಕ್ಕ ಕಾಲದಲ್ಲಿ 'ಬಿಸ್ಮಿಲ್ಲಾ ಹಿರ್ ರಹ್ಮಾನ್ ನಿರ್‌ರಹೀಂ' ಎಂದು ಹೇಳುವುದು ವಾಡಿಕೆ ನಮ್ಮ ಹೈದರಾಬಾದಿನಲ್ಲಿದೆ. ಹೈದರಾಬಾದಿನಲ್ಲಿ 'ಬಿಸ್ಮಿಲ್ಲಾ ಹಿರ್ ರಹ್ಮಾನ್' ಎಂಬ ಒಂದು ಚರ್ಚೆ ಇದೆ. ಆ ದೃಷ್ಟಿಯಿಂದ ಈ ಬಿಲ್ಲನ್ನು ನೋಡಿದರೆ ಇದರಲ್ಲಿ ಕೆಲವು ತಪ್ಪುಗಳು ಕಂಡು ಬರುತ್ತವೆ. ನಾವು ಈ ದಿವಸ ಹೇಳುತ್ತಿರುವುದು ರಾಜ್ಯದಲ್ಲಿ ಸೋಷಿಯಾಲಿಜಮ್ಮನ್ನು ಜಾರಿಗೆ ತರುತ್ತೇವೆ ಎಂದು. ಆದರೆ ನಾವು ತರಲಿಕ್ಕೆ ಹೊರಟಿರುವ ಸೋಷಿಯಲಿಜಂ ಯಾವುದು ಎಂದು ಅದು 'ಇಟೋಪಿಯನ್ ಸಿವಿಲೆಜೇಷನ್' ಇದ್ದ ಹಾಗೆ ನನಗೆ ಭಾಸವಾಗುತ್ತಿದೆ. ಆದರೆ ಇಂಥದಕ್ಕೆ ಅವಕಾಶವಾಗಬಾರದು. ಇಲ್ಲಿಯ ತನಕ ಜನರೇನು ಒಂದು ತುಳಿತಕ್ಕೆ ಸಿಕ್ಕಿ ನರಳುತ್ತಿದ್ದರು ಅವರೆಲ್ಲರ ಕಲ್ಯಾಣ ಸಾಧನೆಯಾಗಬೇಕಾಗಿದ್ದರೆ ಅವರ ಅಭ್ಯುದಯಕ್ಕೆ ಅಡ್ಡಿಯಾಗಿ ನಿಲ್ಲತಕ್ಕ ಎಲ್ಲಾ ರಾಕ್ಷಸರನ್ನೂ ಇನ್ನು ಬರುವುದಕ್ಕೆ ಬಿಡುವುದಿಲ್ಲ ಎಂಬ ಒಂದು ಹೊಸಬೆಳಕನ್ನು ಚೆಲ್ಲತಕ್ಕ ಕಾಯಿದೆಯನ್ನು ಮಾನ್ಯ ಸಚಿವರು ಈ ಮನೆಯ ಮುಂದೆ ತರಬೇಕಾಗಿತ್ತು. ಆದರೆ ಈ ದಿನಸ ಮಾನ್ಯ ಸಚಿವರು ಮಂಡಿಸತಕ್ಕ ಖಾಯಿದೆಯಲ್ಲಿ ಯಾವ ಅಂಥ ಒಂದು ಸೈಂಟಿಫಿಕ್ಕಾದ ಸೋಷಿಯಲಿಜಂ ಇದ್ದಂತೆ ನನಗೆ ಕಂಡುಬರುತ್ತಿಲ್ಲ. ದೇವರ ಬಾಗಿಲಲ್ಲಿ ದೇವರಲ್ಲಿ ನಂಬಿಕೆ ಇಲ್ಲದವನು ಜನರನ್ನು ಶೋಷಣೆ ಮಾಡುವುದಕ್ಕೆ ಕುಳಿತಿದ್ದಾನೆ. ದೇವರಲ್ಲಿ ನಂಬಿಕೆಯಿಲ್ಲದ ಜನರು ದೇಶದ ಹೆಸರಿನಲ್ಲಿ ಹಣವನ್ನು ದುರುಪಯೋಗ ಮಾಡುತ್ತಿದ್ದಾರೆ. ಆದರೆ ಮಾನ್ಯ ಕಬಾಡಿಯವರು ಈ ದೇವರಿಗೆ ಇರತಕ್ಕ ಭಕ್ತರಲ್ಲಿ ಬಹಳಮಂದಿ ಹರಿಜನರೇ ಇದ್ದಾರೆಂದು ಬೇಳಿದರು. ಈ ದಿವಸ ನಮ್ಮ ಭಾರತ ವರ್ಷದ ಇತಿಹಾಸದಲ್ಲಿ ಹಾಗೂ ನಮ್ಮ ಕರ್ನಾಟಕ ಇತಿಹಾಸದಲ್ಲಿ ನಾನು ಇಂಥ ಒಂದು ಆತಂಕ ಪದ್ಧತಿಯನ್ನು—ಕೆಟ್ಟ ಪದ್ಧತಿಯನ್ನು ಬೇರಾವ ದೇವಸ್ಥಾನದಲ್ಲೂ ನೋಡಲಿಲ್ಲ. ಈ ದೇವಸ್ಥಾನಕ್ಕೆ ಆ ಭಾಕ್ತಾದಿಗಳ ಮನೆಯಲ್ಲಿ

ಹುಟ್ಟತಕ್ಕ ನಾಲ್ಕು ಹೆಣ್ಣು ಮಕ್ಕಳಲ್ಲಿ ಒಂದನ್ನು ದೇವದಾಸಿಯನ್ನಾಗಿ ಬಿಡಬೇಕಂತೆ. ಇದೆಂಥ ಮೂಢ ನಂಬಿಕೆ ? ಇದು ಇವರಲ್ಲಿ ಎಷ್ಟುಕಾಲದಿಂದ ಬೆಳೆದು ಬಂದಿದೆ ? ಇದು ಎಂಥ ಹಿಂದೂ ಸಂಸ್ಕೃತಿ ? ಮಗು ಹುಟ್ಟುವುದಕ್ಕೆ ಮೊದಲೇ ಹೆಣ್ಣಿಗೆ ಗಂಡಸಿಲ್ಲ—ನೀವು ದೇವದಾಸಿಯಾಗಬೇಕು ಎಂದು ಒಬ್ಬ ಹೆಣ್ಣುಮಗಳ ಭವಿಷ್ಯ ನಿರ್ಧರ ಮಾಡತಕ್ಕದ್ದು ಯಾವ ಸಂಸ್ಕೃತಿ ? ಹಾಗೆ ಬಿಡದಿದ್ದರೆ ಆ ಮನೆಯಲ್ಲಿ ತಂದೆ ತಾಯಿಗಳಿಗೆ ಕಣ್ಣು ಹೋಗುತ್ತದೆಂದು ಹೆದರಿಸುವುದು ಬೇರೆ ಹೀಗೆ ಸಮಾಜವನ್ನು ಎಕ್ಸ್‌ಪ್ಲಾಯಿಟೇಶನ್ ಮಾಡತಕ್ಕ ದೇವರನ್ನು ಏನೆಂದು ಕರೆಯಬೇಕು ? ಆದರೆ ಆ ದೇವರ ಬಗ್ಗೆ ಎಳ್ಳಷ್ಟೂ ನಂಬಿಕೆ ಇಲ್ಲದ ಅದರ ಹಣವನ್ನು ದುರುಪಯೋಗ ಮಾಡತಕ್ಕ ಜನರಿಗೆ, ಅಥವಾ ಬೇರೆ ಅನ್ಯಾಯಗಳನ್ನು ದೇವರ ಹೆಸರಲ್ಲಿ ನಡೆಸತಕ್ಕ ಜನರಿಗೆ ಯಾರಿಗೂ ಆ ದೇವರು ಕಣ್ಣನ್ನು ಇಲ್ಲಿಯವರೆಗೆ ಕಳೆದಿಲ್ಲ. ಆದರೆ ಈ ದಿವಸ ಈ ದೇವಸ್ಥಾನದ ಆದಾಯವನ್ನು ದರೋಡೆ ಮಾಡುತ್ತಿದ್ದ ಹಗಲುಗಳ್ಳರ ಕೈಲಿದ್ದ ಕೀಲಿಯನ್ನು ಇನ್ನು ಮುಂದೆ ಮಾನ್ಯ ಸಚಿವರು ರಾತ್ರಿದರೋಡೆಕೋರರಿಗೆ ಒಪ್ಪಿಸುತ್ತಿದ್ದಾರೆ. ಆದುದರಿಂದ ಈ ಮಸೂದೆಯಲ್ಲಿ ಯಾವ ಒಂದು ಸೋಷಿಯಲಿಜಂ ತತ್ವವು ಅಡಕವಾಗಿಲ್ಲ.

ಇನ್ನು ಅಲ್ಲಿ ಪೂಜೆ ಮಾಡತಕ್ಕ ಪೂಜಾರಿಗೆ ತೀರ್ಥಪ್ರಸಾದಗಳನ್ನು ಕೊಡತಕ್ಕವನಿಗೆ ಸರಿಯಾಗಿ ಮಂತ್ರ ಹೇಳುವುದಕ್ಕೆ ಬರಬೇಕೆಂದು ಹೇಳಿದೆ. ಆದರೆ ಹಾಗೆ ಅವರು ಹೇಳತಕ್ಕ ಮಂತ್ರಗಳು ಸರಿಯೋ ಅಲ್ಲವೋ ಎಂಬುದನ್ನು ಪರೀಕ್ಷೆಮಾಡುವುದಕ್ಕೆ ಸರಿಯಾಗಿ ಮಂತ್ರಗಳನ್ನರಿತವರೆ ಮಂತ್ರಿಗಳಾಗಬೇಕು. ಇದು ಸಾಧ್ಯವೇ ? ಇಲ್ಲಿ ಮಾನ್ಯ ಮಂತ್ರಿಗಳಿಗೂ ಮಂತ್ರ ಬರುವುದಿಲ್ಲ. ಅಂದಾಗ ಇನ್ನು ಆ ಪೂಜಾರಿಗಳಿಗೇಕೆ ಈ ನಿರ್ಬಂಧ ? ಅಲ್ಲಿ ಪೂಜಾರಿ 'ಸಾವಿರ ಸಮರ್ಪಣೆ' ಅಂದಾಗ ಆ ತಟ್ಟೆಯಲ್ಲಿಒಂದು ಸಾವಿರ ರೂಪಾಯಿಗಳನ್ನು ಭಕ್ತರುಗಳು ಹಾಕಬೇಕು. ಆದರೆ ಅವರಲ್ಲಿ ಭಕ್ತಿ ಇರಲಿ ಇಲ್ಲದಿರಲಿ ಅದು ಮುಖ್ಯವಲ್ಲ ಅದಕ್ಕೆ ಹೇಳಿದ್ದಾರೆ 'ಪಾಡಿ ಮಾಡಿ ಕೆಟ್ಟರು ಮನವಿಲ್ಲದೆ' ಎಂದು. ಇಂಥ ಮೂಢ ನಂಬಿಕೆಗಳ ಬಗ್ಗೆ ಹೋರಾಟಮಾಡಬೇಕು ಜನರನ್ನು ಎಕ್ಸ್‌ಪ್ಲಾಯಿಟ್ ಮಾಡುತ್ತಿರುವುದನ್ನು ತಡೆಗಟ್ಟಬೇಕು. ದೇವರ ಹೆಸರಿನಲ್ಲಿ ಎಕ್ಸ್‌ಪ್ಲಾಯಿಟ್ ಮಾಡುವುದನ್ನು ಇಂದು ಕೂಡ ನಿಲ್ಲಿಸುವುದಕ್ಕೆ ಸಾಧ್ಯವಾಗಿಲ್ಲ. ಆದುದರಿಂದ ಅಂಥದನ್ನು ಜಾರಿಗೆ ತರುವುದಕ್ಕೆ ಸರ್ಕಾರದವರು ಒಂದು ಸೈಂಟಿಫಿಕ್ಕಾದಂಥ ಸೋಷಿಯಲಿಜಂ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ನಮ್ಮ ದೇಶದಲ್ಲಿ ಈಗ ಎಷ್ಟೋ ಧರ್ಮಗಳಿವೆ. ಮೈಸೂರು ರಾಜ್ಯದಲ್ಲಿ ನಾನು ನೋಡಿದ ಹಾಗೆ ದೇವಸ್ಥಾನದ ಹೆಸರಿನೊಳಗೆ ಎಷ್ಟೋ ದುರುಪಯೋಗ ನಡೆದಿದೆ. ನಡೆಯುತ್ತಲೂ ಇದೆ. ಅದನ್ನು ಸರ್ಕಾರದವರು ಕೂಡಲೆ ನಿಲ್ಲಿಸಬೇಕು. ಈ ರೀತಿ ದುರುಪಯೋಗವನ್ನು ಕೂಡಲೇ ಸರ್ಕಾರದವರು ತಡೆಗಟ್ಟದಿದ್ದರೆ ನಿಜವಾಗಿ ನಾಳೆ ಅನ್ನ ಈ ದೇಶದಲ್ಲಿ ಸಿಗುವುದಿಲ್ಲ. ಹಿಂದಿನ ಸಂಸ್ಕೃತಿ ಏನಿದೆಯೋ ಅದನ್ನು ಈಗಿನ ಸನ್ನಿವೇಶಕ್ಕೆ ತಕ್ಕಂತೆ ಮಾರ್ಪಾಡು ಮಾಡಿಕೊಂಡು ಹೊಸ ಅಧ್ಯಾಯವನ್ನು ಮಾಡಬೇಕಾಗಿದೆ. ನಾನು ನಾಲ್ಕೈದು ವರ್ಷಗಳ ಕಾಲ ಇಲ್ಲಿ ಎಂ. ಎಲ್. ಎ. ಆಗಿರಬಹುದು. ಆದರೆ ಯಾವಾಗಲೂ ಎಂ. ಎಲ್. ಎ. ಆಗಿರುವುದಿಲ್ಲ. ಏಜ್ ಲಿಮಿಟ್ ಮುಂದೆ ಇದಕ್ಕೂ ಮಾಡಬಹುದು. ನಾನು ಕಮ್ಯೂನಿಸ್ಟ್. ದೇವರಮೇಲೆ ನಂಬಿಕೆ ಇಲ್ಲ. ನಾವು ದೇವಸ್ಥಾನಕ್ಕೆ ಹೋಗುವುದಿಲ್ಲ. ನಾನು ನಾಸ್ತಿಕನಿರಬಹುದು. ನನಗೆ ಅಲ್ಲಿಗೆ ಹೋಗುವುದಕ್ಕೆ ಅನರ್ಹತೆ ಇದೆಯೆಂದು ಹೇಳಬಹುದು. ನೌಕರಿಗಳನ್ನು ಕೊಡುವುದರಲ್ಲಿ ನಿಮ್ಮ ಪಂಗಡದವರಿಗೆ ಈ ಸರ್ಕಾರ ಡಿಸ್ಕ್ರಿಮಿನೇಷನ್ ಮಾಡುತ್ತಿದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಬಿಲ್ಲಿನ ಬಗ್ಗೆ ಮಾತನಾಡುವುದು ಒಳ್ಳೆಯದು.

ಶ್ರೀ ವಿ. ಎನ್. ಪಾಟೀಲ್.—ಪೂಜಾರಿಗಳಾಗಿರುವವರು ಯಾವ ಕಮ್ಯೂನಿಟಿಯವರೇ ಆಗಿರಲಿ ಅವನನ್ನು ಪೂಜಾರಿ ಅಂದ ಮೇಲೆ ಅವನ ಬಗ್ಗೆ ಹಿಂದೂ ಎಂಬ ಪದವನ್ನು ಉಪಯೋಗಿಸತಕ್ಕ ಒಂದು ಸಂಪ್ರದಾಯವನ್ನು ತೆಗೆಯಬೇಕು. ಎಲ್ಲ ದೇವಸ್ಥಾನಗಳಿಗೂ ಅನ್ವಯವಾಗುವಂತೆ ಒಂದು ಕಾಂಪ್ರೆಹೆನ್ಸಿವ್ ಕಾಯಿದೆಯನ್ನು ತರಬೇಕೆಂದು ನಾನು ಸೂಚಿಸುತ್ತೇನೆ. ಯಾವ ದೇವಸ್ಥಾನದಲ್ಲಿ ಯಾವ ಧರ್ಮವೇ ಇರಲಿ ಅದು ಹಿಂದೂ ಧರ್ಮವಾಗಿರಲಿ, ಸಿಕ್ ಧರ್ಮವಾಗಿರಲಿ, ಜೈನ ಧರ್ಮವಾಗಿರಲಿ ಅಥವಾ ಮುಸ್ಲಿಂ ಧರ್ಮವಾಗಿರಲಿ, ಎಲ್ಲ ಧರ್ಮಗಳಿಗೂ ಅನ್ವಯವಾಗುವಂಥ ಒಂದು ಕಾಂಪ್ರೆಹೆನ್ಸಿವ್ ಕಾಯಿದೆಯನ್ನು ಇಲ್ಲಿ ತರಬೇಕು. ಏಕೆಂದರೆ ನಮ್ಮ ಕಾನ್‌ಸ್ಟಿಟ್ಯೂಷನ್ ಆರ್ಟಿಕಲ್ಸ್ ೨೫, ೨೬ ಮತ್ತು ೨೭ರ ವಿರೋಧವಾಗಿ ನಾವು ಈಗ ಹೋಗುತ್ತಿದ್ದೇವೆ. ಈ ಎಲ್ಲಮ್ಮ ದೇವಸ್ಥಾನಕ್ಕೆ ನಾನೂ ಹೋಗುತ್ತೇನೆ. ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರೂ ಹೋಗುತ್ತಾರೆ. ಅನೇಕ ಪ್ರದೇಶಗಳಿಂದ ಹೆಚ್ಚು ಜನರು ಯಾತ್ರಿಕರಾಗಿ ಹೋಗುತ್ತಾರೆ. ಅಲ್ಲಿ ತಲೆ ಬಗ್ಗಿಸಬೇಕು, ಸುಳ್ಳು ಹೇಳುವುದಕ್ಕಾಗುವುದಿಲ್ಲ. ಒಂದು ಒಳ್ಳೆಯ ಸಂಸ್ಕೃತಿಯನ್ನು ನಾವು ಅಲ್ಲಿ ಕಾಣಬಹುದು. ಆದರೆ ಅಲ್ಲಿ ಸೆಕ್ಯುಲರ್ ಸ್ಟೇಟ್ ಕ್ಯಾರಕ್ಟರಿಗೆ ವಿರೋಧ

(ಶ್ರೀ ಎ. ಎನ್. ಪಾಟೀಲ್)

ವಾಗಿ ಹೋಗುತ್ತಿದ್ದೇನೆ. ಅಲ್ಲಿಗೆ ಹೋಗತಕ್ಕ ಯಾತ್ರಿಕರಲ್ಲಿ ಟ್ಯಾಕ್ಸ್ ಕಲೆಕ್ಷನ್ ಎಂಬುದಾಗಿ ಕಲೆಕ್ಟ್ ಮಾಡುತ್ತಿದ್ದಾರೆ. ಕ್ಲಾಜುಗಳ ಬಗ್ಗೆ ಹೇಳುವುದಾದರೆ, ಈ ದೇವಸ್ಥಾನದ ಫಂಡ್ಸನ್ನು ಉಪಯೋಗ ಮಾಡುವ ಬಗ್ಗೆ ಹೇಳುವುದಾದರೆ. Clause 25 (x) is opposed to the principle of right of religious freedom, as also 25 (viii) which lays that the Devasthana Funds may be utilised for the training of pujaris to per-from the religious worship and ceremonies in the Davesthana; and 25 (ix) which provides to use the funds for the propagation of tenets and phiosophy associated with the Devasthana. ನಿಮ್ಮ ಸೆಕ್ಯುಲರಿಜಂ ಹಿಪೊಕ್ರಿಟಿಕಲ್ ಆಗುತ್ತದೆ. ಅದು ಟ್ರು ಸೆಕ್ಯುಲರಿಜಂ ಆಗುವುದಿಲ್ಲ. ಅಲ್ಲಿ ಮಂತ್ರ, ತಂತ್ರ ಮಾಡತಕ್ಕಂಥ ಕೆಲವರಿಗೆ ಮಾತ್ರ ಟ್ರೈನಿಂಗ್ ಕೊಡುವುದಕ್ಕೋಸ್ಕರ ದುಡ್ಡು ಖರ್ಚುಮಾಡುತ್ತಾರೆ. ಆ ದೇವಸ್ಥಾನದಿಂದ ಬಂದಂಥ ದುಡ್ಡು ಸ್ಟೇಟ್ ಫಂಡ್ ಆಗುತ್ತದೆ. ಸ್ಟೇಟ್ ಪ್ರಾಪರ್ಟಿ ಆಗುತ್ತದೆ. ದೇವಸ್ಥಾನಕ್ಕೆ ಬರುವ ಯಾತ್ರಿಕರಿಂದ ವಸೂಲಾದಂಥ ತೆರಿಗೆಯೂ ಸಹ ಸ್ಟೇಟ್ ಪ್ರಾಪರ್ಟಿಯಾಗುತ್ತದೆ. ಅದು ಪ್ರತ್ಯೇಕವಾಗಿ ಒಂದು ರಿಲಿಜಿಯಸ್ ಪ್ರಾಪರ್ಟಿಯಾಗುವುದಿಲ್ಲ ಅದನ್ನು ಉಪಯೋಗಮಾಡುವಾಗ, ದೇವಸ್ಥಾನದ ಅಭಿವೃದ್ಧಿಯ ಕಡೆ ಗಮನ ಕೊಡಬೇಕು. ಇದು ಒಂದು ದೊಡ್ಡ ಪ್ರಶ್ನೆ. ಅದಕ್ಕೆ ಸರ್ಕಾರ ಉತ್ತರ ಕೊಡಬೇಕು. ಒಂದು ಹೇಳಿ ಅದರಲ್ಲಿ ಸ್ವಲ್ಪಭಾಗ ದೇವಸ್ಥಾನದ ಪ್ರಾಪರ್ಟಿಯಾದರೂ ಅದರ ಬಗ್ಗೆ ಆ ದೇವಸ್ಥಾನಕ್ಕೆ ಏನು ಫ್ರೀಡಂ ಕೊಟ್ಟಿದೆ ಎಂಬುದನ್ನು ಕಾನ್ಸ್ಟಿಟ್ಯೂಷನ್ನಿನಲ್ಲಿ ಕೊಟ್ಟಿಲ್ಲ. ಸೆಕ್ಯುಲರ್ ಸ್ಟೇಟ್ ಕ್ಯಾರೆಕ್ಟರಿಗೆ ವಿರೋಧವಿಲ್ಲದ ಹಾಗೆ ಇಂತಹ ಇನ್‌ಸ್ಟಿಟ್ಯೂಷನ್‌ಗಳನ್ನು ಮಾಡಬೇಕು, ಕ್ಲಾಜುಗಳನ್ನು ತೆಗೆಯಬೇಕು ಹಿಂದೂ ಫಿಲಾಸಫಿಗೆ ಮಾತ್ರ ರಕ್ಷಣೆ ಕೊಟ್ಟು ಬೇರೆ ಫಿಲಾಸಫಿಗಳಿಗೆ ಅನ್ಯಾಯ ಮಾಡುವಂತೆ ಮಾಡಬಾರದು. ಒಂದೇ ಧರ್ಮದ ಫಿಲಾಸಫಿ ಮಾತ್ರ ನೋಡಬಾರದು. ಆಗ ನಾವು ಮುಳ್ಳುಮೇಲೆ ನಡೆದಂತೆ ಆಗುತ್ತದೆ. ಇದರಿಂದ ಹಿಂದೆ ಸಾವಿರಾರು ಅನ್ಯಾಯಗಳಾಗಿವೆ. ರಕ್ತಪಾತವಾಗಿದೆ. ಇವತ್ತಿನ ರಾಜಕೀಯದಲ್ಲಿ ಬಂಡವಾಳಷಾಹಿಗಳಿಂದ ಈ ರಾಜ್ಯದಲ್ಲಿ ದೇವಸ್ಥಾನಗಳ ದುಡ್ಡು ದುರುಪಯೋಗವಾಗುತ್ತಾ ಇದೆಯೇ ಹೊರತು, ಅನೇಕ ಒಳ್ಳೆಯ ಕೆಲಸಗಳಿಗೆ ವಿನಿಯೋಗವಾಗುತ್ತಾ ಇಲ್ಲ. ಆದ್ದರಿಂದ ಈ ಕ್ಲಾಜುಗಳನ್ನು ಈ ಮಸೂದೆಯಿಂದ ಡಿಲೀಟ್ ಮಾಡಬೇಕು.

ಇನ್ನು ಆರ್ಟಿಕಲ್ ೨೫, ೨೬ ಮತ್ತು ೨೭ಕ್ಕೆ ಈ ಕಾನೂನುಗಳು ಹೇಗೆ ವಿರೋಧ ವಾಗುತ್ತವೆ ಯೆಂಬುದನ್ನು ಹೇಳುತ್ತೇನೆ. 25 (x) restricts the use of funds to the training of persons belonging only to the Hindu Community who are devoteer of the Davasthana in the performence of religious worship and ceremoies of the Devasthana. ದೇವಸ್ಥಾನದೊಳಗೆ ಹೋಗುವಾಗ ಯಾವ ಮನುಷ್ಯನಿಗೆ ಆಗಲೀ ಯಾವ ಒಂದು ಜನಾಂಗದ ಧರ್ಮದ ಪ್ರಶ್ನೆ ಬರಬಾರದು. It is opposed to artical 27 of the Constitution which lays down: "No person shall be compelled to pay any taxes, the proceeds of which are specifically appropriated in payment of expenses for the promotion or maintena-nce of any particular relegious or religious denomination."

ದೇವಸ್ಥಾನಕ್ಕೆ ಹೋಗುವವರು ಅಲ್ಲ ಮೂಲಭೂತವಾದ ಸಿದ್ಧಾಂತಗಳ ಮೇಲೆ ಚರ್ಚೆ ಮಾಡಬೇಕಾಗಿಲ್ಲ. ಹಾಗೆ ಅಲ್ಲಿ ಹೋದ ವ್ಯಕ್ತಿಯಿಂದ ಕಂಪಲ್ಸರಿಯಾಗಿ ಟ್ಯಾಕ್ಸ್ ವಸೂಲು ಮಾಡಿ ಅದನ್ನು ಹಿಂದೂ ಧರ್ಮದ ಫಿಲಾಸಫಿಗೆ ಖರ್ಚು ಮಾಡುತ್ತೇವೆಂದು ಹೇಳಿದರೆ ಅದು ಆರ್ಟಿಕಲ್ ೨೭ಕ್ಕೆ ವಿರೋಧವಾಗುತ್ತದೆ. ಇನ್ನೊಂದು—ಈ ಬಿಲ್ಲಿನಲ್ಲಿ ಲೋನ್ಸ್ ಅಂಡ್ ಬೋರೋಯಿಂಗ್ಸ್ ಪವರ್ಸ್ ಬಗ್ಗೆ ಹೇಳಿದ್ದೀರಿ. ಆದರೆ ಯಾರಿಗಾದರೂ ಅಲ್ಲಿಯ ಫಂಡಿನಿಂದ ಸಾಲ ಕೊಡುವಂತಹ ಅಧಿಕಾರವನ್ನು ಅಲ್ಲಿರತಕ್ಕಂತಹ ಅಧಿಕಾರಿಗಳಿಗೆ ಕೊಡಬೇಡಿ. ಬೇಕಾದರೆ ನಮ್ಮ ರಾಜ್ಯದಲ್ಲಿರತಕ್ಕಂತಹ ಇರಿಗೇಷನ್ ಪ್ರೊಜೆಕ್ಟುಗಳಿಗೆ, ಪವರ ಪ್ರೊಜೆಕ್ಟುಗಳಿಗೆ ಮಿಕ್ಕಿದ ಹಣವನ್ನು ಉಪಯೋಗಿಸಿ. ಅಲ್ಲಿಯ ಅಧಿಕಾರಿಗಳಿಗೆ ಇವರ ಬಗ್ಗೆ ಲೋನ್ಸ್ ಕೊಡುವುದಕ್ಕೆ ಅಧಿಕಾರ ಕೊಟ್ಟರೆ ಅಲ್ಲಿ ಕುಂಭಕೋಣ ನಡೆದು ಹೋಗುತ್ತದೆ. ಇವತ್ತು ದೇವಸ್ಥಾನದ ದುಡ್ಡನ್ನು ಪಟ್ಟಭದ್ರ ಶಕ್ತಿಗಳು ಉಪಯೋಗಿಸುತ್ತಿದ್ದಾರೆ. ದೇವಸ್ಥಾನಕ್ಕೆ ಎಷ್ಟು ದುಡ್ಡು ಬೇಕು ಅಷ್ಟು ದುಡ್ಡನ್ನು ಖರ್ಚು ಮಾಡಿ, ಉಳಿದದನ್ನು ರಾಜ್ಯದ ಆರ್ಥಿಕ ಮಟ್ಟವನ್ನು ಸುಧಾರಣೆ ಮಾಡುವುದಕ್ಕೆ ಬೇಕಾದ ಯೋಜನೆಗಳಿಗೆ ಉಪಯೋಗಿಸಬಹುದು. ಆ ಮೇಲೆ ಇದರಲ್ಲಿ ಅಧಿಕಾರಿಗಳು

ಯಾರಾದರೂ ದುರುಪಯೋಗ ಮಾಡಿದರೆ, ಅವರಿಂದ ೮ ಪರ್‌ಸೆಂಟ್ ಸರಚಾರ್ಜ್ ವಸೂಲು ಮಾಡಬಹುದು ಎಂದು ಹೇಳಿದ್ದೀರಿ. ಈ ರೀತಿ ಮಾಡಿದರೆ ಇದು ಬ್ಯಾಂಕ್ ರೇಟಿಗಿಂತಲೂ ಕಡಿಮೆ ಇದೆ ಎಂದು ಒಂದು ೨ ಲಕ್ಷ ರೂಪಾಯಿ ಬೇಕಾದರೆ ಹೊಡೆದರೂ ಹೊಡೆಯಬಹುದು. ನಾನಾದರೂ ಹೇಳುವುದು ಅಂಥ ಅಧಿಕಾರಿಗಳಿಂದ ದುರುಪಯೋಗ ಹಣದ ಎರಡರಷ್ಟು ವಸೂಲು ಮಾಡುವುದಲ್ಲದೆ, ಅವರನ್ನು ಕೆಲಸದಿಂದ ಡಿಸ್ಮಿಸ್ ಮಾಡಬೇಕು. ಅಧಿಕಾರಿ ಯಾರೇ ಆಗಲಿ ದುರುಪಯೋಗ ಮಾಡಿದರೆ ಆತನನ್ನು ಡಿಸ್ಮಿಸ್ ಮಾಡುವಂತಹ ಪ್ರೊವಿಜನನ್ನು ಇದರಲ್ಲಿ ಸೇರಿಸಬೇಕು; ಕೊನೆಯದಾಗಿ, ಇಲ್ಲಿರತಕ್ಕಂತಹ ಕಮಿಟಿಗಳಲ್ಲಿ ಹರಿಜನ ಸದಸ್ಯರನ್ನು ನೇಮಕ ಮಾಡುವುದಕ್ಕೆ ಒಂದು ಪ್ರೊವಿಜನನ್ನು ಇಡಬೇಕು. ಹಿಂದೆ ಎಲ್ಲಮ್ಮ ದೇವಸ್ಥಾನದ ಹೆಸರು ಹೇಳಿ ಅನೇಕ ಹರಿಜನರನ್ನು ಎಕ್ಸ್‌ಪ್ಲಾಯಿಟ್ ಮಾಡಿದ್ದಾರೆ. ಆದ್ದರಿಂದ ಮ್ಯಾನೇಜಿಂಗ್ ಕಮಿಟಿ ಮತ್ತು ಎಕ್ಸಿಕ್ಯುಟಿವ ಕಮಿಟಿಯಲ್ಲಿ ಹರಿಜನರಿಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಮಾನ್ಯ ಉಪಾಧ್ಯಕ್ಷರೆ, ಮುಜರಾಯಿ ಇಲಾಖೆಯ ಸಚಿವರು ಮಂಡಿಸಿರತಕ್ಕಂತಹ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಾ ನಾಲ್ಕು ಮಾತುಗಳನ್ನು ಹೇಳುತ್ತೇನೆ, ಸೌಂದತ್ತಿ ಎಲ್ಲಮ್ಮ ದೇವಸ್ಥಾನ ಮತ್ತು ಕ್ಷೇತ್ರ ಬಹಳ ಪ್ರಾಚೀನವಾದುದು ಮತ್ತು ಆ ಭಾಗದಲ್ಲಿ ಹೆಚ್ಚಿನ ಜನರನ್ನು ಆಕರ್ಷಣೆ ಮಾಡತಕ್ಕಂತಹ ದೇವಸ್ಥಾನ. ನಮ್ಮ ಸಮಾಜದಲ್ಲಿ ಎಲ್ಲಿಯವರೆಗೆ ದೇವರಲ್ಲಿ ಮತ್ತು ಧರ್ಮ ಸಂಸ್ಥೆಗಳಲ್ಲಿ ಭಕ್ತಿ ಇರುತ್ತದೋ, ಅಲ್ಲಿಯವರೆಗೆ ಅವರು ಧರ್ಮ ಸಂಸ್ಥೆಗಳಿಗೆ ಮತ್ತು ದೇವಸ್ಥಾನಗಳಿಗೆ ಹೋಗುತ್ತಾರೆ. ಅಂದ ಮೇಲೆ ಅಲ್ಲಿಯ ವ್ಯವಹಾರಗಳನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಒಂದು ಕಾನೂನು ಬೇಕು. ಅದನ್ನು ಗಮನದಲ್ಲಿಟ್ಟುಕೊಂಡು ಈ ಮಸೂದೆಯನ್ನು ಮಂಡಿಸಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕಂತಹ ಎಲ್ಲಾ ಪ್ರಾಮುಖ್ಯ ದೇವಸ್ಥಾನಗಳಿಗೂ ಸಂಬಂಧಪಟ್ಟಂತೆ ಒಂದು ಏಕರೂಪವಾದ ಕಾನೂನನ್ನು ತಂದಿದ್ದರೆ ಚೆನ್ನಾಗಿತ್ತು. ಏಕೆಂದರೆ ಈಗಿನ ಕಾಲದಲ್ಲಿ ಅದು ಅವಶ್ಯಕವಾಗಿ ಬೇಕಾಗಿದೆ, ನಮ್ಮ ಸಮಾಜದಲ್ಲಿ ಜಾತ್ಯಾತೀತೆಯ ದೃಷ್ಟಿಯಲ್ಲಿ ಅವುಗಳ ಆಡಳಿತವನ್ನು ನಡೆಸಬೇಕಾದರೆ, ಅದಕ್ಕೆ ಸಮರ್ಪಕವಾದ ಒಂದು ಕಾನೂನು ಬೇಕಾಗುತ್ತದೆ. ಆದರೂ ಇದನ್ನು ಒಂದು ಎಕ್ಸ್‌ಪರಿಮೆಂಟಲಾಗಿ ತಂದಿದ್ದಾರೆ. ಇದನ್ನು ಇತರ ಸಂಸ್ಥೆಗಳಿಗೂ ಆ ಮೇಲೆ ಅನ್ವಯಿಸುತ್ತಾರೆಂದು ನಾನು ನಂಬಿದ್ದೇನೆ. ದೇವರ ಹೆಸರಿನಲ್ಲಿ ಸಮಾಜದ ಶೋಷಣೆಯಾಗುತ್ತದೆ ಎಂದು ಕೆಲವರು ಹೇಳಿದರು ಆ ಮಾತಿನಲ್ಲಿ ನಿಜವಿದೆ. ದೇವಸ್ಥಾನಕ್ಕೆ ಯಾರಾದರೂ ಹೋದರೆ ಅವರಿಗೆ ಕೆಲವು ಸೌಲಭ್ಯಗಳನ್ನು ಕೊಡಬೇಕಾಗುತ್ತದೆ ಆ ದೃಷ್ಟಿಯಿಂದ ಈ ಮಸೂದೆಯನ್ನು ತಂದಿದ್ದಾರೆ. ಅಲ್ಲಿ ಎಲ್ಲಾ ಪ್ರವಾಸಿಗರಿಗೂ ಮತ್ತು ಭಕ್ತಾದಿಗಳಿಗೂ ಕೆಲವು ಸೌಲಭ್ಯಗಳನ್ನು ಒದಗಿಸತಕ್ಕ ಜವಾಬ್ದಾರಿ ಆಡಳಿತ ಮಂಡಲಿಗೆ ಇದೆ. ಅದಕ್ಕೋಸ್ಕರ ಇದನ್ನು ತಂದಿರುವುದು. ಉದಾಹರಣೆಗೆ ಆಂಧ್ರ ಪ್ರದೇಶದಲ್ಲಿರುವ ತಿರುಪತಿಯಲ್ಲಿ ಒಂದು ಸುವ್ಯವಸ್ಥಿತವಾದ ಆಡಳಿತ ಇದೆ. ಅದೇ ರೀತಿ ಇಲ್ಲಿಯೂ ಇದ್ದರೆ ಒಳ್ಳೆಯದು. ತಿರುಪತಿಯಲ್ಲಿ ಬರುವಂತಹ ಹಣದಿಂದ ಒಂದು ಯೂನಿವರ್ಸಿಟಿಯನ್ನೇ ನಡೆಸುತ್ತಿದ್ದಾರೆ. ಅದಲ್ಲದೆ ಅದು ಇಂಡಿಯಾದಲ್ಲಿ ಒಂದು ಶ್ರೀಮಂತ ದೇವಸ್ಥಾನವೆಂದು ಹೆಸರುವಾಸಿಯಾಗಿದೆ. ನಮ್ಮ ರಾಜ್ಯದಲ್ಲಿ ಸಹ ಧರ್ಮಸ್ಥಳ, ಗೋಕರ್ಣ ಮತ್ತು ಸಂಡೂರಿನಲ್ಲಿ ಇಂಥ ದೇವಸ್ಥಾನಗಳು ಇವೆ. ಅಲ್ಲಿ ಬರತಕ್ಕಂತಹ ಉತ್ಪತ್ತಿಯನ್ನು ಸಹ ಸರಿಯಾಗಿ ವಿನಿಯೋಗಿಸಿದರೆ ನಮ್ಮ ಸಮಾಜಕ್ಕೂ ಅನುಕೂಲವಾಗುತ್ತದೆ ಮತ್ತು ಆ ಕ್ಷೇತ್ರವೂ ಅಭಿವೃದ್ಧಿಯಾಗುತ್ತದೆ. ಅದೇ ರೀತಿ ಅಲ್ಲಿಗೆ ಬರುವ ಪ್ರವಾಸಿಗರಿಗೂ ಹೆಚ್ಚಿನ ಸೌಲಭ್ಯ ಒದಗಿಸಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಬೇಕೆಂದು ಇಲ್ಲಿ ಹೇಳ ಬಯಸುತ್ತೇನೆ. ಜನರಲ್ಲಿ ಆಸ್ತಿಕತೆ ಹಿಂದಿನಿಂದಲೂ ಬೆಳೆದುಬಂದಿದೆ. ದೇವರಲ್ಲಿ ಭಕ್ತಿ ಇಟ್ಟಿರತಕ್ಕವರಲ್ಲಿ ನಾನೂ ಒಬ್ಬ, ಸರ್ವ ಸಾಮಾನ್ಯವಾಗಿ ಎಲ್ಲಾ ಹಿಂದುಗಳಿಗೂ ದೇವರ ಮೇಲೆ ಭಕ್ತಿ ಇದ್ದೇ ಇದೆ.

5-30 P. M.

ಯಾವ ಜಾತಿಯವರೇ ಆಗಲಿ ದೇವರ ಹೆಸರಿನಲ್ಲಿ ಶೋಷಣೆ ಮಾಡತಕ್ಕ ಜನರು ಇರಬಾರದು. ಈಗ ಮಾನ್ಯ ಮಂತ್ರಿಗಳು ಇಂಥಾ ಒಂದು ಕಾನೂನನ್ನು ತಂದಿರುವುದು ಒಳ್ಳೆಯದು. ಧರ್ಮ ಸಂಸ್ಥೆಗಳಿಗೆ ಆದಾಯವೇನೋ ಬರುತ್ತದೆ. ಆದರೆ ಅದನ್ನು ಕೆಲವು ಸಂಸ್ಥೆಗಳು ಊಟ ಉಪಚಾರ ದಾಸೋಹ ಇತ್ಯಾದಿಗಳಿಗೆ ಉಪಯೋಗಿಸುತ್ತಾರೆ. ಇದಕ್ಕಾಗಿ ಆ ಹಣವನ್ನು ಖರ್ಚು ಮಾಡುತ್ತಾರೆ. ದಾಸೋಹಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡುವುದು ಒಳ್ಳೆಯದಲ್ಲ. ದಾಸೋಹಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡುವುದರಿಂದ ಸೋಮಾರಿಗಳನ್ನು ನಿರ್ಮಾಣ ಮಾಡುವುದಕ್ಕೆ ಅವಕಾಶವಾಗುತ್ತದೆ. ಈ ದಾಸೋಹವನ್ನು ನಡೆಸುವುದರಿಂದ ಸಮಾಜಕ್ಕೂ ಪ್ರಯೋಜನವಾಗುವುದಿಲ್ಲ; ಧರ್ಮ ಸಂಸ್ಥೆಗೂ ಪ್ರಯೋಜನವಾಗುವುದಿಲ್ಲ. ಇಂಥಾ ದಾಸೋಹ ನಡೆಯುವುದು ಬೇರೆ ಸಂಸ್ಥೆಗಳಲ್ಲಿದ್ದರೆ ಅದನ್ನು ಮಾನ

(ಶ್ರೀ ಕೆ. ಎಂ. ರುದ್ರಪ್ಪ)

ಸಚಿವರು ನಿಲ್ಲಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದೇವಸ್ಥಾನದ ಪ್ರತಿನಿತ್ಯದ ಕಾರ್ಯಗಳು, ಪೂಜಾಕಾರ್ಯಗಳು ಸುವ್ಯವಸ್ಥಿತವಾದ ರೀತಿಯಲ್ಲಿ ನಡೆಯಬೇಕು. ಪೂಜಾರಿಗಳಿಗೆ ಪ್ರತಿವರ್ಷವೂ ತರಪೇತಿ ಕೊಟ್ಟು ಅವರನ್ನು ನೇಮಕ ಮಾಡಿಕೊಳ್ಳುತ್ತೇವೆ ಎಂದು ಮಾನ್ಯ ಸಚಿವರು ಈ ಮಸೂದೆಯಲ್ಲಿ ಹೇಳಿದ್ದಾರೆ. ಇದು ಒಳ್ಳೆಯದು. ಪೂಜಾರಿಗಳಿಗೆ ಒಂದು ಒಳ್ಳೆಯ ಶಿಸ್ತು ಇರಬೇಕು. ಪ್ರಾಮಾಣಿಕತೆ ಇರಬೇಕು. ಯಾವ ದೇವಸ್ಥಾನದಲ್ಲಿಯೇ ಆಗಲೀ ಕ್ಷೇತ್ರದ ಆವರಣದಲ್ಲೇ ಆಗಲಿ ನೈರ್ಮಲ್ಯ ಇರಬೇಕು. ಕೆಲವು ಕಡೆ ನೈರ್ಮಲ್ಯ ಇರುವುದಿಲ್ಲ. ದೇವರಲ್ಲಿ ಭಕ್ತಿ ಬರತಕ್ಕ ಪ್ರಶಾಂತ ವಾತಾವರಣವನ್ನು ಕಲ್ಪನೆ ಮಾಡಬೇಕು. ಇದಕ್ಕೆ ಹೆಚ್ಚಿಗೆ ಆಡಳಿತಮಂಡಲಿಯವರು ಕಾರಣರಾಗುತ್ತಾರೆ. ದೇವಸ್ಥಾನದಲ್ಲಿ ಪ್ರಶಾಂತ ವಾತಾವರಣವನ್ನುಂಟು ಮಾಡಿ ದೇವರಲ್ಲಿ ಭಕ್ತಿ ಮೂಡತಕ್ಕ ವಾತಾವರಣವನ್ನು ಕಲ್ಪಿಸಿಕೊಡುವಂತೆ ಪೂಜಾರಿಗಳಿಗೆ ಒಂದು ಸರಿಯಾದ ತರಬೇತಿಯನ್ನು ಕೊಡಬೇಕಾದ್ದು ಮುಖ್ಯ. ಮತ್ತು ಅದು ಅತ್ಯಗತ್ಯ. ಕೆಲವು ದೇವಸ್ಥಾನಗಳಲ್ಲಿ ನಾವು ಗಲೀಜನ್ನೇ ನೋಡುತ್ತಿದ್ದೇವೆ. ಮೂಢ ನಂಬಿಕೆಯ ಪದ್ಧತಿಗಳನ್ನು ನೋಡುತ್ತೇವೆ ಅದನ್ನು ನೋಡಿದರೆ ಮನಸ್ಸಿನಲ್ಲಿ ಒಂದು ತರಹ ಜಿಗುಪ್ಸೆ ಬರುತ್ತದೆ. ಪರದೇಶಗಳವರು ನಮ್ಮ ದೇಶಕ್ಕೆ ಪ್ರವಾಸ ಬಂದಾಗ ಈ ದೇವಸ್ಥಾನದಲ್ಲಿ ಒಳ್ಳೆಯ ಒಳ್ಳೆಯ ನೈರ್ಮಲ್ಯ ವಾತಾವರಣ ಇಲ್ಲದಿದ್ದರೆ ಅವರಿಗೆ ನಮ್ಮ ದೇಶದ ಬಗ್ಗೆ ತಪ್ಪು ಕಲ್ಪನೆ ಮೂಡುತ್ತದೆ. ನಮ್ಮ ಸಂಸ್ಕೃತಿ ಹಿರಿದು ಎನ್ನುವ ವಾತಾವರಣವನ್ನು ದೇವಸ್ಥಾನದಲ್ಲಿ ಉಂಟು ಮಾಡಬೇಕು. ಸೌಂದತ್ತಿಯ ಎಲ್ಲಮ್ಮನ ಗುಡ್ಡದ ಪ್ರದೇಶ ಬಹಳ ರಮಣೀಯವಾದ ಪ್ರದೇಶ. ಅಲ್ಲಿ ಮಲಪ್ರಭಾ ಪ್ರಾಜೆಕ್ಟ್ ಸಹ ಬರುತ್ತದೆ. ಆದ್ದರಿಂದ ಇದನ್ನು ಪ್ರವಾಸಿಗರ ಕೇಂದ್ರವನ್ನಾಗಿ ಮಾಡುವುದಕ್ಕೆ ಅವಕಾಶ ಇದೆ. ಆದ್ದರಿಂದ ಇದನ್ನೂ ಸಹ ಮಾನ್ಯ ಮಂತ್ರಿಗಳು ಮನಸ್ಸಿನಲ್ಲಿಟ್ಟುಕೊಂಡು ಪ್ರವಾಸಿಗರ ಕೇಂದ್ರವನ್ನಾಗಿ ಮಾಡುತ್ತಾರೆ ಎಂದು ನಾನು ನಂಬಿದ್ದೇನೆ.

ಮುಖ್ಯವಾಗಿ ಈ ದೇವಸ್ಥಾನದ ಆಡಳಿತಮಂಡಲಿಯನ್ನು ನೇಮಕ ಮಾಡತಕ್ಕದ್ದು ಬಹಳ ಮುಖ್ಯವಾದುದು. ಈ ಮಸೂದೆಯಲ್ಲಿ ಎಲ್ಲಿ ನೋಡಿದರೂ ಕೂಡ ಕಮಿಷನರಿಗೆ ಎಗ್ಸಿಕ್ಯುಟೀವ್ ಆಫೀಸರಿಗೆ ಹೆಚ್ಚು ಅಧಿಕಾರ ಇದೆಯೇ ಹೊರತು ಬೋರ್ಡ್ ಆಫ್ ಟ್ರಸ್ಟೀಸ್‌ಗೆ ಹೆಚ್ಚಿನ ಅಧಿಕಾರ ಕಂಡು ಬರುವುದಿಲ್ಲ. ಬೋರ್ಡಿನ ಟ್ರಸ್ಟೀಸ್ ಅಧಿಕಾರ ವ್ಯಾಪ್ತಿಯನ್ನು ಡಿಫೈನ್ ಮಾಡುವುದು ಒಳ್ಳೆಯದು. ಹೆಚ್ಚಿನ ಅಧಿಕಾರವನ್ನು ಬೋರ್ಡಿಗೆ ಕೊಡತಕ್ಕದು ಬಹಳ ಒಳ್ಳೆಯದು. ಈಗಿನ ಮಸೂದೆಯ ಪ್ರಕಾರ ಎಗ್ಸಿಕ್ಯುಟೀವ್ ಆಫೀಸರಿಗೆ ಮತ್ತು ಕಮಿಷನರಿಗೆ ಹೆಚ್ಚಿನ ಅಧಿಕಾರ ಇದೆ. ಬೋರ್ಡಿನ ಅಧಿಕಾರ ವ್ಯಾಪ್ತಿಯ ಬಗ್ಗೆ ಹೆಚ್ಚು ವಿವರಣೆಯನ್ನು ಕೊಟ್ಟಿಲ್ಲ. ಆ ವಿವರಣೆಯನ್ನು ಕೊಡಬೇಕಾದ್ದು ಸೂಕ್ತ ಎಂದು ನಾನು ಹೇಳುತ್ತೇನೆ.

ಶ್ರೀಮಾನ್ ಭಾಂಗಿಯವರು ಒಂದು ಮಾತನ್ನು ಹೇಳಿದರು. ಅದೇನೆಂದರೆ ಜೋಗಯ್ಯನ ಹೊಂಡ ಬಹಳ ಪವಿತ್ರವಾದ ಸ್ಥಳವಾಗಿದೆ. ಅದನ್ನು ಈ ಮಸೂದೆಯಲ್ಲಿ ಸೇರಿಸಬೇಕಾಗಿತ್ತು ಎಂದು ಹೇಳಿದರು. ಅದು ನಿಜ. ಅದರ ಪ್ರತೀತಿ ಏನೆಂದರೆ ಕುಷ್ಟ ರೋಗಿಗಳು ಈ ಜೋಗಯ್ಯನ ಹೊಂಡದಲ್ಲಿ ಕೊಳವ ಸ್ನಾನ ಮಾಡಿದರೆ ಕುಷ್ಠ ರೋಗ ಹೋಗುತ್ತದೆ ಎಂದು ಪ್ರತೀತಿ ಇದೆ. ಆದ್ದರಿಂದ ಆ ಹೊಂಡವನ್ನು ಚೆನ್ನಾಗಿಟ್ಟುಕೊಂಡು ಅದನ್ನು ಅಭಿವೃದ್ಧಿ ಮಾಡುವ ವಿಚಾರವನ್ನು ಈ ಮಸೂದೆಯಲ್ಲಿ ಅಳವಡಿಸಬೇಕು ಎಂದು ನಾನು ಸೂಚನೆ ಕೊಡಬಯಸುತ್ತೇನೆ ದೇವಸ್ಥಾನದ ಆವರಣವನ್ನು ಚೆನ್ನಾಗಿ ಇಟ್ಟುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ಆ ದೇವಸ್ಥಾನ ಗಡಿ ಮತ್ತು ಅದರ ವ್ಯಾಪ್ತಿಯನ್ನು ನಿರ್ಣಯ ಮಾಡಿ, ಅದು ಎಷ್ಟು ಎಕರೆ ಇದೆ, ಅದರಲ್ಲಿ ಯಾವು ಯಾವುದು ದೇವಸ್ಥಾನದ ವ್ಯಾಪ್ತಿಗೆ ಒಳಪಟ್ಟಿದೆ ಎಂಬುದನ್ನು ಸರ್ವೆ ಮಾಡಿಸಿ ಅದನ್ನು ಇದರಲ್ಲಿ ಸೇರಿಸಬೇಕು. ಅದನ್ನು ಕಾಪಾಡುವ ವ್ಯವಸ್ಥೆಯಾಗಬೇಕು, ಮಲಪ್ರಭಾ ಪ್ರಾಜೆಕ್ಟಿನಲ್ಲಿ ಕೆಲವು ಮುಳುಗಡೆಯಾಗುತ್ತವೆ ಎಂದು ನಾನು ಕೇಳಿದ್ದೇನೆ. ಪ್ರಾಚೀನ ಕಲೆಗಳು, ಪ್ರಾಚೀನ ಸ್ಥಳಗಳು ಮತ್ತು ಅವಶೇಷಗಳು ಏನಿವೆ ಅವುಗಳನ್ನು ಜೋಪಾನ ಮಾಡತಕ್ಕದ್ದು ಬಹಳ ಪ್ರಾಮುಖ್ಯವಾದುದು. ಇದನ್ನು ಮಾನ್ಯ ಸಚಿವರು ಮಾಡುತ್ತಾರೆ ಎಂದು ನಾನು ನಂಬಿದ್ದೇನೆ. ಈ ದೇವಸ್ಥಾನಕ್ಕೆ ಸಂಬಂಧಪಟ್ಟಹಾಗೆ ಹಾಲಿ ಎರಡು ಕಮಿಟಿಗಳು ಇವೆ. ಒಂದು ಟ್ರಸ್ಟೀಸ್ ಕಮಿಟಿ ಮತ್ತೊಂದು ಸೌಂದತ್ತಿ ಮುನಿಸಿಪಾಲಿಟಿ ಸಬ್ ಕಮಿಟಿ. ಮುನಿಸಿ ಪಾಲಿಟಿಯು ಇದರ ಸಮೀಪದಲ್ಲಿಯೇ ಇರುವುದರಿಂದ ಕೆಲವು ಸಂದರ್ಭದಲ್ಲಿ ಮುನಿಸಿಪಾಲಿಟಿಯವರು ಟೋಲ್ ವಸೂಲು ಮಾಡುತ್ತಾರೆ. ಇದರಿಂದ ಪ್ರಯಾಣಿಕರಿಗೆ ಕೆಲವು ತೊಂದರೆಗಳಾಗುತ್ತಿವೆ ಈ ದೇವಸ್ಥಾನಕ್ಕೆ ಸಂಬಂಧಪಟ್ಟ ಹಾಗೆ ಒಂದು ಕಾನೂನು ಮಾಡಿದ ಮೇಲೆ ಮುನಿಸಿಪಾಲಿಟಿಗೂ ಇದಕ್ಕೂ ಯಾವ ಸಂಬಂಧವೂ ಇಲ್ಲದಹಾಗೆ ಮಾಡಬೇಕು. ಸವದತ್ತಿ ಮುನಿಸಿಪಾಲಿಟಿಯ ಅಧ್ಯಕ್ಷರ ದೇವಸ್ಥಾನದ ಬೋರ್ಡಿನ ಒಬ್ಬರು ಸದಸ್ಯರನ್ನಾಗಿ

ಮಾಡಿದರೆ ಈ ಬಿಕ್ಕಟ್ಟು ಪರಿಹಾರವಾಗುತ್ತದೆ ಮತ್ತು ಅನುಕೂಲವಾಗುತ್ತದೆ ಎಂದು ನನ್ನ ಅಭಿಪ್ರಾಯ ವಾಗಿದೆ. ಆ ಪ್ರದೇಶದಲ್ಲಿ ಹರಿಜನರು ಭಕ್ತರು ಜಾಸ್ತಿ ಇರುವುದರಿಂದ ಆ ಬೋರ್ಡಿನಲ್ಲಿ ಒಬ್ಬರು ಹರಿಜನ ಸದಸ್ಯರು ಇರಲೇಬೇಕು ಎಂದು ಮಸೂದೆಯಲ್ಲಿ ಸೇರಿಸಬೇಕು. ಅಲ್ಲಿ ಹಿಂದಿನಿಂದಲೂ ದೇವರಿಗೆ ದೇವ ದಾಸಿಯರನ್ನು ಬಿಡುತ್ತಿದ್ದರು ಎಂದು ಪ್ರತೀತಿ ಇದೆ. ಈಗ ಅಲ್ಲಿ ಇದು ಇಲ್ಲ ಎಂದು ಕೇಳಿದ್ದೇನೆ. ಇಂಥ ಮೂಢ ನಂಬಿಕೆಯನ್ನು ಕಡಿದು ಹಾಕಬೇಕಾಗುತ್ತದೆ. ತೆಗೆಯಬೇಕಾಗುತ್ತದೆ. ಈ ದೇವಸ್ಥಾನ ವನ್ನು ಪ್ರವಾಸಿಗರ ಕೇಂದ್ರವನ್ನಾಗಿ ಮಾಡಬೇಕು. ಇದರ ಉತ್ಪತ್ತಿ ಸದ್ಯಕ್ಕೆ ೫ ಲಕ್ಷ ರೂಪಾಯಿಗಳು ಇದೆಯೆಂದು ನಾನು ಕೇಳಿದ್ದೇನೆ. ಇನ್ನು ಮುಂದೆ ವರ್ಷಕ್ಕೆ ೧೦—೨೦ ಲಕ್ಷ ರೂಪಾಯಿಗಳ ವರಮಾನ ವನ್ನು ಹೊಂದುವಂತಹ ಅವಕಾಶ ಉಂಟಾಗುತ್ತದೆ. ಅದನ್ನು ವಿದ್ಯಾ ಸಂಸ್ಥೆಗಳಿಗೂ ಮತ್ತು ಇತರ ಜನೋಪಯುಕ್ತ ಕೆಲಸಗಳಿಗೂ ಉಪಯೋಗವಾಗುವಂಥದ್ದಾಗಬೇಕು ಎಂದು ನಾನು ಹೇಳುತ್ತೇನೆ. ನನ್ನ ಕೆಲವು ಸಲಹೆಗಳನ್ನು ಮಾನ್ಯ ಸಚಿವರು ಒಪ್ಪಿ ಅವುಗಳನ್ನು ಈ ಮಸೂದೆಯಲ್ಲಿ ಅಳವಡಿಸಿದರೆ ಒಳ್ಳೆಯದು. ಈ ಮಸೂದೆ ಇಷ್ಟಕ್ಕೇ ಸೀಮಿತವಾಗದೆ ಧರ್ಮಸ್ಥಳ, ಸೊಂಡೂರು, ಗೋಕರ್ಣ ಮುಂತಾದ ಧಾರ್ಮಿಕ ಸಂಸ್ಥೆಗಳೂ ದೇವಸ್ಥಾನಗಳೂ ಇದೇ ರೀತಿ ಅನ್ವಯವಾಗುವ ಹಾಗೆ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಂಡು ಮಾನ್ಯ ಉಪಾಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಮಾದೇಗೌಡ (ಬನ್ನೂರು).—ಮಾನ್ಯ ಉಪಾಧ್ಯಕ್ಷರೇ ರೇಣುಕಾ ಯಲ್ಲಮ್ಮನ ದೇವ ಸ್ಥಾನಕ್ಕೆ ಸಂಬಂಧಪಟ್ಟಹಾಗೆ ಮಾನ್ಯ ಕಂದಾಯ ಮಂತ್ರಿಗಳು ಏನು ಮಸೂದೆಯನ್ನು ಈ ಸಭೆಯ ಮುಂದೆ ತಂದಿದ್ದಾರೆ ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇದನ್ನು ನಾನು ಸ್ವಾಗತಿಸು ವುದಕ್ಕೆ ಮುಖ್ಯ ಕಾರಣಗಳೇನು ಎಂಬುದನ್ನು ಕೂಡ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ ಬಹುಶಃ ಸರ್ಕಾರದವರು ತನ್ನ ಕರ್ತವ್ಯವನ್ನು ತನ್ನ ಹೊಣೆಯನ್ನು ಪೂರ್ಣವಾಗಿ ಅರಿತು ಈ ಒಂದು ಮಸೂದೆ ಯನ್ನು ತಂದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಕಾರಣ ಇಷ್ಟೆ. ಸರ್ಕಾರದವರು ಯಾವ ದೇವಸ್ಥಾನವನ್ನೂ ಸೃಷ್ಟಿಮಾಡಿಲ್ಲ ಯಾವ ಪೂಜಾರಿಯನ್ನೂ ಪ್ರತ್ಯೇಕವಾಗಿ ಸೃಷ್ಟಿಮಾಡಿಲ್ಲ. ಪೂಜೆ ಮಾಡತಕ್ಕ ಜನರನ್ನೂ ಸೃಷ್ಟಿಮಾಡಿಲ್ಲ. ಈಗ ದೇವಸ್ಥಾನದಲ್ಲಿ ಪೂಜೆ ಮಾಡತಕ್ಕ ಜನಗಳು ಸಾಂಪ್ರದಾಯಿಕವಾಗಿ ಬಹಳ ಸನಾತನ ಕಾಲದಿಂದಲೂ ಬಂದಿರತಕ್ಕವರು ಈ ಒಂದು ದೇವಸ್ಥಾನಕ್ಕೆ ಬರತಕ್ಕ ಭಕ್ತರ ಹಿತ ದೃಷ್ಟಿಯಿಂದ ಮತ್ತು ಈ ದೇವಸ್ಥಾನ ಪೂಜಾರಿಗಳ ಹಿತ ದೃಷ್ಟಿಯಿಂದ ಸರ್ಕಾರ ತನ್ನ ಹೊಣೆಯನ್ನು, ತನ್ನ ಕರ್ತವ್ಯವನ್ನು ಈ ಒಂದು ಮಸೂದೆಯ ಮೂಲಕ ಮಾಡುತ್ತಿದ್ದಾರೆ. ಆದ್ದರಿಂದ ನಾನು ಈ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಬಹುಶಃ ಜನರಲ್ಲಿ ದೇವರ ಬಗ್ಗೆ ನಂಬಿಕೆ ಇರುವ ಬಗ್ಗೆಯಾಗಲೀ ಇಲ್ಲದಿರುವ ಬಗ್ಗೆ ಯಾಗಲೀ ಸರ್ಕಾರ ಪ್ರಚೋದನೆ ಮಾಡದಿರಬಹುದು. ಪ್ರಚೋದನೆ ಮಾಡತಕ್ಕಂಥ ಹಕ್ಕು ಸರ್ಕಾರಕ್ಕೆ ಇಲ್ಲ ಎಂದು ನಾನು ಹೇಳುತ್ತೇನೆ. ಅದೇ ರೀತಿ ಯಾರು ದೇವರನ್ನು ನಂಬುವುದಿಲ್ಲ ಎಂದು ಹೇಳುತ್ತಾರೋ ಅಂತಹವರನ್ನು ನಂಬಿ ಎಂದು ಹೇಳುವ ಹಕ್ಕು ಕೂಡ ಸರ ಕಾರಕ್ಕೆ ಇಲ್ಲವೆಂದು ಹೇಳುತ್ತೇನೆ. ದೇವರನ್ನು ನಂಬಿದ್ದೇವೆಂದು ಹೇಳತಕ್ಕಂಥ ಸಾವಿರಾರು ಜನರು ಇರುವಾಗ ಆ ಒಂದು ನಂಬಿಕೆಗೆ ಅರ್ಹವಾದಂಥ ಕರ್ತವ್ಯಗಳನ್ನು ಸರ್ಕಾರ ಮಾಡಬೇಕಾಗುತ್ತದೆ. ಆದರೆ ದೇವರಿದ್ದಾ ನೆಂದು ನಂಬಿಕೊಂಡು ಆದರ ಮೂಲಕ ಮೂಢ ನಂಬಿಕೆಗಳಿಗೆ ಒಳಗಾಗಿರುವ ಜನರು ಏನಿದ್ದಾರೆ, ಅಂತಹ ಜನರಲ್ಲಿರುವ ಮೂಢನಂಬಿಕೆಯನ್ನು ಹೋಗಲಾಡಿಸಿ, ದೇವರಲ್ಲಿ ಭಕ್ತಿ ಹೆಚ್ಚುವಂತೆ ಮಾಡುವುದು ಸರ್ಕಾರದ ಜವಾಬ್ದಾರಿಯಾದ್ದರಿಂದ, ಇದನ್ನು ಸರ್ಕಾರ ಅರಿತುಕೊಂಡು ಈ ಬಿಲ್ಲನ್ನು ತಂದಿದೆ. ಅದ ಕ್ಕಾಗಿ ನಾನು ಇದನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಜನರಲ್ಲಿರುವ ಮೂಢನಂಬಿಕೆಯ ಬಗ್ಗೆ ಒಂದು ಉದಾಹರಣೆಕೊಡಬೇಕೆಂದರೆ, ಕೊಳ್ಳೆಗಾಲ ಕ್ಷೇತ್ರದಲ್ಲಿ ಮಹದೇಶ್ವರ ದೇವಸ್ಥಾನ ಎಂಬುದು ಇದೆ. ಇದು ೧೯೫೬ಕ್ಕೆ ಮುಂಚೆ ಮದ್ರಾಸ್ ಸರ್ಕಾರಕ್ಕೆ ಸೇರಿತ್ತು. ಈ ದೇವಸ್ಥಾನಕ್ಕೂ ಸಹ ಪ್ರತಿ ವರ್ಷ ಲಕ್ಷಾಂತರ ಜನರು ಬಂದು ಪೂಜೆ ಮಾಡುತ್ತಾರೆ. ಪೂಜೆ ಮಾಡುವವರಿಗೆ ಪೂಜೆ ಮಾಡಬೇಡಿ ಎಂದು ಹೇಳುವ ಹಕ್ಕು ಯಾರಿಗೂ ಇಲ್ಲ. ಸರ್ಕಾರಕ್ಕೂ ಕೂಡ ಇಲ್ಲ. ಇದೇ ರೀತಿ ದೇವರಪೂಜೆ ಮಾಡಿ ಎಂದು ಸರ್ಕಾರದವರು ಜನರಿಗೆ ಏನು ಹೇಳಿಲ್ಲ. ಈ ಒಂದು ಪದ್ಧತಿ ನೂರಾರು ವರ್ಷಗಳಿಂದ ಜನರಲ್ಲಿಯೇ ಬೆಳೆದುಕೊಂಡು ಬಂದಿದೆ. ಮಹದೇಶ್ವರ ದೇವಸ್ಥಾನದ ದೇವರ ಬಗ್ಗೆ ಜನರಲ್ಲಿ ಯಾವ ರೀತಿಯ ಮೂಢನಂಬಿಕೆ ಇತ್ತೆಂದರೆ, ದೇವ ಸ್ಥಾನದ ಹತ್ತಿರ ಯಾರಾದರು ಹೇಸಿಗೆ ಮಾಡುತ್ತಿದ್ದರೆ, ಅವರ ಪಕ್ಕದಲ್ಲಿಯೇ ಕುಳಿತುಕೊಂಡು ಊಟ ಮಾಡಿದರೆ ದೇವರು ಏನೂ ಮಾಡುವುದಿಲ್ಲ, ಹೇಸಿಗೆ ಮಾಡಿದವರು ಕೆರೆಯಲ್ಲಿರುವ ನೀರನ್ನು ಉಪಯೋಗಿ ಸಿದ ಮೇಲೆ ಅದೇ ನೀರನ್ನು ಕುಡಿದರೆ ದೇವರು ಏನೂ ಮಾಡುವುದಿಲ್ಲ ಎನ್ನುವ ಮೂಢ ನಂಬಿಕೆ ಇತ್ತು.

(ಶ್ರೀ ಕೆ. ಮಾದೇಗೌಡ)

ಇದರಿಂದ ಪ್ರತಿವರ್ಷ ಅಲ್ಲಿ ಕಾಲರಾ ರೋಗ ಬಂದು ಸಾವಿರಾರು ಜನರು ಸಾಯುತ್ತಿದ್ದರು. ಅಲ್ಲಿ ವಸತಿ ಸೌಕರ್ಯವಾಗಲೀ, ಸ್ಯಾನಿಟೇಷನ್ ವ್ಯವಸ್ಥೆಯಾಗಲೀ, ಕುಡಿಯುವ ನೀರಿನ ಸೌಕರ್ಯವಾಗಲೀ ಇರಲಿಲ್ಲ. ೧೯೫೬ರಲ್ಲಿ ಈ ಭಾಗ ನಮ್ಮ ರಾಜ್ಯಕ್ಕೆ ಸೇರಿದ ಮೇಲೆ, ಸರ್ಕಾರದವರು ಈ ತರಹದ ಒಂದು ಬಿಲ್ಲನ್ನು ತಂದು ಎಲ್ಲ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಮೇಲೆ ಆ ಜಾಗದಲ್ಲಿ ಯಾವ ಖಾಯಿಲೆಗಳೂ ಸಹ ಕಾಣುತ್ತಿಲ್ಲ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ದೇವರ ಬಗ್ಗೆ ಜನರಲ್ಲಿರುವ ನಂಬಿಕೆಯನ್ನು ಸರ್ಕಾರದವರು ಉಳಿಸಬೇಕು ಮತ್ತು ಜನರಲ್ಲಿರುವ ಮೂಢನಂಬಿಕೆಗಳನ್ನು ಹೋಗಲಾಡಿಸಬೇಕು, ಇದು ಸರ್ಕಾರದ ಆದ್ಯಕರ್ತವ್ಯ. ಇದನ್ನು ಸರ್ಕಾರದವರು ದೃಷ್ಟಿಯಲ್ಲಿಟ್ಟುಕೊಂಡು ಈ ಬಿಲ್ಲನ್ನು ತಂದಿರುವುದರಿಂದ ನಾನು ಈ ಬಿಲ್‌ಗೆ ಮತ್ತೊಮ್ಮೆ ಮನ್ನಣೆ ಕೊಡುತ್ತೇನೆ. ಈ ದೇವಸ್ಥಾನದ ಮಂಡಲಿಗೆ ಸದಸ್ಯರನ್ನು ನೇಮಕ ಮಾಡುವಾಗ ಹರಿಜನರನ್ನು ಸಹ ಸೇರಿಸಬೇಕೆಂದು ನನ್ನ ಮಿತ್ರರು ಹೇಳಿದ್ದಾರೆ. ನಾವು ೧೯೬೦ನೇ ಇಸವಿಯಲ್ಲಿದ್ದೇವೆ. ನಾವು ಪ್ರತಿಯೊಂದು ವಿಚಾರದಲ್ಲಿಯೂ ಮುಂದೆ ಹೋಗುತ್ತಿರುವಾಗ, ಈ ಮಂಡಲಿಯಲ್ಲಿ ಹರಿಜನರನೂ ಸಹ ಸೇರಿಸಲೇಬೇಕು ಎಂದು ನಾವು ಸರ್ಕಾರಕ್ಕೆ ಕಡ್ಡಾಯ ಮಾಡುವುದು ಸರಿಯಲ್ಲವೆಂದು ನನ್ನ ಭಾವನೆ. ಬೇಕಾದರೆ ಬೋರ್ಡಿಗೆ ಸದಸ್ಯರನ್ನು ನೇಮಕ ಮಾಡುವಾಗ ಹರಿಜನರಿಗೇ ಪೂರ್ತಾ ಮನ್ನಣೆ ಕೊಟ್ಟು ಅವರನ್ನೇ ಸೇರಿಸಿದರೆ ನಾನು ಸ್ವಾಗತ ಮಾಡುತ್ತೇನೆ. ಆದರೆ ದೇವರ ಸನ್ನಿಧಿಯಲ್ಲಿ ಇವರು ಕೀಳು ಜನರಾದ್ದರಿಂದ ಅವರನ್ನೂ ಸೇರಿಸಬೇಕೆಂದು ಹೇಳುವುದು ಸರಿಯಾಗಿರುವುದಿಲ್ಲ. ಬೇಕಾದರೆ ಹರಿಜನರನ್ನು ಎಕ್ಸಿಕ್ಯುಟಿವ್, ಆಫೀಸರನ್ನಾಗಿ ನೇಮಕಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಆ ಭಾಗದಿಂದ ಹರಿಜನರೇ ಚುನಾವಣೆಯಲ್ಲಿ ನಿಂತು ಏತಕ್ಕೆ ಗೆದ್ದು ಬರಬಾರದು ?

ಶ್ರೀ ಕೆ. ಮಾದೇಗೌಡ.—ಆ ರೀತಿ ಮಾಡಿ. ನನಗೂ ಸಂತೋಷ. ಆದರೆ ಹರಿಜನರು ಎಂಬ ದೃಷ್ಟಿಯನ್ನು ಇಟ್ಟುಕೊಂಡು ಬೋರ್ಡಿನಲ್ಲಿ ಪ್ರಾತಿನಿಧ್ಯ ಕೊಟ್ಟರೆ, ಕೀಳು ಮನೋಭಾವವನ್ನು ಸರ್ಕಾರದವರೇ ಕಲ್ಪಿಸಿಕೊಟ್ಟಂತೆ ಆಗುವುದಿಲ್ಲವೇ ಎಂದು ನನ್ನ ಅಭಿಪ್ರಾಯ. ಬೇಕಾದರೆ ಬೋರ್ಡ್ ಮೆಂಬರ್‌ಗಳೆಲ್ಲಾ ಹರಿಜನರೇ ಇರಲಿ, ಎಕ್ಸಿಕ್ಯುಟಿವ್ ಆಫೀಸರ್ ಸಹ ಹರಿಜನರೇ ಇರಲಿ, ಆದರೆ ದೇವರ ಸನ್ನಿಧಿಯಲ್ಲಿ ಇವರಿಗೆ ಪ್ರಾತಿನಿಧ್ಯ ಕೊಡುವುದಕ್ಕೆ ಹೋದರೆ ನಾವು ಕೀಳು ಭಾವನೆಯನ್ನು ತಳೆದಂತೆ ಆಗುತ್ತದೆ. ಇದು ಸೆಕ್ಯುಲರ್ ಸ್ಟೇಟ್ ಆದ್ದರಿಂದ ಈ ಬೋರ್ಡಿನಲ್ಲಿ ಬೌದ್ಧರು, ಮುಹಮ್ಮದೀಯರು, ಜೈನರು, ಕ್ರಿಶ್ಚಿಯನರು ಮುಂತಾದ ಎಲ್ಲ ಜಾತಿಯವರಿಗೂ ಪ್ರಾತಿನಿಧ್ಯ ಕೊಡಬೇಕೆಂದು ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಬಹಳ ಆಳವಾದ ಮಾತನ್ನು ಆಡಿದ್ದಾರೆ. ಅದನ್ನು ಎಲ್ಲಿ ಹೇಳಬೇಕೋ ಅಲ್ಲಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಸರ್ಕಾರ ಮಾಡುತ್ತಿರುವ ಕಾರ್ಯದಲ್ಲಿ ಇಂಥಾದ್ದು ಸಾಧ್ಯವಾಗಲಾರದು. ಸಾಧ್ಯವಾದರೆ ನನಗೆ ಸಂತೋಷ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸಂಸ್ಕೃತಿಯಲ್ಲಿ ನಾವು ಬಹಳ ಹಿಂದೆ ಇದ್ದೇವೆ. ಅಂದರೆ ಬೇರೆ ಜನಾಂಗದವರ ಸಂಸ್ಕೃತಿಗಿಂತ ನಾವು ಹಿಂದುಳಿದಿದ್ದೇವೆ. ಸಂಸ್ಕೃತಿಯಲ್ಲಿ ನಾವು ಹಿಂದೆ ಇರುವುದಕ್ಕೆ ಕಾರಣ ಆರ್ಥಿಕ ಪರಿಸ್ಥಿತಿ. ಒಂದು ರೀತಿಯಲ್ಲಿ ನಮ್ಮ ದೇಶವೇ ಆರ್ಥಿಕ ಪರಿಸ್ಥಿತಿಯಲ್ಲಿ ಬಹಳ ಹಿಂದುಳಿದಿದೆ. ನಮ್ಮ ಬಡತನವನ್ನು ಅರಿತುಕೊಂಡು, ನಾವು ಮುಂದುವರೆದ ಜನಾಂಗಗಳ ಸಂಸ್ಕೃತಿಯನ್ನು ಸ್ವಲ್ಪ ಕಾಲವವರೆಗೆ ತಡೆಹಿಡಿಯಬೇಕಾಗಿದೆ. ಬೇರೆ ಕೆಲವು ಜನರು ನಮ್ಮ ಹಿಂದೂ ಸಂಸ್ಕೃತಿಯನ್ನು ಬಹಿಷ್ಕರಿಸಿದ್ದಾರೆ. ಇಂತಹವರಿಗೆ ಬೋರ್ಡಿನಲ್ಲಿ ಪುರಸ್ಕಾರ ಕೊಡಬೇಕೆಂದರೆ ಅದಕ್ಕೆ ನನ್ನ ಭಿನ್ನಾಭಿಪ್ರಾಯ ವೇನೂ ಇಲ್ಲ. ಇಂದು ಹೊಂದಾಣಿಕೆಯಿಂದ ಹೋಗುವುದು ಹಿಂದೂಗಳಲ್ಲಿ ಕಡಿಮೆಯಾಗಿದೆ. ನಮ್ಮಲ್ಲಿ ಹೊಂದಾಣಿಕೆ ಬರದಿದ್ದರೆ, ಸಂಸ್ಕೃತಿಯಲ್ಲಿ ಬೌದ್ಧರು, ಜೈನರು ಯಾವ ಮಟ್ಟಕ್ಕೆ ಹೋಗಿದ್ದಾರೋ, ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಎಷ್ಟರ ಮಟ್ಟಿಗೆ ಮುಂದುವರೆದಿದ್ದಾರೋ ಅಷ್ಟರವರೆಗೆ ನಾವು ಮುಂದುವರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಬೇರೆ ಜನಾಂಗದವರಿಗೆ ಈ ಬೋರ್ಡಿನಲ್ಲಿ ಸ್ಥಾನಗಳನ್ನು ಕೊಡುವುದು ಸರ್ಕಾರದವರಿಗೆ ಸೂಕ್ತ ಎಂದು ಕಂಡುಬಂದರೆ ಕೊಡಲಿ. ಆದರೆ ನಾವು ಇಂತಹ ವಿಚಾರದಲ್ಲಿ ಭಿನ್ನಾಭಿಪ್ರಾಯ ವ್ಯಕ್ತಪಡಿಸುವುದು ಸೂಕ್ತವಲ್ಲ ಎಂಬದುದು ನನ್ನ ದೃಷ್ಟಿ.

ಇನ್ನು ಧರ್ಮದರ್ಶಿಯ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಧರ್ಮದರ್ಶಿಯ ಸ್ಥಾನ ಏಳಿದೆ, ಇದಕ್ಕೆ ರಾಜಕೀಯ ಸ್ಥಾನ ಬರುತ್ತದೆ, ಮಂತ್ರಿಸ್ಥಾನ ಬರುತ್ತದೆ. ದೇವರ ಸನ್ನಿಧಿಯಲ್ಲಿ ಯಾರು ನಿಜವಾಗಿಯೂ ಸೇವೆಯನ್ನು ಮಾಡುತ್ತಾರೋ ಅಂತಹವರನ್ನು ಈ ಜಾಗಕ್ಕೆ ಹುಡುಕಬೇಕೆಂದು ನನ್ನ ಕಳಕಳಿಯ ಮನವಿ. ಇಂದು ಅನೇಕ ದೇವಸ್ಥಾನಗಳಲ್ಲಿರುವ ಟ್ರಸ್ಟಿಗಳನ್ನು ನಾನು ನೋಡಿದ್ದೇನೆ, ಕೆಲವರು ದೇವಸ್ಥಾನಗಳನ್ನೇ ನುಂಗಿದ್ದಾರೆ. ಇಂತಹವರ ಮನೆಮಠಗಳೇ ಹಾಳಾಗಿ ಹೋಗಿವೆ. ಆದರೂ ಸಹ ಅದನ್ನು ಅವರು ಯೋಚನೆ ಮಾಡದೆ, ದೇವರ ಹೆಸರಿನಲ್ಲಿ ಬರತಕ್ಕಂಥ ಆದಾಯವನು

ದುರುಪಯೋಗ ಮಾಡಿದ್ದಾರೆ. ಈ ಕಾರಣದಿಂದ ರಾಜಕೀಯ ಮನೋಭಾವ ಮತ್ತು ರಾಜಕೀಯ ಮನೋಭಾವವನ್ನು ಬಿಟ್ಟು ನಿಜಕ್ಕೂ ಕೂಡ ಸೇವಾ ಮನೋಭಾವ ಇರತಕ್ಕಂಥವರನ್ನು ಹುಡುಕಿ ಸರ್ಕಾರದವರು ಈ ದೇವಸ್ಥಾನಕ್ಕೆ ನೇಮಕ ಮಾಡಬೇಕಾಗುತ್ತದೆ. ಈ ಸ್ಥಾನಕ್ಕೆ ಅಪ್ಲಿಕೇಷನ್ ಕಾಲ್‌ಫರ್ ಮಾಡಿ; ನಂತರ ರೆಕಮೆಂಡೇಷನ್ ಮೇಲೆ ನೇಮಕ ಮಾಡುವುದಕ್ಕೆ ಹೋಗಬೇಡಿ. ನೀವೇ ಖುದ್ದಾಗಿ ಅಥವಾ ನಿಮ್ಮ ಏಜೆಂಟರನ್ನು ಯಾರನ್ನಾದರು ಬಿಟ್ಟು ಸೇವಾ ಮನೋಭಾವವಿರುವವರನ್ನು ಈ ಸ್ಥಾನಕ್ಕೆ ಹುಡುಕಿ ನೇಮಕ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ ಎಸ್. ಶ್ರೀನಿವಾಸುಲುನಾಯ್ಡು (ಶಾಂತಿನಗರ) —ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ಯಾವ ಮಸೂದೆಯನ್ನು ತಂದಿದ್ದಾರೆ, ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಮತ್ತು ಅದರ ಬಗ್ಗೆ ನಾಲ್ಕು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬೇಕೆಂದು ನಿಂತಿದ್ದೇನೆ. ನನ್ನ ಹಿಂದೆ ಮಾತನಾಡಿದಂಥ ಭಾಷಣಕಾರರು ಧರ್ಮ ಮತ್ತು ದೇವಸ್ಥಾನದ ಬಗ್ಗೆ ಅನೇಕ ಅಭಿಪ್ರಾಯಗಳನ್ನು ಕೊಟ್ಟರು. ಅನಾದಿ ಕಾಲದಿಂದಲೂ ಆಸ್ತಿಕವಾದ ಮತ್ತು ನಾಸ್ತಿಕವಾದ ಎಂಬುದು ಇದ್ದೇ ಇದೆ. ಇದು ಮಾನ್ಯ ಕಂದಾಯ ಮಂತ್ರಿಗಳು ತಂದಿರುವ ಬಿಲ್‌ನಿಂದಲೇ ಅರ್ಥವಾಗುತ್ತದೆ. ಎಲ್ಲಮ್ಮ ದೇವಸ್ಥಾನದ ಬಗ್ಗೆ ಬಿಲ್ ತಂದಿದ್ದಾರೆ ಎಲ್ಲಮ್ಮ ಎಂದರೆ ಎಲ್ಲರಿಗೂ ಅಮ್ಮ. ಇಂತಹ ಒಂದು ಮಸೂದೆಯನ್ನು ತಂದಿರುವಾಗ ಇಂತಹ ಕಟು ಟೀಕೆಗಳನ್ನು ಏತಕ್ಕಾಗಿ ಮಾಡುತ್ತಾರೋ ಎಂದು ನನಗೆ ಅರ್ಥವಾಗುವುದಿಲ್ಲ ಇದರ ಮೂಲ ಉದ್ದೇಶ ಎರಡು ಇದೆ. ನಮ್ಮ ಈ ಎಲ್ಲಮ್ಮ ದೇವಸ್ಥಾನಕ್ಕೆ ಮಾನ್ಯ ಮಂತ್ರಿಗಳೇ ಇದರ ಉದ್ದೇಶಗಳಲ್ಲಿ ಹೇಳಿರುವಂತ ಇದರ ಅಡ್ಮಿನಿಸ್ಟ್ರೇಷನ್‌ನನ್ನು ನೋಡಿಕೊಳ್ಳಲು ಒಂದು ಟ್ರಸ್ಟ್ ಕಮಿಟಿ, ಇನ್ನೊಂದು ಪಿಲ್‌ಗ್ರಿಂಸ್ ಸೌಂದತ್ತಿ ಎಲ್ಲಮ್ಮ ಮುನಿಸಿಪಾಲಿಟಿ ಸಬ್ ಕಮಿಟಿ ಎಂದು ಇವೆರಡು ಇದರ ಕಾರ್ಯಗಳನ್ನು ನೋಡಿಕೊಳ್ಳುತ್ತಿದೆ. ಇದರಲ್ಲಿ ಅನೇಕ ಲೋಪದೋಷಗಳಿವೆ ಎನ್ನುವುದನ್ನು ಸರಕಾರ ಗಮನಕ್ಕೆ ತೆಗೆದುಕೊಂಡು ಇದಕ್ಕಾಗಿ ಒಂದು ಪ್ರತ್ಯೇಕವಾಗಿ ಯೂನಿಫಾರಂ ಬಿಲ್ಲನ್ನು ಮಾಡಿ ಇಲ್ಲಿ ನಮ್ಮ ಮುಂದೆ ಮಂಡಿಸಿದ್ದಾರೆ. ಇದರ ಉದ್ದೇಶವೇನೋ ಸರಿಯಾದುದು. ಆದರೆ ಇದೇ ರೀತಿ ಇನ್ನೂ ಹಲವಾರು ದೇವಸ್ಥಾನಗಳೂ ನಮ್ಮ ರಾಜ್ಯದಲ್ಲಿದ್ದವು, ಇವೆಲ್ಲಕ್ಕೂ ಸಮಗ್ರವಾಗಿ ಅನುಕೂಲವಾಗುವಂತಹ ಒಂದು ಯೂನಿಫಾರಂ ಬಿಲ್ಲನ್ನು ತಂದಿದ್ದರೆ ಚೆನ್ನಾಗಿರುತ್ತಿತ್ತು. ಎಲ್ಲಮ್ಮ ದೇವರ ಹೆಸರಿನಲ್ಲೇ ಈ ದೇವಸ್ಥಾನವಾಗಿದೆ. ಇದು ಎಲ್ಲರ ಅಮ್ಮ ಎಂದು ಹಿಂದುಗಳಿಗೆ ಪವಿತ್ರವಾದ ಒಂದು ದೇವಸ್ಥಾನವಾಗಿದೆ. ದೇವಸ್ಥಾನಗಳ ಮೂಲ ಉದ್ದೇಶ ಧರ್ಮವನ್ನು ಮುಂದಕ್ಕೆ ತಂದು ಅಧರ್ಮವನ್ನು ಕಡಿಮೆ ಮಾಡಬೇಕೆಂದು 'ಇಂತಹ ದೇವಸ್ಥಾನಗಳು ಆಗುತ್ತಿರುವುದು. ದೇವಸ್ಥಾನಗಳು ಎನ್ನುವುದು ಅನಾದಿಕಾಲದಿಂದಲೂ ಬಂದಿರುವುದು. Temples are not only the places of worship but also places of learning. ಇಂತಹ ಶ್ರೇಷ್ಟವಾದ ದೇವಸ್ಥಾನಗಳನ್ನು ನಮ್ಮ ಪೂರ್ವಿಕರು ಋಷಿಗಳು ಕಟ್ಟಿಸಿ ನಮ್ಮ ಜನಕ್ಕೆ ಒಂದು ಮಾರ್ಗದರ್ಶನ ಮಾಡಿ ತೋರಿಸಿದ್ದಾರೆ. ಇದರಿಂದ ಹಿಂದೂ ಧರ್ಮ ಅನಾದಿಕಾಲದಿಂದ ಬಂದಿರುವುದು ಗೊತ್ತಾಗುತ್ತದೆ. ಪುರಾತನ ಕಾಲದಿಂದಲೂ ನಮ್ಮ ಜನರು ದೇವಸ್ಥಾನಗಳನ್ನು ಎಲ್ಲ ಕಟ್ಟಿಸುತ್ತಿದ್ದರು ಎಂದರೆ ಒಂದು ನದಿಯ ಹತ್ತಿರ ಇಲ್ಲವೇ ಒಂದು ಕೊಳದ ಹತ್ತಿರ ಕಟ್ಟಿಸಿರುತ್ತಾರೆ. ಇಂತಹ ದೇವಸ್ಥಾನಗಳು ಭಾವೈಕ್ಯತೆಗೆ ಸಾಧನವಾಗಿವೆ. ಒಂದು ರೀತಿಯಾದ ಐತಿಹಾಸಿಕ ಪ್ರಾಮುಖ್ಯತೆ ಈ ದೇವಸ್ಥಾನಗಳಿಗೆ ಇರುತ್ತದೆ. ಉದಾಹರಣೆಗೆ ತಾವು ರಾಮೇಶ್ವರ ದೇವಸ್ಥಾನ ಎಂದು ಕೇಳಿರಬಹುದು. ಹಿಂದೆ ಶ್ರೀರಾಮನು ಅಲ್ಲಿಗೆ ಬಂದಾಗ ಅಲ್ಲಿ ಈ ದೇವಸ್ಥಾನ ಕಟ್ಟಿಸಿದನು ಎಂದು ನನಗೆ ಗೊತ್ತಾಗುತ್ತದೆ. ಇದರಿಂದ ನಮ್ಮ ಹಿಂದೂ ಧರ್ಮದ ಪ್ರಾಮುಖ್ಯತೆ ಎಷ್ಟಿತ್ತು ಎನ್ನುವುದು ನಮಗೆ ತಿಳಿಯುತ್ತದೆ. ಇದೇ ರೀತಿ ಹಿಂದೆ ಯುಗಗಳಿದ್ದವು ಎಂದರೆ ತ್ರೇತಾಯುಗ, ದ್ವಾಪರಯುಗ ಎಂದು ಇದು ಇಂತಹ ಪುರಾತನ ಕಾಲದಿಂದಲೂ ಹಿಂದೂ ಧರ್ಮದ ಸಂಸ್ಕೃತಿ ಇತ್ಯಾದಿಗಳನ್ನು ತಿಳಿಸುವ ದೇವಸ್ಥಾನಗಳು ನಮ್ಮ ದೇಶದಲ್ಲಿ ಇವೆ, ಧರ್ಮದ ಬಗ್ಗೆ ನಾವು ಹೇಳುವಾಗ ಆಸ್ತಿಕವಾದ ಹಾಗೂ ನಾಸ್ತಿಕವಾದ ಎಂದು ಎರಡನ್ನೂ ಕೇಳುತ್ತೇವೆ, ಇದರಲ್ಲಿ ಧರ್ಮ ಹಾಗೂ ಅಧರ್ಮ ಎರಡನ್ನೂ ಕೇಳುತ್ತೇವೆ, ನಮ್ಮ ಜನರಲ್ಲಿ ಹಿಂದಿನಿಂದಲೂ ಧರ್ಮಕ್ಕೆ ಬಹಳ ಬೆಲೆ ಕೊಡುತ್ತಾ ಬಂದಿದ್ದಾರೆ. ಇದರಲ್ಲಿ ನಮ್ಮ ಭಾವನೆ ಒಂದು ಇರಬಹುದು ಇನ್ನೊಬ್ಬರ ಭಾವನೆ ಒಂದು ರೀತಿ ಬಂದಿರಬಹುದು. ನನ್ನ ಮಿತ್ರರೆಲ್ಲರೂ ಇಲ್ಲಿ ಹೇಳುವಾಗ ಆಸ್ತಿಕ ವಾದದ ಬಗ್ಗೆನ್ನೂ ಹೇಳುತ್ತಾರೆ. ನಾಸ್ತಿಕ ವಾದದ ಬಗ್ಗೆ ಕೂಡ ಹೇಳುತ್ತಾರೆ; ಇಂದು ಧರ್ಮದ ತಳಹದಿಯ ಮೇಲೆ ನಿಂತಿರುವ ನಮ್ಮ ಹಿಂದೂ ಜನರಲ್ಲಿರುವ ಭಕ್ತಾದಿಗಳು ದೇವಸ್ಥಾನಗಳನ್ನು ಪುರಾತನ ಕಾಲದಿಂದಲೂ ಕಟ್ಟಿಸುತ್ತಾ ಬಂದಿದ್ದಾರೆ. ಇದನ್ನು ನಾವು ಇತಿಹಾಸಗಳಿಂದಲೂ ನೋಡುತ್ತಾ ಬರುತ್ತಿದ್ದೇವೆ. ಇದರಲ್ಲಿ ಮುಖ್ಯವಾಗಿ ಶಕ್ತಿ, ಯುಕ್ತಿ ಮತ್ತು ಮುಕ್ತಿ ಇವು ಮೂರೂ ಬರುತ್ತವೆ. ಆದರೆ ಈಚೆಗೆ ಬರುತ್ತಿರುವ ವೆಸ್ಟರನ್ ಎಜುಕೇಷನ್ ಫಲವಾಗಿ ಇಂದು ನಮ್ಮ ಹಿಂದೂ

(ಶ್ರೀ ಕೆ. ಎಸ್. ಶ್ರೀನಿವಾಸುಲುನಾಯ್ಡು)

ಜನರು ಪುರಾತನದಿಂದ ಬಂದಿರುವ ಈ ದೇವಸ್ಥಾನಗಳ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾರೆ ಮತ್ತು ಒಂದು ರೀತಿಯಾದ ನಾಸ್ತಿಕ ವಾದವನ್ನು ಮಾಡಲು ಹೋಗುತ್ತಿದ್ದಾರೆ, ಇದರಿಂದ ಪಾಶ್ಚಾತ್ಯರನ್ನೇ ಇಲ್ಲೂ ಅನುಕರಣೆ ಮಾಡಬೇಕೆಂದು ಹೇಳುತ್ತಾರೆ ಇದರಿಂದಾಗಿ ಇವರಿಗೆ ನಾಸ್ತಿಕ ವಾದದಲ್ಲಿ ಆಸಕ್ತಿ ಹೆಚ್ಚಾಗಿರುವಂತೆ ಕಾಣುತ್ತಿದೆ. ಸುಮಾರು ಹತ್ತು ಸಾವಿರ ವರ್ಷಗಳಿಗಿಂತಲೂ ಹಿಂದಿನಿಂದ ಬಂದಿರುವ ಹಿಂದೂ ಧರ್ಮವನ್ನು ನಮ್ಮ ಹಿಂದೂ ಜನಗಳು ಅರಿತುಕೊಂಡು ಇದರಲ್ಲಿ ಆಸಕ್ತಿ ವಹಿಸಬೇಕು, ಇದರಲ್ಲಿ ಆಸ್ತಿಕ ವಾದ ಹಾಗೂ ನಾಸ್ತಿಕ ವಾದ ಎಂದು ಎರಡು ಮುಖಗಳಿವೆ, ಆದರೆ ಇದರಲ್ಲಿ ನಂಬಿಕೆ ಬಹಳ ಮುಖ್ಯ ಹಿಂದೂ ಧರ್ಮದಲ್ಲಿ ನಮ್ಮ ಜನರಿಗೆ ಒಂದು ರೀತಿಯಾದ ವಿಶ್ವಾಸವಿತ್ತು. ಆದರೆ ಈಗ ಪಾಶ್ಚಾತ್ಯ ದೇಶಗಳಿಂದ ವಿದ್ಯಾಭ್ಯಾಸ ಪಡೆದುಕೊಂಡು ಬಂದವರು ಹಿಂದೂ ಧರ್ಮದ ಬಗ್ಗೆ ಒಂದು ರೀತಿಯಾಗಿ ನಾಸ್ತಿಕರಂತೆ ಹೇಳಲು ಹೋಗಬಾರದು. ನಮ್ಮ ದೇಶದಲ್ಲಿ ಅಧರ್ಮ ಹೆಚ್ಚಾಗುತ್ತಿರು ವುದೇ ಇದಕ್ಕೆ ಕಾರಣವಾಗಿದೆ, ಅರೀತಿಯಾಗಬಾರದು. ನದೀಮೂಲ ಋಷಿಮೂಲ ಹಾಗೂ ದೇವ ಮೂಲ ಇವುಗಳ ಬಗ್ಗೆ ವಿಚಾರಮಾಡಬಾರದು ಎಂದು ಹಿಂದಿನಿಂದಲೂ ಹೇಳುತ್ತಲಿದ್ದಾರೆ. ಇದರ ಬಗ್ಗೆ ಹೆಚ್ಚು ಹೇಳಲು ಹೋಗುವುದಿಲ್ಲ. ಇನ್ನು ಇದರಲ್ಲಿರುವ ಆರನೇ ಚಾಪ್ಟರಿನಲ್ಲಿ ಯುಟಿಲೈಸೇಷನ್ ಆಫ್ ದೇವಸ್ಥಾನ ಫಂಡ್ಸ್ ಬಗ್ಗೆ ಹೇಳಿದ್ದಾರೆ. ಇದರಲ್ಲಿ ಕೂಡ ನಮ್ಮ ಪಕ್ಕದ ಸಂಸ್ಥಾನದಲ್ಲಿ ವೆಂಕಟೇಶ್ವರ ಯೂನಿವರ್ಸಿಟಿ ಎಂದು ಏನಿದೆ ಅದನ್ನು ಅಲ್ಲಿರುವ ದೇವಸ್ಥಾನದ ಫಂಡುಗಳಿಂದ ನಡೆಸು ತ್ತಿದ್ದಾರೆ ಮತ್ತು ಬೇಕಾದ ಹಾಗೆ ಆಸ್ಪತ್ರೆಗಳು ಇನ್ನಿತರ ಅಭಿವೃದ್ಧಿ ಕೆಲಸಗಳಿಗೂ ದೇವಸ್ಥಾನದ ಹಣ ವನ್ನು ಉಪಯೋಗಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅದೇ ರೀತಿ ಇಲ್ಲೂ ಕೂಡ ಈ ದೇವಸ್ಥಾನದ ಹಣವನ್ನು ಯಾವ ರೀತಿ ಉಪಯೋಗಿಸ ಬೇಕೆಂದು ಇದರಲ್ಲಿ ಸುಮಾರು ಹತ್ತು ಹನ್ನೆರಡು ಕಾಲಂಗಳಲ್ಲಿ ವಿವರವಾಗಿ ತಿಳಿಸಿದ್ದಾರೆ. ಮೊನ್ನೆ ತಾನೆ ನಮ್ಮ ರಾಜ್ಯದ ಕಂದಾಯ ಮಂತ್ರಿಗಳು ಈಚೆಗೆ ಬಂದ ಜನಪದ ಎನ್ನುವ ಸರಕಾರದ ಪತ್ರಿಕೆಯಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು ೩೫ ಸಾವಿರಕ್ಕೂ ಹೆಚ್ಚು ದೇವಾಲಯಗಳಿವೆ ಮತ್ತು ಇದರ ಉತ್ಪತ್ತಿ ಸುಮಾರು ಹತ್ತು ಕೋಟಿಗಳಿಗೂ ಮೇಲ್ಪಟ್ಟು ಇದೆ ಮತ್ತು ಈ ದೇವಸ್ಥಾನಗಳಿಗೆ ಸೇರಿದಂತೆ ಸುಮಾರು ಆರು ಲಕ್ಷ ಎಕರೆಗಳಿಗಿಂತಲೂ ಹೆಚ್ಚು ಭೂಮಿ ಇದೆ ಎಂದು ವಿವರಗಳನ್ನು ಹೇಳಿದರು, ಇದನ್ನು ಸದುಪಯೋಗ ಮಾಡಬೇಕು ಮತ್ತು ದುರುಪಯೋಗವಾಗುವುದನ್ನು ತಪ್ಪಿಸಬೇಕೆಂದೂ ಹೇಳಿ ಎಲ್ಲ ದೇವಸ್ಥಾನಗಳ ಬಗ್ಗೆ ಅನುಕೂಲವಾಗಿರುವಂತಹ ಒಂದು ಸಮಗ್ರ ಕಾನೂನನ್ನು ಈ ದೇಶದಲ್ಲಿ ತರಬೇಕೆಂದೂ ತಿಳಿಸಿ ದ್ದಾರೆ. ಇದರಲ್ಲಿ ನಮ್ಮ ರಾಜ್ಯದಲ್ಲಿರುವ ದೊಡ್ಡ ದೇವಸ್ಥಾನಗಳು ಎಂದರೆ ಧರ್ಮಸ್ಥಳ, ನಂಜನ ಗೂಡಿನಲ್ಲಿರುವ ಶ್ರೀಕಂಠೇಶ್ವರ ದೇವಸ್ಥಾನ, ಗೋಕರ್ಣದಲ್ಲಿರುವ ದೇವಸ್ಥಾನ, ಶೃಂಗೇರಿಯಲ್ಲಿರುವ ದೇವಸ್ಥಾನ ಹೀಗೆ ನೂರಾರು ದೇವಾಲಯಗಳಿವೆ. ಇಂತಹ ದೇವಸ್ಥಾನಗಳಿಗೆ ಕಮಿಟಿಗಳೂ ಇವೆ. ಇವು ಕೆಲವು ಕಡೆ ಸರಿಯಾಗಿ ಕೆಲಸ ಮಾಡದೆ ದೇವಸ್ಥಾನದ ಹಣವನ್ನು ದುರುಪಯೋಗ ಮಾಡುತ್ತಿವೆ ಎಂದೂ ಕೇಳಿದ್ದೇವೆ. ಇದರ ಬಗ್ಗೆ ಸರಕಾರ ಗಮನ ಹರಿಸಬೇಕು, ಎಲ್ಲ ಇನ್‌ಸ್ಟಿಟ್ಯೂಷನ್‌ಗಳೂ ವೆಂಕಟೇಶ್ವರ ಯೂನಿವರ್ಸಿಟಿ ಮಾಡಿರುವಂತೆ ನಮ್ಮ ದೇಶದಲ್ಲೂ ಕೆಲಸಗಳನ್ನು ಮಾಡಬಹುದು ಮತ್ತು ದೇವಸ್ಥಾನದ ಹೆಚ್ಚುವರಿ ಹಣವನ್ನು ಸದುಪಯೋಗವಾಗುವಂತೆ ಕೆಲಸ ಮಾಡಬೇಕು ಇಂದು ನಮ್ಮ ರಾಜ್ಯದಲ್ಲಿ ಇವುಗಳಿಗೆ ಸೇರಿದ ಐದು ಲಕ್ಷ ಎಕರೆ ಇರಬಹುದು. ಮುಂದೆ ಇದು ಐವತ್ತು ಲಕ್ಷ ಎಕರೆ ಗಳಷ್ಟು ಆಗಬಹುದು. ಇದರಿಂದ ಹೆಚ್ಚು ಉತ್ಪತ್ತಿ ಬರುವಂತೆ ಮಾಡಿ ದೇವಾಲಯಗಳನ್ನೂ ಅಭಿವೃದ್ಧಿ ಮಾಡಬಹುದು ಮತ್ತು ಇದರ ಮೂಲಕ ಇತರ ಉಪಯೋಗವಾಗುವಂತಹ ಕೆಲಸಗಳನ್ನು ಜನರಿಗೆ ಮಾಡಿ ಕೊಡಬಹುದು, ಸಾಧ್ಯವಾದಷ್ಟು ಟೆಂಪಲ್ ಫಂಡು ದುರುಪಯೋಗವಾಗದಂತೆ ನೋಡಿ ಕೊಳ್ಳಬೇಕು. ಇದರಲ್ಲಿ ಹೇಳಿರುವಂತೆ ಆಸ್ಪತ್ರೆಗಳು, ನೀರಿನ ಸೌಲಭ್ಯಗಳು ಇನ್ನಿತರ ಸೌಕರ್ಯ ಗಳನ್ನು ಮಾಡಿಕೊಡಬೇಕು. ಇದಕ್ಕೆ ಒಂದು ಎಕ್ಸಿಕ್ಯುಟೀವ್ ಬೋರ್ಡು ಇರುತ್ತದೆ. ಹಿಂದೆ ನಮ್ಮ ರಾಜ್ಯದಲ್ಲಿ ಶ್ರೀ ಅಣ್ಣಾರಾವ್ ಎನ್ನುವವರನ್ನು ಅಡ್ಮಿನಿಸ್ಟ್ರೇಟರಾಗಿ ನೇಮಕ ಮಾಡಿದ್ದರು. ಅವರು ಟೆಂಪಲ್ ಅಡ್ಮಿನಿಸ್ಟ್ರೇಷನ್ ಇನ್ ಮೈಸೂರು ಸ್ಟೇಟ್ ಎನ್ನುವ ಒಂದು ರಿಪೋರ್ಟನ್ನು ಸರಕಾರಕ್ಕೆ ಕೊಟ್ಟಿದ್ದರು. ಇದರ ಬಗ್ಗೆ ಸರಕಾರ ಏನು ಮಾಡಿದೆ ಎನ್ನುವುದು ಇದುವರೆಗೂ ತಿಳಿದು ಬರಲಿಲ್ಲ. ಹಿಂದೂ ದೇವಾಲಯಗಳು ಇರುವುದು ಒಂದು ರೀತಿಯಾಗಿ ಪುನಃ ಪರಿವರ್ತನೆ ಮಾಡಿಕೊಳ್ಳಲು ಒಂದು ಅವಕಾಶ ನಮ್ಮ ಹಿಂದೂ ಜನರಿಗೆ ಇದೆ. ಇನ್ನು ಈ ದೇವಸ್ಥಾನಗಳಲ್ಲಿ ನಿತ್ಯಗಟ್ಟಲೆ ಪೂಜೆ ಹಾಗೂ ಹೆಚ್ಚು ಗಟ್ಟಲೆ ಪೂಜೆ ಎಂದು ಇರುತ್ತದೆ. ನಿತ್ಯಗಟ್ಟಲೆ ಪೂಜೆಗೆ ಜನ ಹೆಚ್ಚು ಇರುವುದಿಲ್ಲ. ಹೆಚ್ಚು ಗಟ್ಟಲೆ ಪೂಜೆಗಾಗಿ ಹೆಚ್ಚು ಜನ ಸೇರಿಕೊಂಡು ದೇವಸ್ಥಾನಗಳಲ್ಲಿ ಪೂಜೆಗಳನ್ನು ನಡೆಸುತ್ತಾರೆ. ಇಂತಹ ಸಮಯದಲ್ಲಿ ಜಾತ್ರೆಗಳು ಆಗುತ್ತದೆ. ಜಾತ್ರೆ ಕಾಲದಲ್ಲಿ ದೇವಸ್ಥಾನಗಳಿಗೆ ಹೆಚ್ಚುವರಿ ಉತ್ಪತ್ತಿ ಕೂಡ

ಬರುತ್ತದೆ. ನಾವು ಚುಂಚನಗಿರಿ ಜಾತ್ರೆ ಹಾಗೂ ಮಾಗಡಿ ಜಾತ್ರೆ ಇವುಗಳನ್ನು ನೋಡಿದ್ದೇವೆ. ಇಲ್ಲಿ ಕಮರ್ಷಿಯಲೇಷನ್ ಆಫ್ ಪಾಲ್ಟಿಕ್ಸ್‌ಗಿಂತ ಸ್ಪಿರಿಚ್ಯುಯಲೇಷನ್ ಆಫ್ ಪಾಲಿಕ್ಸ್ ಎಂದು ಹೇಳ ಬಹುದು. ಇದೇನೇ ಇರಲಿ ಇಲ್ಲಿ ಎಲ್ಲಮ್ಮ ದೇವಸ್ಥಾನವನ್ನು ಇನ್ನು ಸುಂದರವಾಗಿ ಮಾಡಬೇಕೆಂದು ಒಂದು ರೀತಿಯಾದ ಯೂನಿಫಾರಂ ಬಿಲ್ಲನ್ನು ತಂದಿದ್ದಾರೆ. ಇದೇ ರಾಜ್ಯದ ಎಲ್ಲ ದೇವಸ್ಥಾನಗಳಿಗೂ ಅನ್ವಯವಾಗುವಂತೆ ಒಂದೇ ರೀತಿಯಾದ ಏಕರೂಪವಾದ ಬಿಲ್ಲು ತರಬೇಕೆಂದು ಸರಕಾರದಲ್ಲಿ ಕೇಳಿ ಕೊಳ್ಳುತ್ತೇನೆ. ಉದಾಹರಣೆಗಾಗಿ ನಮ್ಮಲ್ಲಿ ಹಳೇಬೀಡು ದೇವಸ್ಥಾನ ಇದೆ. ಇದನ್ನು ಒಂದು ಶಿಲ್ಪ ಕಲಾ ಕ್ಷೇತ್ರವಾಗಿ ಮಾಡಿ ಕೆಲವರಿಗೆ ಟ್ರೇನಿಂಗು ಪಡೆಯಲು ಒಂದು ಟ್ರೇನಿಂಗು ಇನ್‌ಸ್ಟಿಟ್ಯೂಟನು ತೆರೆಯಬಹುದು.

6 P.M.

ರಾಜ್ಯದಲ್ಲಿರುವ ಎಲ್ಲಾ ದೇವಸ್ಥಾನಗಳಿಗೂ ಅನ್ವಯವಾಗುವ ಹಾಗೆ ಒಂದು ಏಕರೂಪವಾದ ಶಾಸನವನ್ನು ತಂದರೆ ಎಲ್ಲ ದೇವಸ್ಥಾನಗಳ ಆಡಳಿತವನ್ನೂ ಸುಧಾರಿಸಬಹುದು. ಇದಕ್ಕೆ ಒಂದು ತಜ್ಞರ ಸಮಿತಿಯನ್ನು ಮಾಡಿ ಏಕರೂಪವಾದ ಶಾಸನವನ್ನು ಮಾಡಬೇಕೆಂದು ನಾನು ಸೂಚನೆ ಮಾಡುತ್ತಿದ್ದೇನೆ. ನಮ್ಮಲ್ಲಿ ಪುರಾಣ ಪುಣ್ಯಕಥೆಗಳಿವೆ. ಅವುಗಳಲ್ಲಿ ಎಷ್ಟೋ ಮರೆತು ಹೋಗುತ್ತಿವೆ. ಓಲೆಗರಿಯ ಮೇಲೆ ಬರೆದಿರುತ್ತಾರೆ, ಬಂಡೆಗಳ ಮೇಲೆ ಬರೆದಿರುತ್ತಾರೆ. ಒಂದು ಟ್ರಸ್ಟ್ ಮಾಡಿ ಇಂಥ ಅಧಿಕೃತ ವಾದ ಗ್ರಂಥಗಳು ಮತ್ತು ಬರವಣಿಗೆಗಳನ್ನು ಕಾಪಾಡುವುದಕ್ಕೆ ಪ್ರಯತ್ನ ಮಾಡಬೇಕು. ದೇವಸ್ಥಾನ ಗಳ ಫಂಡನ್ನು ಈ ರೀತಿ ವಿದ್ಯಾ ಸಂಸ್ಥೆಗಳನ್ನು ನಡೆಸುವುದಕ್ಕೆ ಮತ್ತು ಜ್ಞಾನ ಸಂಪತನ್ನು ಬೆಳೆಸು ವುದಕ್ಕೆ ಉಪಯೋಗ ಮಾಡಿದರೆ ಭಕ್ತಾದಿಗಳಿಗೂ ಸಹಾಯವಾಗುವುದಲ್ಲದೆ ನಮ್ಮ ಹಿಂದೂ ಧರ್ಮವೂ ನಶಿಸಿ ಹೋಗದೆ ಇರುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯವನ್ನು ಮಾಡಿರುವಂತೆ ನಮ್ಮ ರಾಜ್ಯದಲ್ಲಿ ಕೂಡ ಮಾಡ ಬಹುದು. ಅದಕ್ಕಾಗಿಯೇ ನಾನು ಆಗಲೇ ಹೇಳಿರುವಂತೆ ಏಕರೂಪವಾದ ಮಸೂದೆಯನ್ನು ತರಬೇಕು. ಈಗ ಮಾನ್ಯ ಕಂದಾಯ ಮಂತ್ರಿಗಳು ಯಲ್ಲಮ್ಮ ದೇವಸ್ಥಾನಕ್ಕೆ ಸಂಬಂಧಪಟ್ಟ ಹಾಗೆ ಒಂದು ಮಸೂದೆಯನ್ನು ತಂದಿದ್ದಾರೆ. ಇದನ್ನು ಮಾನ್ಯ ಸದಸ್ಯರೆಲ್ಲರೂ ಒಮ್ಮನಸ್ಸಿನಿಂದ ಒಪ್ಪಿಕೊಳ್ಳಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—The House will now adjourn and meet to-morrow at 9 a.m.

The House adjourned at Five Minutes past Six of the Clock to meet again at Nine of the Clock on Saturday the 8th September 1973.